
# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ 2019




ಬಿಡಿ ಪ್ರತಿ: ರೂ.10.00



# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 36**
**ಸಂಚಿಕೆ - 09**
**ಜೂನ್ - 2019**



**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಬೇಂದ್ರೆ ನೀಡಿದ ತಿರುವು | ಮಾಸ್ಟರ್ ಹಿರಣ್ಣಯ್ಯ | 5 |
| ಭಾಷಾ ಗೊಂದಲಗಳು | ಪಾಲಹಳ್ಳಿ ವಿಶ್ವನಾಥ್ | 11 |
| ಉತ್ತರವಿಲ್ಲದ ಪ್ರಶ್ನೆ | ಸಿ.ಆರ್. ಸತ್ಯ | 14 |
| ತುಂತುರು | ದಂನಲ | 16 |
| 'ಸದಾರಮೆ ಸರದಾರ' | ಹಿರೇಮಗಳೂರು ಕಣ್ಣನ್ | 17 |
| ಬಾವಿ ಕಟ್ಟೆ ಮಾತು | ಸುಕೇಶವ | 20 |
| ವಿಳಾಸ ವಿಲಾಸ | ಅಣಕು ರಾಮನಾಥ್ | 24 |
| ಸಾಹಿತಿಯ ಕಥೆ – ವ್ಯಥೆ | ನಾಗರತ್ನ ಚಂದ್ರಶೇಖರ್ | 30 |
| ಏನಂತೀರಾ ಗೆಳತಿಯರೇ? | ಸಹನಾ ಪ್ರಸಾದ್ | 34 |
| ಹಲ್ಲಿ | ನಳಿನಿ ಸೂರ್ಯಪ್ರಕಾಶ್ | 36 |
| ವಾರ್ತಾ ಪತ್ರಿಕೆ ಮಾತ್ರ ಅಲ್ಲ | ನಂನಾಗ್ರಾಜ್ | 39 |


**ವ್ಯಂಗ್ಯಚಿತ್ರ : ಮುಖಪುಟ – ಜಿ.ಎಸ್. ನಾಗನಾಥ್**


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



''ಲೋಕಸಭೆ ಚುನಾವಣೆಯ ಮತಗಣನೆ ಮುಕ್ತಾಯ'' –ಪತ್ರಿಕೆ

**''ಸಧ್ಯ, ಮುಗೀತಲ್ಲಾ!'' ಎಂದು ಇ.ವಿ.ಎಂ.ಗಳು ನಿಟ್ಟಿಸಿರುಬಿಟ್ಟವಂತೆ!!**

★★★

ಪ್ರಜಾವಾಣಿ ಓದುಗರ ಸಂಖ್ಯೆ 77.77 ಕೋಟಿ –ಶೀರ್ಷಿಕೆ

**'ಕಿಡಿ' ಕಾಲಮ್ಮಿಗೆ ಸತತವಾಗಿ ಸಹಕರಿಸಿದ್ದಕ್ಕಾಗಿ ಅಪರಂಜಿಯ ವಂದನೆಗಳು!!**

★★★

ಯುಕ್ರೇನ್ ಅಧ್ಯಕ್ಷರಾಗಿ ಹಾಸ್ಯನಟರೊಬ್ಬರು ಚುನಾಯಿತರಾದರಂತೆ!

**ಅವರಿಗೆ ಅಪರಂಜಿಯ ಶುಭಾಶಯಗಳು!!**

★★★

''ಕಾರಿನ ಟೈರಿನಲ್ಲಿ ಕೋಟಿ ರೂಪಾಯಿ ಪತ್ತೆ'' –ಸುದ್ದಿ

**ಅಪಾದಿತರನ್ನು ರಿಟೈರ್ ಮಾಡಿಸಲೇ ಬೇಕು!!**

★★★

''ಪಾಕಿಸ್ಥಾನಕ್ಕೆ ಎಲ್ಲ ರೀತಿಯ ಬೆಂಬಲ'' –ಚೀನಾದ ಅಧ್ಯಕ್ಷರ ಹೇಳಿಕೆ

**ಹಾಗಲಕಾಯಿಗೆ ಬೇವಿನಕಾಯಿ.....!!**

★★★★

''ಸಮಾನಮನಸ್ಕರ ಸಭೆಗೆ ಆಹ್ವಾನ'' –ಕಾಂಗ್ರೆಸ್ ಸುದ್ದಿ

**'ಭಗೀರಥ ಯತ್ನ' ಎಂದರೆ ಇದೇ ಇರಬೇಕು!!**

★★★★

ಕುಕ್ಕೆ ಸುಬ್ರಮಣ್ಯ ದೇವಸ್ಥಾನಕ್ಕೆ ಎಂಭತ್ತು ಕೋಟಿ ಬೆಲೆಯ ಚಿನ್ನದ ರಥ''

–ಪತ್ರಿಕೆ

**'ಈಗಲಾದರೂ ನನ್ನ ನೆನಪುಬಂತಲ್ಲಾ' ಎಂದು ಅಪರಂಜಿ ಪಲುಕಿದಳಂತೆ!!**

★★★★

ಒಂದೂಕಾಲು ಹೆಕ್ಟೇರ್ ಕಾಡು ನಾಶ –ಅಧ್ಯಯನ ವರದಿ

**ಅರಣ್ಯರೋದನ!!?**

# ನಮ್ಮ ನಿಮ್ಮಲ್ಲಿ

**ಶಿವಕುಮಾರ್**

ಪ್ರಜಾಪ್ರಭುತ್ವ ಎಂದರೆ ಹಲವು ರಾಜಕೀಯ ಪಕ್ಷಗಳು ದೇಶದ ತಮ್ಮ ನೀಲಿನಕ್ಷೆಗಳನ್ನು ಜನತೆಯ ಮುಂದಿಟ್ಟು ಅವುಗಳ ಪರ ವಸ್ತು ನಿಷ್ಠೆಯಿಂದ ವಾದಿಸಿ ಜನರನ್ನು ತಮ್ಮ ವಿಚಾರಧಾರೆಯತ್ತ ಸೆಳೆದು ಅವರ ಸಹಾಯದಿಂದ ದೇಶವನ್ನಾಳುವ ಒಂದು ಪ್ರಕ್ರಿಯೆ. ಇದು ಅಷ್ಟು ಸುಲಭದ ಮಾತಲ್ಲ. ನಿಷ್ಠ ಸಮರ್ಥ ರಾಜಕಾರಣಿಗಳಿಲ್ಲದೆ ಇಂತಹ ಪಕ್ಷಗಳು ಅಸ್ತಿತ್ವಕ್ಕೆ ಬರುವ ಸಂಭವವೇ ಇರದು. ಪ್ರಸಕ್ತ ಸರ್ಕಾರದ ಕಳೆದ ಐದು ವರ್ಷಗಳ ಸಾಧನೆಯನ್ನು (ಅದರಲ್ಲಿ ಎಷ್ಟೇ ಕೊರತೆಗಳಿದ್ದರೂ) ನೋಡಿ ನಾಡಿನ ಪ್ರಜೆಗಳು ಈ ಸರ್ಕಾರಕ್ಕೆ ಇನ್ನೊಂದು ಅವಕಾಶವನ್ನು ಕೊಡಲು ನಿರ್ಧರಿಸಿದ್ದಾರೆ. ನಾಡಿನ ಯುವ ಜನತೆ ತಮಗೆ ಮುಖ್ಯವಾದ ವಿಷಯಗಳಾದ ಉದ್ಯೋಗಾವಕಾಶ, ಆರ್ಥಿಕ ಪ್ರಗತಿ ಇವುಗಳನ್ನು ಸಮರ್ಥವಾಗಿ ನಿಭಾಯಿಸಲು ಈ ಸರ್ಕಾರದ ಮೇಲೆ ನಂಬಿಕೆಯನ್ನಿರಿಸಿ ಮತ ಚಲಾಯಿಸಿದ್ದಾರೆ. ಯಾವ ಸರ್ಕಾರಕ್ಕೇ ಆಗಲಿ, ಅಭೂತಪೂರ್ವ ಬಹುಮತವಿದ್ದರೆ ಕಾರ್ಯ ನಿರ್ವಹಣೆ ಸುಗಮ ಎಂಬುದು ನಿಜ. ಆದರೆ ಇಂತಹ ಬಹುಮತ ಎರಡು ಅಲಗುಗಳ ಕತ್ತಿಯಂತೆ. ಜನಪರ ಯೋಜನೆಗಳನ್ನು ಜಾರಿಗೆ ತರಲು ಬಹುಮತ ಸಹಾಯಕವಾಗುವಂತೆಯೇ, ಇಂತಹ ಬಹುಮತ ದೇಶದ ಸಂವಿಧಾನವನ್ನು ಇಷ್ಟಬಂದಂತೆ ಬದಲಿಸುವ ಸ್ವಾತಂತ್ರ್ಯವನ್ನೂ ಸಹ ದಯಪಾಲಿಸುತ್ತದೆ. ಈ ಅಪಾಯವನ್ನು ತಡೆಯಬೇಕಾದರೆ ಸರ್ಕಾರ ಸಂಯಮದಿಂದ, ಎಲ್ಲ ಪಕ್ಷಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಮುಂದುವರಿಯಬೇಕಾಗುತ್ತದೆ. ''ಸೆಕ್ಯುಲರಿಸಂ ಮುಖವಾಡ ಹಾಕಿಕೊಂಡು ಜಾತಿ ರಾಜಕಾರಣ ಮಾಡುವ ದಿನಗಳು ಮುಗಿದವು. ನಮ್ಮ ದೇಶದಲ್ಲಿ ಈಗಿರುವುದು ಎರಡೇ ಜಾತಿ. ಒಂದು ಬಡವರು, ಎರಡನೆಯದು ಬಡವರಿಗೆ ಸಹಾಯಮಾಡುವ ಮನಸ್ಸುಳ್ಳವರು.'' ಎಂದು ಮೋದಿ ತಮ್ಮ ಭಾಷಣದಲ್ಲಿ ಹೇಳಿರುವುದು ದೇಶದ ಭವಿಷ್ಯದ ಬಗ್ಗೆ ಆಶಾಭಾವನೆಯನ್ನು ಮೂಡಿಸುತ್ತದೆ. ಮುನ್ನೂರ ಐವತ್ತಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸಿರುವ ಎನ್.ಡಿ.ಎ ಸರ್ಕಾರ ದೇಶದ ಎಲ್ಲರ ಆಶೆ ಆಕಾಂಕ್ಷೆಗಳನ್ನು ಪೂರೈಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿ ಎಂಬುದೇ ಅಪರಂಜಿಯ ಹಾರೈಕೆ.

***ಮಾಸ್ಟರ್ ಹಿರಣ್ಣಯ್ಯನವರ ಪರಿಚಯ ನನಗಾದದ್ದು, ನಾವು ಅಪರಂಜಿಯ ಹತ್ತು ವರ್ಷದ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ. ಅಂದು ವೇದಿಕೆಯ ಮೇಲೆ, ಸಿ.ಆರ್. ಸಿಂಹ, ಎಚ್.ಕೆ. ರಂಗನಾಥ್ ಅವರುಗಳೊಂದಿಗೆ ಮಾಸ್ಟರ್ ಹಿರಣ್ಣಯ್ಯನವರೂ ಉಪಸ್ಥಿತರಿದ್ದರು. ಹಿರಣ್ಣಯ್ಯನವರ ಭಾಷಣ ಶುರುವಾಗುವಾಗ ಒಂದು ಗಂಟೆಯಾಗಿತ್ತು. ಹಿಂದಿನ ಸಾಲಿನ ಹಲವರು ಊಟಕ್ಕೆ ಎದ್ದು ಹೋಗಲು ಸಜ್ಜಾಗುತ್ತಿದುದನ್ನು ನೋಡಿ ಹಿರಣ್ಣಯ್ಯನವರು, ''ಅಯ್ಯೋ, ಊಟ ಇದ್ದೇ ಇರುತ್ತೆ, ದಿನಾ ಮಾಡೋದೇ ಅದು, ನಿಮ್ಮ ಬುದ್ಧಿಯ ಹಸಿವಿಗೂ ಒಂದಷ್ಟು ಆಹಾರ ಬೇಡವೇ, ಕೂತ್ಕೊಳ್ಳಿ'' ಅಂತ ಹೇಳಿ ನಗೆಯ ಅಲೆಯನ್ನೇ ಎಬ್ಬಿಸಿದ್ದರು. ಅಪರಂಜಿಗೂ ಹಿರಣ್ಣಯ್ಯನವರಿಗೂ ಅಂದು ಪ್ರಾರಂಭವಾದ***



*. ನ್ಯಾಷನಲ್ ಕಾಲೇಜಿನ ಸಭಾಂಗಣದಲ್ಲಿ ನಾವು ಹಾಸ್ಯೋತ್ಸವವನ್ನು ಪ್ರಾರಂಭಿಸಿದಾಗ ಪ್ರತಿ ವರ್ಷವೂ ತಪ್ಪದೇ ನಮ್ಮೊಡನಿರುತ್ತಿದ್ದ ನಗೆಗಾರರೆಂದರೆ ಮಾಸ್ಟರ್ ಹಿರಣ್ಣಯ್ಯ. ಅವರ ಮಾತುಕತೆಯಲ್ಲಿ ಹಾಸ್ಯ ಸಹಜವಾಗಿ ಬೆರೆತಿರುತ್ತಿತ್ತು. ಅವರು ಇಂದು ನಮ್ಮನ್ನಗಲಿರುವುದು ಕನ್ನಡ ಹಾಸ್ಯಲೋಕಕ್ಕೆ ತುಂಬಲಾರದ ನಷ್ಟವೆಂದರೆ ಆ ಮಾತು ಖಂಡಿತ ಅತಿಶಯೋಕ್ತಿಯಲ್ಲ. ಅಗಲಿದ ಹಿರಿಯರಿಗೆ ಶ್ರದ್ಧಾಂಜಲಿಯ ರೂಪದಲ್ಲಿ ಹಿರೇಮಗಳೂರು ಕಣ್ಣನ್ ಬರೆದಿರುವ ಲೇಖನವನ್ನೂ ಮತ್ತು ರಾಘವೇಂದ್ರ ಭಟ್ಟ ಅವರ ಸಂಗ್ರಹದಿಂದ ಬೇಂದ್ರೆ ಅವರೊಂದಿಗಿನ ಒಡನಾಟದ ಬಗ್ಗೆ ಮಾಸ್ಟರ್ ಹಿರಣ್ಣಯ್ಯ ಅವರ ಲೇಖನವನ್ನೂ ಈ ಸಂಚಿಕೆಯಲ್ಲಿ ನೀಡಿದ್ದೇವೆ. ಹಿರಣ್ಣಯ್ಯನವರು ಈಗ ಎಲ್ಲೇ ಇರಲಿ ಅವರ ಸುತ್ತಮುತ್ತ ನಗೆಯ ಅಲೆಗಳು ಹಬ್ಬುತ್ತಿರುವುದಂತೂ ಖಚಿತ. ಭಗವಂತ ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.* ■

## ನುಡಿಮುತ್ತು

ನಾವು ಹೂವಿನ ಮೇಲೆ ಮಲಗಿದರೆ ಅದು ನಮ್ಮ ಮೊದಲ ರಾತ್ರಿ. ಹೂವೇ ನಮ್ಮ ಮೇಲೆ ಮಲಗಿದರೆ ಅದು ನಮ್ಮ ಕಡೆ ರಾತ್ರಿ.

***

ನಿಮ್ಮನ್ನು ಬದಲಾಯಿಸುವ ಪ್ರಭಾವಶಾಲೀ ವ್ಯಕ್ತಿಯೊಬ್ಬನನ್ನು ನೀವು ಹುಡುಕುತ್ತಿದ್ದರೆ ಒಮ್ಮೆ ಕನ್ನಡಿಯನ್ನು ನೋಡಿ.

***

ನಾವು ಬರುವುದು ಒಬ್ಬರೇ ಹೋಗುವುದು ಒಬ್ಬರೇ ಆದರೆ ನಮ್ಮ ಒಳ್ಳೆಯ ನಡವಳಿಕೆಗಳಿಂದ ನಾವು ಇರವಷ್ಟು ದಿನದ ಒಂಟಿತನವನ್ನು ಬದಲಾಯಿಸಬಹುದು.

***

ಬೀಜ ಮೊಳಕೆಯೊಡೆದು ಗಿಡವಾಗುವಾಗ ಸದ್ದು ಮಾಡುವುದಿಲ್ಲ. ಆದರೆ ಬೆಳೆದ ಮರ ಕೆಳಗೆ ಬೀಳುವಾಗ ಸದ್ದು ಮಾಡುತ್ತದೆ. ಬೆಳವಣಿಗೆಗೆ ಶಬ್ದವಿಲ್ಲ, ಆದರೆ ನಾಶಕ್ಕೆ ಶಬ್ದವಿದೆ. ಅದಕ್ಕೇ ನಿಶ್ಶಬ್ದವಾಗಿ ಬೆಳೆಯಿರಿ.

# ನನ್ನ ಬದುಕಿನ ಭಾಷೆಗೆ ಬೇಂದ್ರೆ ನೀಡಿದ ತಿರುವು.

**ಮಾಸ್ಟರ್ ಹಿರಣ್ಣಯ್ಯ**

*(ಲೇಖನ ಸಂಗ್ರಹ: ಶ್ರೀ ರಾಘವೇಂದ್ರ ಭಟ್ಟ)*

1964–ಹುಬ್ಬಳ್ಳಿ ಮೊಕ್ಕಾಂ. ಆ ವೇಳೆಗೆ ನಮ್ಮ 'ಲಂಚಾವತಾರ' ನಾಟಕ ಶತದಿನೋತ್ಸವದತ್ತ ಮುನ್ನಡೆಯುತ್ತಿತ್ತು. ನಮ್ಮ ಮಿತ್ರ ಮಂಡಲಿಯ ಪದ್ಧತಿಯಂತೆ, 25 ರ ರಜತ ದಿನಕ್ಕೆ ಒಬ್ಬರು, 50 ರ ಸ್ವರ್ಣ ದಿನಕ್ಕೆ ಒಬ್ಬರು, 25 ರ ವಜ್ರ ದಿನಕ್ಕೆ ಒಬ್ಬರು, ಮೇಧಾವೀ ಸಾಹಿತಿಗಳನ್ನು ನಮ್ಮ ಬೌದ್ಧಿಕ ಬೆಳವಣಿಗೆಯ ಸಾಧನೆಗೆ ಗುರುವಾಗಿ, ಮತ್ತೆ ಕೆಲವೊಮ್ಮೆ ರಾಜಕಾರಿಣಿಗಳನ್ನು – ಕಾರ್ಯಾಂಗ ಶ್ರೇಷ್ಠರನ್ನು, ನಮ್ಮ ಪ್ರಯೋಗದಲ್ಲಿ ಅವರನ್ನು ಅವರು ನೋಡಿಕ್ಕೊಳ್ಳುವ ಸಲುವಾಗಿ, ಅಧ್ಯಕ್ಷರನ್ನಾಗಿಸಿ ಸಂಭ್ರಮಿಸುತ್ತಿದ್ದೆವು. ಜೊತೆಗೆ ಆ ದಿನಗಳಂದು ನಮ್ಮ ನಿತ್ಯ 'ಅನ್ನದಾತರಿಗೆ', ಸಿಹಿ ನೀಡಿ ಸತ್ಕರಿಸುತ್ತಿದ್ದುದು, ಅವರ ನಿರಂತರ ಪ್ರೋತ್ಸಾಹವನ್ನು ಬೇಡುವುದು, ಮುಖ್ಯ ವಾಡಿಕೆಯಾಗಿತ್ತು.

ಆದರಂತೆ ಮುಂದೆ ಮುಟ್ಟಲಿರುವ 'ಲಂಚಾವತಾರ' ದ ನೂರನೇ ದಿನಕ್ಕೆ, ಅರಿವಿನ ಅಜ್ಜ ನಾಡ–ನುಡಿಯ ನೇತಾರ, ಅಂಬಿಕಾತನಯದತ್ತರನ್ನು ಆಹ್ವಾನಿಸಿ, ಅಗ್ರಪೂಜೆ ಸಲ್ಲಿಸಿ, ಅಡಿದಾವರೆಗಳಿಗೆ ಎರಗಿ, ಅವರ ಆಶೀರ್ವಾದವನ್ನು ಬೇಡುವ ನಿರ್ಧಾರ ಮಾಡಿದೆ. ಅದು ನನ್ನ ಬದುಕಿನ ಬಹು ದೊಡ್ಡ ಬಯಕೆಯೂ ಆಗಿತ್ತು. ಅಕ್ಷರಗಳಿಂದಲೇ ಅನ್ನಾರ್ಜನೆ ಮಾಡಿ ಬದುಕುತ್ತಿರುವ ನಮ್ಮ ವಂಶವಾಹಿನಿಗೆ, ಆ ಅಕ್ಷರಾಕೃತಿಯೇ ಆಗಿದ್ದ 'ಅಜ್ಜ' ನವರ ಅಮೃತವಾಣಿಯಿಂದ ಪುನೀತರಾಗುವ ಮಹದಾಸೆ ಮನದಲ್ಲಿ ಮೂಡಿತ್ತು. ಆದರೆ ಕೇವಲ ಹತ್ತು ಮೈಲಿ ದೂರದಲ್ಲೇ ಇರುವ, ಧಾರವಾಡದ ಸಾಧನಕೇರಿಯ, ಆ ಸಿದ್ಧಪುರುಷನ ಸಂದರ್ಶನ ಮಾಡುವುದಾದರೂ ಹೇಗೆ? ಕರೆಯಬಹುದೆ? ಬಂದಾರೆಯೇ? ಅಗಾಧ ಪರ್ವತವೊಂದು, ಈ ತೃಣಮಾತ್ರನ ಒಣಕೂಗಿಗೆ ಮಾರ್ದನಿಸಿ 'ಹೂಂ' ಎಂದೀತೇ? ಅವರ ಸಾಮೀಪ್ಯಕ್ಕೆ, ಸೀದಾ ಹಾದಿ ಇದೆಯೋ? ಇಲ್ಲಾ ಅವರ ಆತ್ಮೀಯರ ನೆರವು ಪಡೆದರೆ ಲೇಸೋ? ಇವೆಲ್ಲವನ್ನೂ ದಾಟಿ ಭೇಟಿಯಾದರೆ, ಏನೆಂದು ಕರೆಯಲಿ? ಮಾತನ್ನು ಹೇಗೆ ಆರಂಭಿಸಲಿ? ದೇವೀ ಪ್ರಸಾದಿತ ಸಾಧನಾಂಗವಾದ, ನನ್ನ ನಾಲಿಗೆ ಅವರೆದುರು ಕೈಕೊಟ್ಟು, ಒಣಗಿ ನಿಂತರೆ ಗತಿ ಏನು? ಹೀಗೆ ನೂರೆಂಟು ಪ್ರಶ್ನೆಗಳು ನನ್ನನ್ನು ಕಾಡುತ್ತಿತ್ತು. ಪ್ರಯೋಗದ ಶತದಿನವೂ ಸಮೀಪಿಸುತ್ತಿತ್ತು. ಅಂದುಕೊಂಡ ಅಸಾಧ್ಯಗಳನ್ನೆಲ್ಲಾ ಸಾಧ್ಯವನ್ನಾಗಿಸಿಕ್ಕೊಂಡು, ಮುಂದೋಡುತ್ತಿದ್ದ ನನಗೆ, ಇದೊಂದು ಮಹಾಪರೀಕ್ಷೆಯಾಗಿಯೇ ಕಂಡಿತು.

ಈ ಮಧ್ಯೆ ನಮ್ಮ 'ಲಂಚಾವತಾರ' ವನ್ನು ಧಾರವಾಡದ ಸಹಸ್ರಾರು ರಸಿಕರು ಬಂದು, ನೋಡಿ, ಆನಂದಿಸಿ ಹೋಗಿದ್ದರು. ಅವರಲ್ಲಿ ಅನೇಕರು ನಾಟಕದಿಂದ ತಮಗಾದ ಪರಿಣಾಮವನ್ನು, ಹಿಡಿದಿಡಲಾರದೆ ನಮ್ಮ ಬಣ್ಣದ ಮನೆಗೆ ನುಗ್ಗಿ ಪ್ರಶಂಶಿಸಿ, ಪರಿಚಯವನ್ನೂ ಮಾಡಿಕೊಟ್ಟು ಹೋಗುತ್ತಿದ್ದರು. ಕ್ಷಣಕಾಲ ನಾನು ಅವರ ನೆನಪುಗಳನ್ನು ಮಾಡಿಕ್ಕೊಳ್ಳುತ್ತಾ, ಅವರಲ್ಲಿ ಯಾರ ನೆರವು, ನನ್ನನ್ನು ಆ ಅರಿವಿನ ದೇವತೆಯ ಬಳಿಗೆ ಕರೆದೊಯ್ಯಬಲ್ಲುದು ಎಂದು ಯೋಚಿಸಿದೆ. ಆಗ ನನಗೆ ಹೊಳೆದ ಮಹನೀಯರೇ ಧಾರವಾಡದ ಶ್ರೀ'ಎನ್ಕೆ' (ಖ್ಯಾತ ಸಾಹಿತಿ, ಬರಹಗಾರರು, ರಂಗತಜ್ಞರು ಆದ ಎನ್. ಕುಲಕರ್ಣಿಯವರು). ಅವರು ನೀಡಿದ್ದ ವಿಳಾಸವನ್ನು ಹಿಡಿದು, ಅವರ ಮನೆಗೆ ಹೊಕ್ಕೆ. ಆಕಸ್ಮಿಕವಾಗಿ ಅವರ ಕಣ್ಮುಂದೆ ನಿಂತಿದ್ದ ನನ್ನನ್ನು

ಕಂಡು, ಶ್ರೀಯುತರು ಕ್ಷಣಕಾಲ ಸ್ಥಂಭೀಭೂತರಾದರು. ಕಾರಣ ಅವರೆಂದೂ ನಿರೀಕ್ಷಿಸದಿದ್ದ ಘಟನೆ ಅದಾಗಿತ್ತು. ನನಗೂ ಅದೇ ಅನುಭವ. ಆ ನಮ್ಮಿಬ್ಬರ ಸ್ಥಿತಿಯ ಅರ್ಥ ಮಾತ್ರ ಬೇರೆಯೇ ಆಗಿತ್ತು. ಭಾವನೆಗಳಲ್ಲಿ ಅಜಗಜಾಂತರ ವ್ಯತ್ಯಯವಿತ್ತು. ನನ್ನ ಮಟ್ಟಿಗೆ ಹೇಳುವುದಾದರೆ, ಅಂದಿನ 'ವೃತ್ತಿ' ನಾಟಕದವರು, ಹಗಲಿನಲ್ಲಿ ಪುರಪ್ರವೇಶ, ಬುದ್ಧಿಜೀವಿಗಳೊಂದಿಗೆ ಸಹವಾಸ, ವಿಚಾರಶೀಲರೊಂದಿಗಿನ ವ್ಯವಹಾರ, ಗೃಹಸ್ಥರ ಮನೆಯ ಗೃಹಪ್ರವೇಶ, ಸತ್ಪಾತ್ರರೊಂದಿಗೆ ಸಮಾವೇಶ, ಇವೆಲ್ಲವನ್ನೂ, ಕನಸಿನಲ್ಲಿ ಕಂಡರೂ ಕಿಠಾರ್ ಎಂದು ಕಿರಿಚಿಕ್ಕೊಳ್ಳುತ್ತಿದ್ದರೆಂಬುದು ಲೋಕ ಸತ್ಯವಾಗಿತ್ತು. ಆದರೆ ಅದಕ್ಕೆ ಅಪವಾದವಾಗಿದ್ದ ಕೆಲವೇ ಕಂಪನಿಗಳಲ್ಲಿ, ನಮ್ಮದೂ ಒಂದಾಗಿತ್ತು. ಅದೇ ನನ್ನೀ ಸಾಹಸಕ್ಕೆ ಮುಂದಡಿಯಾಗಿತ್ತು-ಬೆನ್ನೆಲಬಾಗಿತ್ತು. ಇನ್ನು ಎಕ್ಕೆ ಯವರ ಭಾವನೆ, ತನ್ನ ವಾಗ್ಬಾಣಗಳಿಂದ ನೆರದ ಜನ ಸಮೂಹವನ್ನು ದಿಗ್ಭ್ರಮೆಗೊಳಿಸುತ್ತಾ, ಸಮಾಜಕ್ಕೆ ದಾರಿ ದೀಪವಾಗಿ, ಸರ್ಕಾರಕ್ಕೆ ಬೆದರು ಬೊಂಬೆಯಾಗಿರುವ, ಈ ವಾಮನಮೂರ್ತಿ ಹೇಳದೇ-ಕೇಳದೇ ನನ್ನ ಮನೆಯ ಮುಂದೆ ಕೈಜೋಡಿಸಿ ನಿಂತಿರುವ ಕಾರಣವೇನಿರಬಹುದೆಂಬುದಾಗಿತ್ತು. ಈ ಭಾವವನ್ನು, ಆಶ್ಚರ್ಯದಿಂದ ಅರಸುತಿದ್ದ ಅವರ ಕಣ್ಣುಗಳಲ್ಲೇ ಕಂಡೆ. ಅಲ್ಲದೆ 'ಒಳಗೆ ಬನ್ನಿ' ಎಂದು ಕರೆಯಲೂ ಮರೆತು ನಿಂತಿದ್ದ ಅವರ ಸ್ಥಿತಿಯೂ, 'ಒಳಗೆ ಬರಲೇ' ಎಂದು ಕೇಳಲೂ ಆಗದೆ ನಿಂತಿದ್ದ ನನ್ನ ಸ್ಥಿತಿಯೂ, ನಮ್ಮ-ನಮ್ಮ ಭಾವನೆಗಳಿಗೆ ಕನ್ನಡಿ ಹಿಡಿದಂತಿತ್ತು. ಇಂಥಾ ಪರಿಸ್ಥಿತಿಯಲ್ಲಿ ಒಳಗಿನಿಂದ ಅನ್ನಪೂರ್ಣೆಯ ಆಹ್ವಾನ, 'ಅದ್ಯಾಕ, ಬಂದೋರ್ನ ಒಳಕ್ಕೂ ಕರೀದ್ಹಾಂಗೆ, ಗರಬಡದೋರಂತೆ ನಿಂತೀರೀ. ನೀವು ಒಳಾಕ್ಕೆ ಬರ್‍ರಲ್ಲಾ' ಕೇಳಿ ಬಂತು. ಆಗಲೇ ನಮ್ಮಿಬ್ಬರಿಗೂ ಎಚ್ಚರ.

ಉಭಯಕುಶಲೋಪರಿ, ಆತಿಥ್ಯ ಸ್ವೀಕಾರಾನಂತರ ಎಕ್ಕೆ, ನನ್ನಾಗಮನದ ಕಾರಣವನ್ನು ಕೇಳಿದರು. 'ಹೇಳ್ರಲಾ ನನ್ನಿಂದಾ ಏನು ಸೇವಾ ಆಗಬೇಕು?' ನಾನು ನನ್ನ ಬಹುಕಾಲದ ಆಸೆಯನ್ನೂ, ಸಧ್ಯದ ಬೇಡಿಕೆಯನ್ನೂ ವಿನಮ್ರನಾಗಿ ಅವರ ಮುಂದೆ ಇಟ್ಟೆ. ಅತ್ಯಂತ ನಿರ್ವಿಕಾರ ತೆಳು ನಗೆಯೊಂದನ್ನು ಬೀರಿ, ಎಕ್ಕೆ ಅಂದರು, 'ನೋಡ್ರೀ ಋಣಾನುಬಂಧ ಹ್ಯಾಂಗೆ ಕೂಡೈತೀಂತಾ. ಮೊನ್ನೆ ತಾನೆ ಅಜ್ಜ ನನ್ನ ಕೂಟೆ ಅಂದ್ರಪಾ, ಏ ಎಕ್ಕೆ ಹುಬ್ಬ್ಯಾಗೆ ಅವಂ ಯಾರೋ ನಾಟಕದಾವಾಂ, ಸರ್ಕಾರಕೆ-ಸಮಾಜಕೆ ಕೈತೊಳಕೊಂಡು ಬೆನ್ನು ಹತ್ಯಾನಂತೆ, ತುಡುಗ ಮಂದೀ ತಲೀನಾ, ಮೊಸರ್ಗಡಿಗೆ ಮಾಡ್ಯಾನಂತೆ. ನೀ ನೋಡೀಯೇನು ಅವನ ನಾಟಕಾನಾ?' ಅಂದ್ರಪಾ. ನಾನು ''ನೋಡೀನ್ರೀ ಎರಡು ಕಿತ, ಅದೇನು ಭಂಡ ಬಿದ್ದಾನಂತೀರಿ. ಕೇಳಿ ಸಹಿಸಾಕಾಗದ ಕೆಲವು ಕೆಟ್ಟಮಂದೀ, ದಿನಕ್ಕೊಂದು ಗಲಾಟೆ ಹಚ್ಯಾರಂತೆ. ಅವಂ ಓಸೂ ನಿಭಾಯಿಸಿಕ್ಕೊಂಡು ನಡಸ್ಯಾನ ನೋಡ್ರೀ ಅಜ್ಜಾ. ಕುಂತು ಕೇಳೋ ನಮಗೇ ಒಮ್ಮೊಮ್ಮೆ ಘಾಬರಿಯಾಕಾತೀ, ಯಾರೇನು ಮಾಡ್ತಾರೋಂತಾ, ಹಾಂಗ ಝಾಡಸ್ತಾನ್ರೀ'' ಅಂದದ್ದಕ್ಕೆ, ಅಜ್ಜ 'ಹಾಂಗಾರ ಒಮ್ಮೆ ನೋಡ್ಲೇಬೇಕಾತಪಾ. ನೀನೇ ಕೈಯಾಗ ಕರಕೊಂಡು ಹೋಗು ಮತ್ತೆ' ಅಂದಿದ್ರು. ನಾ ''ಆತೂ ಅನ್ನಿಲ್ಕೂ, ಇವತ್ತು ನೀವು ಕರೀಲಿಕ್ಕೆ ಬಂದಿರೋದಕ್ಕೂ, ಹ್ಯಾಂಗದೆ ನೋಡ್ರಲ. ಅಜ್ಜನ ಆಶಾನೂ ತೀರ್ತು, ನಿಮ್ಮ ಬಯಕೇನೂ ಈಡೇರ್ತು. ನಡ್ರಿ ಹೋಗೂಣು,. ಅಜ್ಜನ್ನ ನೋಡ್ಲಿಕ್ಕೆ'' ಎಂದು ಎದ್ದರು.

ಕನ್ನಡದ ನುಡಿ ದೇಗುಲದ ಮುಂದೆ ನನ್ನ ಕಾರು ನಿಂತಿತು. ಎಕ್ಕೆ ಇಳಿದು ಹೋಗಿ ಗರ್ಭಗುಡಿಯ ಗಂಟೆ ಬಾರಿಸಿದರು. ನಿಂತಿದ್ದ ನನ್ನ ಕೈ-ಕಾಲುಗಳು ಕಂಪಿಸತೊಡಗಿತು.

ಕಣ್ಣುಗಳು, ಇನ್ನೇನು ಬಂದು ನಿಲ್ಲುವ ಬ್ರಹ್ಮನ ರಾಣಿಯ ಔರಸ ಪುತ್ರನನ್ನು ತುಂಬಿಟ್ಟುಕ್ಕೊಳ್ಳುವ ಕಾತುರತೆಯಿಂದ, ತೆರೆದುಕೊಂಡು ಕಾಯುತ್ತಿತ್ತು. ನುಡಿಯನ್ನು ಅರಸುತ್ತಾ ನಾಲಿಗೆ, ನುಂಗಲು ದ್ರವವೂ ಇಲ್ಲದೆ ಒಣಗಿ ಹೋಗಿತ್ತು. ಚಿತ್ತವು ಮುಂದಿನ ಭೇಟಿಯ ಮಹಾನುಭಾವನ ಭವ್ಯಚಿತ್ರವನ್ನು ಬಿಡಿಸ ತೊಡಗಿತ್ತು. ಶ್ರಿಮಾತಾತನಯನ ಆಕೃತಿಯಲ್ಲಿ ಕಾಣಬಹುದಾದ ಆಕರ್ಷಕ ಉಡಿಗೆ, ಬಂದು ನಿಲ್ಲುವ ಬಿಂಕ-ಬಿಗುಮಾನಗಳ ಬಿಗಿ ನಿಲುವು, ಹೊರಬರುವ, ಹೃದಯ ಬಿರಿಯುವಂಥಾ, ಗಡಸು, ಗಂಡು ಧ್ವನಿಯ ಘರ್ಜನೆ: ಈ ಎಲ್ಲವುಗಳ ಕಲ್ಪನೆಯಲ್ಲಿದ್ದ ನನಗೆ, ಕಂಡದ್ದು ಮಾತ್ರ ನೂರಕ್ಕೆ ನೂರು ತದ್ವಿರುದ್ಧದ ದರ್ಶನ, ಕೇಳಿದ್ದು ಮಾತೃಮಮತಾ ಪೂರಿತ ಮೃದು ಮಧುರ ಆಹ್ವಾನ, ಸೊಂಟಕ್ಕೆ ಬಿಗಿದಿದ್ದ ತುಂಡು ಪಂಚೆ, ಮೇಲೊಂದು ಮಾಮೂಲು ಮಲ್ಬನಿಯನ್, ಹೆಗಲ ಮೇಲೆ ಕನ್ನಡ ಕಾವ್ಯಕನ್ಯೆಯ ಉತ್ತರೀಯ, ಮಹಾನ್ ಮೇಧಾಶಕ್ತಿಯ ಮೆದುಳನ್ನು ಹೊತ್ತ ತಲೆಯ ಮೇಲೆ, ಹಿಡಿಯಷ್ಟು ಮಾತ್ರ ಕೆದರಿದ ಕೂದಲು, ಕಣ್ಣಾಳದಲ್ಲಿ ನಿಷ್ಕಲ್ಮಶ ಪ್ರೇಮದ ಹೊಳಪು, ಮುಖದ ಮೇಲೆ ಮಹಾಮಾತೆಯ ಪೂರ್ಣಾನುಗ್ರಹದ ಪ್ರತಿಬಿಂಬ, ತುಟಿಗಳ ಮೇಲೆ ತೆಳುವಾದ-ತಿಳಿಯಾದ ಮೃದು ಮಂದಹಾಸ, ಆಹ್ವಾನಿಸಿದ ಮಾತುಗಳಲ್ಲಿ, ಮನೆಯೊಳಕ್ಕಲ್ಲಾ, ಮನದೊಳಕ್ಕೇ ಕರೆಯುತ್ತಿರುವ ರಸಭಾವ ಗಂಗೆ. ಇವೆಲ್ಲದರ ಪರಿಣಾಮವೋ ಎಂಬಂತೆ ಅಜ್ಜನ ತೆಕ್ಕೆಗೆ ಮೊಮ್ಮೊಗ ಜೋತು ಬೀಳುವಂತೆ, ಜನ್ಮ ಜನ್ಮಾಂತರಗಳ ಅನುಬಂಧವೋ ಎಂಬ ಭಾವನೆಯಿಂದ, ನಾನವರ ಕಾಲಿಗೆ ಎರಗಿದೆ. ಅದೆಂಥಾ ಅನುಭವ? ಅದೇನು ಬ್ರಹ್ಮಾನಂದದ ಸ್ಥಿತಿ? ಅದರಿಂದ ಹೊರಬರಲೇ ಆಗದಂಥಾ ಮನೋಸ್ಥಿತಿ. ಅದೆಷ್ಟು ಹೊತ್ತು ಕಳೆದಿತ್ತೋ ಕಾಣೆ. ವೀಣಾಪಾಣಿಯ ಅಮೃತಹಸ್ತದ ಸ್ಪರ್ಶಾನುಭವ, ಅಜ್ಜ, ನನ್ನನ್ನು ಹಿಡಿದೆತ್ತಿ ಅಪ್ಪಿ ಒಳಗೆ ಕರೆದೊಯ್ದರು. ಎನ್ಕೆ ನನ್ನ ಪರಿಚಯದೊಂದಿಗೆ, ಬಂದ ಉದ್ದಿಶ್ಯವನ್ನೂ ಸಂಕ್ಷಿಪ್ತವಾಗಿ ವಿವರಿಸಿದರು. ಅಜ್ಜ 'ನೋಡಪಾ ಇದಕಂತಾರ ದೈವ ಸಂಕಲ್ಪಾಂತ. ಬರಬೇಕೂ ಅನ್ನೋ ಆಶಾ ನಂಗಿತ್ತು, ಇನ್ನು ನೀನು ಮುದ್ದಾಂ ಬಂದು ಕರೀತಿದೀ, ಅಂದಮ್ಯಾಗೆ ಮುಗೀತು ಬಿಡು. ನನ್ನ ಆಶಾ-ಅನಿವಾರ್ಯವೇ ಆತು ನೋಡು. ಹೇಳು, ಎಂದು ಬರಬೇಕೂಂತ. ಆದರೆ ಬರೋಮುಂದು ನಂದೊಂದು ಕಂಡೀಷನ್ ಐತೆ ನೋಡು. ಯಾಕಂದ್ರೆ ನನ್ನ ಕಂಡೀಷನ್ನೇ ಹಂಗೈತಿ ನೋಡಪಾ. ನನ್ನ ಕೂಟೆ ಕಾರು ಪಾರು ಇಲ್ಲ ನೋಡಪ. ಆ ಗಾಡಿ ನಿಂದೇ ಅನ್ನೋತೀನಿ. ನನ್ನ ಹುಬ್ಬೀಗೆ ಕರಕೊಂಡು ಹೋಗೋದೂ, ಹೊಳ್ಳಿ ಕರಕೊಂಬಂದು ಮನಿ ಮುಟ್ಸೋದು, ನಿಂದೆ ಜವಾಬ್ದಾರಿ. ಏನಂತೀ?' 'ಅದ್ನ ಜವಾಬ್ದಾರಿ ಅನ್ನ ಬೇಡ್ರೀ ಅಜ್ಜ, ಅದು ನನ್ನ ಜನ್ಮ ಜನ್ಮಾಂತರಗಳ ಅದೃಷ್ಟ ಅನ್ರಿ' ಅಂದೆ.

ಗೊತ್ತಾಗಿದ್ದ ದಿನದಂದು ಅಜ್ಜನ ಆಗಮನ, ನಾಟಕಾವಲೋಕನ, ಅಂತ್ಯದಲ್ಲಿ ಅವರ ಆಶೀರ್ವಾದದ ನುಡಿಮುತ್ತು, ಎಲ್ಲವೂ ಸಾಂಗೋಪಾಂಗವಾಗಿ ನಡೆಯಿತು. ಜೊತೆಗೆ, ಎಂದಿನಂತೆ ಅಂದೂ ಸಹ, ಪ್ರೇಕ್ಷಕವರ್ಗದಲ್ಲಿನ ಕೆಲವು ಅತೃಪ್ತ, ಸತ್ಯಸ್ವೀಕಾರದ ಮನೋಧರ್ಮವಿಲ್ಲದ, ಸಮಾಜ ಕಂಟಕರ, ಸಿಟ್ಟು ಹೊರಹೊಮ್ಮಿದ್ದು, ಅದಕ್ಕೆ ರಂಗದ ಮೇಲಿಂದಲೇ, ಅಷ್ಟೇ ತೀಕ್ಷ್ಣವಾದ ನನ್ನ ಪ್ರತಿಕ್ರಿಯೆ ಎಲ್ಲವೂ ಅಜ್ಜನ ಅಧ್ಯಕ್ಷತೆಯಲ್ಲೇ ನಡೆದಿತ್ತು. ಎಲ್ಲವನ್ನೂ ಸಾವಧಾನ ಚಿತ್ತರಾಗಿ ಗಮನಿಸಿದ ಅಜ್ಜನವರು, ತಮ್ಮ ನಾಟಕಾಂತ್ಯದ ಹಿತನುಡಿಗಳಲ್ಲಿ, ಅದರ ಬಗ್ಗೆ ಏನೊಂದನ್ನೂ ಪ್ರಸ್ತಾಪಿಸದೇ ಇದ್ದುದು, ನನಗೆ ಆಶ್ಚರ್ಯವನ್ನು ಮಾತ್ರವಲ್ಲಾ, ಆತಂಕವನ್ನೂ ಮೂಡಿಸಿತು. ಮುಂದೇನು ಕಾದಿದೆಯೋ ಎಂಬ ಭಯವನ್ನೂ

ಹುಟ್ಟಿಸಿತು.

ಅಜ್ಜನವರ ಕಂಡೀಷನ್ನಂತೆ, ಧಾರವಾಡದಿಂದ ಕಾರಲ್ಲಿ ಕರೆತಂದಿದ್ದ ನಾನೇ, ನಾಟಕಾನಂತರ ವಾಪಸ್ ಕರೆದುಕ್ಕೊಂಡು ಹೊರಟೆ. ಅಂದು ಭಾನುವಾರವಾದ್ದರಿಂದ ರಾತ್ರಿ 10.30ಕ್ಕೆ ನಾಟಕ ಮುಗಿದಿತ್ತು. ನಾವು ಸಾಧನಕೇರಿ ಮುಟ್ಟುವ ವೇಳೆಗೆ 11 ಘಂಟೆ. ಮನೆಯವರೆಲ್ಲಾ ಇಳಿದ ಮೇಲೆ, ಅಜ್ಜ ನನ್ನನ್ನು ಕಾರಿನಲ್ಲೇ, ಅವರ ಪಕ್ಕದಲ್ಲೇ, ಕೂರುವಂತೆ ಹೇಳಿದರು. 'ನಿನ್ನ ಕುಟೆ ಸ್ವಲ್ಪ ಮಾತಾಡೋದೈತೆ ಕುಂದ್ರು' ಅಂದ, ಅವರ ವಾಣಿಯಲ್ಲಿನ ಅಂತರಾರ್ಥ ಅರಿವಾಗಿ, ಕ್ಷಣಕಾಲ ಅಧೀರನಾದೆ. ಅದನ್ನು ಅರಿತ ಅಜ್ಜ 'ಅಂಜಬೇಡಾ, ನಿನಗೆ ತುಸು ಬುದ್ಧಿ ಹೇಳೋದೈತಿ. ಆ ಹಕ್ಕು ನನಗೈತಿ ಅನ್ಕೊಂಡೇ ಕರೀತಿರೋದು. ಏನಂತಿ?' ಆ ಮಾತಿನ ಹಿಂದೆ ಅಡಗಿದ್ದ ವಾತ್ಸಲ್ಯದ ವಾಸನೆ ಹಿಡಿದ ನನಗೆ, ಇಂಥಾ ಅಪೂರ್ವ ಸಮಯದ ಮೌಲ್ಯ ತಿಳಿದು, ಕೂಡಲೇ ಅವರ ಸಮೀಪ ಕೂತೆ. ಮಹಾ ನಿಧಿಯೊಂದನ್ನು ಮಡಿಲಲ್ಲಿ ತುಂಬಿಕ್ಕೊಳ್ಳುವ ಸುಸಮಯ ಅದಾಗಿತ್ತು. ಎಷ್ಟು ಜನರಿಗೆ ಈ ಭಾಗ್ಯ ಇದ್ದೀತು. ಅಂದು ಆ ಕಾರಿನ ಗುರುಕುಲದಲ್ಲಿ, ಆದ ಗುರು ಉಪದೇಶ, ಮುಂದೆ ನನ್ನ ಬದುಕನ್ನೇ ಬದಲಿಸಿ ಹದಗೊಳಿಸಿತು. ನನ್ನ ಭಾಷೆಗೇ, ಒಂದು ದೈವೀಕ ಸ್ವರವಿತ್ತು, ತಿರುವು ನೀಡಿ, ರಕ್ಷಾಕವಚವೊದನ್ನು ತೊಡಿಸಿತು. ನನ್ನ ರಾಕ್ಷಸ ವಾಣಿಯನ್ನು, ದೇವ ವಾಣೀಯನ್ನಾಗಿ ಪರಿವರ್ತಿಸಿತು. ಇಂದೇನಾದರೂ ಮಹಾಜನತೆ ನನ್ನ ವಾಗ್ಝರಿಗೆ ಭಲೇ ಎಂದರೆ, ಅದರ ಕೀರ್ತಿ, ಅದಕ್ಕೆ ಬುನಾದಿಯನ್ನು ಹಾಕಿ ಕೊಟ್ಟ ಅಜ್ಜನವರಿಗೇ ಸಲ್ಲಬೇಕು. ಬಾಹ್ಯಲೋಕದ ಚಿಂತನೆಯ ಚಿತೆಯ ಮೇಲೆ, ಹೊರಹೊಮ್ಮಿ ಬಂದ ಅಜ್ಜ ನವರ ಉಪದೇಶಾಮೃತವು. ನನ್ನ ಅಂತರಾಳದಲ್ಲಿ ಹುದುಗಿ, ನನ್ನೊಳಗಿನ ದಾನವತ್ವವನ್ನು ದಹಿಸಿ, ಅದರ ಜಾಗದಲ್ಲಿ, ತಿಳುವಳಿಕೆಯ ತಿಳಿನೀರಿನ ಮಾನಸ ಸರೋವರವನ್ನೇ ಸೃಷ್ಟಿಸಿ ಬಿಟ್ಟಿತು. ಮನದೊಳಗೆ ಧ್ವನಿಮುದ್ರಿತವಾಗಿರುವ, ಅವರ ಮಾತುಗಳ ಪೂರ್ಣಪಾಠವನ್ನು ಹಾಗೇ ಪಾಂಗಿತವಾಗಿ ಹೇಳ ಬಲ್ಲೆನಾದರೂ, ಪ್ರಕೃತ, ಅವುಗಳ ಸಾರಸರ್ವಸ್ವವಾದ ಒಂದು ಅಮೃತ ವಾಣಿಯನ್ನು ಮಾತ್ರ ಉಲ್ಲೇಖಿಸ ಬಯಸುತ್ತೇನೆ, ಅವರದೇ ಮಾತಿನಲ್ಲಿ,

''ಅಲ್ಲಪ ತಮ್ಮಾ, ನಿನ್ನ ನಾಟಕದಾಗೆ, ಈವತ್ತು ನಾ ಕಂಡಂಥಾ ಪಲ್ಲಟ–ಉಪಟಳಗಳು, ಅವಕ್ಕೆ ನಿನ್ನ ಪ್ರತಿಕ್ರಿಯೆ, ದಿನನಿತ್ಯ ಹೀಂಗೇ ನಡೀತದಂತೆ ಹೌದೇನು?'' ಮೌನದ ನನ್ನ ಉತ್ತರ. ಮತ್ತೆ ಅವರೇ ಮುಂದುವರಿಸಿದರು. ''ಹೌದು ಅಂಥಾಗಾತು. ಅದ್ಯಾಕೆ ಹಂಗ್ ಆಕಾತಿ ಅಂತ ವಿಚಾರ ಮಾಡೀಯೇನು? ತಪ್ಪು ಎಲ್ಲೈತೀಂತಾ ಹುಡಿಕೀಯೇನು? ವಿಚಾರ ಮಾಡಿರ್ತೀ ಬಿಡು. ಕುಡುಕರು, ಅತೃಪ್ತರು, ದುಷ್ಟಬುದ್ಧಿಯೋರು, ತುಡುಗುಮಂದೀ, ಕುಡುದು ಬಂದು ಹೀಂಗೆ ಮಾಡ್ತಿರ್ತಾರೆ. ನಂದೆಲ್ಲಾ ನೆಟ್ಗೇ ಐತಿ. ಅವರೇ ಹಲ್ಕಟ್ ಮಂದಿ, ಅಂತಾ ವಿಚಾರ ಮಾಡಿರ್ತಿ ಹೌದೋ ಅಲ್ಲೋ?'' ನನ್ನ ಮನಸಲ್ಲೇ ಮೂಡಿ, ಯಾರೊಂದಿಗೂ ಆಡಿರದ, ಈ ಮಹಾಗೋಪ್ಯ ಚಿಂತನೆ, ಅಜ್ಜನಿಗೆ ಹೊಳೆದದ್ದಾದರೂ ಹೇಗೆಂದು ತಳಮಳಿಸುತ್ತಿದ್ದ ನನ್ನನ್ನು ನೋಡಿ, ನಕ್ಕು, ''ಹಾಂಗ ವಿಚಾರಮಾಡೋದು, ನಿನ್ನ ದೃಷ್ಟಿಯಿಂದ ಖರೇ ಇರಬಹುದು. ಅದು ಸಹಜ ಕೂಡಾ. ಆದರೆ ಅದು ಅರ್ಧಸತ್ಯವೂ ಅಲ್ಲ ನೋಡು. ಪೂರ್ಣಸತ್ಯ ನೀ ತಿಳೀಬೇಕಂದರೆ, ಮೊದಲು ನೀನು, ನಿನ್ನ ಆತ್ಮಸಂಶೋಧನ ಮಾಡ್ಕೋಬೇಕು ನೋಡಪಾ. ಅದೂ ಹ್ಯಾಂಗ ಅಂತೀಯಾ? ಪೂರ್ವಾಗ್ರಹ ಪೀಡೆ ಇಲ್ಲಧಾಂಗ, ನಿಷ್ಕಲ್ಮಷವಾಗಿ, ನಿನ್ನನ್ನ

ನೀನೇ ನೋಡ್ಕೊಳ್ಳೋ ಪ್ರಕ್ರಿಯೆ, ಆದಾಗಬೇಕು ನೋಡಾ. ಅದು ಕಲಾವಿದನ ಕರ್ತವ್ಯಾನೂ ಐತಿ. ಯಾಕಂದ್ರೆ ರಂಗದ ಮೇಲಿಂದಾ ಘಾಟು ಹೋದಲ್ಲೆ, ಪ್ರೇಕ್ಷಕ ಕೆಮ್ಮೊದಿಲ್ಲಾ ಅಲ್ಲೆನು? ನೀನೆಂದಾದರೂ ಆ ಘಾಟಿನ ಬಗ್ಗೆ ಚಿಂತನಾ ನಡೆಸೀಯೇನು? ಅದನ್ನ ಹೊರಗೆ ಹಾಕೋ ಪ್ರಯತ್ನ ಮಾಡೀಯೇನು? ಆ ಘಾಟಿನ ಹೊಗೇನಾ, ಲೋಬಾನ ಧೂಪವಾಗಿ ಪರಿವರ್ತನ ಮಾಡಲಿಕ್ಕೆ ಪ್ರಯತ್ನ ನಡೆಸೀಯೇನು? ಇಲ್ಲ. ಅದು ನಡೆದಿದ್ದರೆ ವಿಚಾರನೇ ಬೇರೆ ಆಗ್ತಿತ್ತು. ಧಡ್ಡ-ಧಡ್ಡ. ನಿನ್ನ ನಾಟಕದಾಗೆ, ಕೊನೆ ದೃಶ್ಯ ಏನೈತೀ, ಅಲ್ಲಿ ನೀನಿಂತು 30-40 ನಿಮಿಷ ಏನು ಸಮಾಜವನ್ನ, ಸರ್ಕಾರವನ್ನ, ಟೀಕಾ ಮಾಡ್ತೀ, ಅದೇ ನಿನ್ನ ನಾಟಕದ ಹೈಲೈಟ್, ಹೌದೋ ಅಲ್ಲೋ? ಅದನ್ನ ಓಸೂ ಮಂದಿ ಕೂತು ಕೇಳ್ತಾರೋ ಇಲ್ಲೋ? ಆಗ ಅವರು ಅಲ್ಲಿ ನಿನ್ನ 'ದತ್ತು' ವಾಗಿ ನೋಡೋದಿಲ್ಲ. ಮಾಸ್ಟರ್ ಹಿರಣ್ಣಯ್ಯನಾಗಿ ನೋಡೋದು, ಕೇಳೋದು. ಅಂದಮೇಲೆ ಅವರು ನಿನ್ನ ಎರಡೂ ಆಗಿ ಸಹಿಸ್ತಾರೆ ಅಂದಂಗಾತು, ಹೌದೋ ಅಲ್ಲೋ? ನೋಡೂ ಈ ಪುಣ್ಯ, ನಾ ಕಂಡಂಗೆ, ನಿನ್ನ ತಂದೆಯವರಿಗೆ ಇತ್ತು. ಅವರನ್ನ ಮಂದಿ 'ನಾಜೂಕಯ್ಯ'ನಾಗಿಯೂ, ಹಿರಣ್ಣಯ್ಯನಾಗಿಯೂ ನೋಡಿ, ಒಪ್ಪಿ, ಸ್ವೀಕರಿಸಿದ್ದರು ಗೊತ್ತೇನು? ಹ್ಯಾಗಂದ್ರೇ, ಅವರನ್ನ ಕುಡುಕ-ನಾಜೂಕಯ್ಯನಾಗಿಯೂ ನೋಡಿ, ಹಿಂದಾಗಡ್ಲೀಯಿಂದಾ ಕೊನೇ ದೃಶ್ಯದಾಗೆ, ಅವರು ಏನು 50 ನಿಮಿಷ ಉಪದೇಶ ಮಾಡ್ತಿದ್ರೋ, ಅದನ್ನ ಹಿರಣ್ಣಯ್ಯಂದಾಗಿ, ಸ್ವೀಕಾರ ಮಾಡ್ತಿದ್ರು. ಇಂಥಾ ಪುಣ್ಯ ಬಹಳ ಮಂದೀಗೆ ಸಿಕ್ಕಿಲ್ಲಾ ನೋಡು ಮತ್ತೆ. ನಾ ಕಂಡಂಗೆ, ಕನ್ನಡ ರಂಗಭೂಮಿಯಾಗೆ, ನಿಮ್ಮಪ್ಪ-ನಂತರ ನೀನೇ ನೋಡಪಾ. ಹೀಂಗಿರುಮುಂದೆ, ಮಂದಿ ನಿನ್ನ ವಿರುದ್ಧ, ನಾಲ್ಕಾರೇ ಇರುವಲ್ಯಾಕ, ಯಾಕ ಹಾಂಗ ಒದರ್ತಾರಾಂತ, ಚಿಂತಾ ಮಾಡದೇ ಇರೋದು, ನಿನ್ನ ಮೂರ್ಖತನ. ಹೇಳ್ತೀನಿ ಕೇಳು, ನೀನೇನು ಆಡ್ತಿದೀ ಮಾತುಗಳು, ಓಸೂನೂ, ಪ್ರಭುಸಂಹಿತೆ ಸ್ವರೂಪದ್ದಯ್ತಿ. ಅದು ಈ 20ನೇ ಶತಮಾನದಾಗೆ ಚಾಲೂ ಇಲ್ಲಪ. ಯಾಕಂದ್ರೆ, ಪ್ರಭುಸಂಹಿತದಾಗೆ, ಹೇಳೋ ಹಕ್ಕು, ಕೇವಲ ಇಬ್ಬರಿಗೇ ಇರೋದು ನೋಡು. ರಾಜರು-ಮತ್ತು ಗುರು, ಈ ಇಬ್ರೇ ಅದನ್ನ ಬಳಸ ಬೇಕಂತೈತಿ. ಈಗ ರಾಜರೂ ಇಲ್ಲಾ, ಅಂಥಾ ಗುರು-ಶಿಷ್ಯರ ಪರಂಪರಾನೂ ಇಲ್ಲಾ ನೋಡು. ಈಗ ಉಪದೇಶ ಮಾಡಬೇಕಂದ್ರೆ-ತಿಳಿಹೇಳಬೇಕಂದ್ರೆ, ಕಾಂತಾಸಂಹಿತೆ ಇಲ್ಲಾ ಮಿತ್ರಸಂಹಿತೆನೇ ಆಗಬೇಕು ನೋಡು''. ಅವರ ಮಾತುಗಳು ಒಂದೊಂದೂ ನನ್ನ ಹೃದಯಾಂತರಾಳದಲ್ಲಿ, ಇಳಿಯುತ್ತಾ-ಇಳಿಯುತ್ತಾ ಹೋದಂತೆಲ್ಲಾ, ನನ್ನಲ್ಲಿ ಮೂಡಿದ ಏಕಾಗ್ರತೆಯನ್ನು ಗುರುತಿಸಿದ ಅಜ್ಜ, ಕಾದ ಕಬ್ಬಿಣವನ್ನು ಸಕಾಲದಲ್ಲಿ ಬಡಿಯುವಂತೆ, ಮಾತನ್ನು ಮುಂದುವರುಸಿದರು. ''ಇನ್ನು ನಿನ್ನ ಪರಿಸ್ಥಿತಿ ಹ್ಯಾಂಗದೆ ಅಂದ್ರ, ರೊಕ್ಕ ಕೊಟ್ಟೋರ್ಗೇ, ಬೈತೀಯಪ್ಪಾ. ಅಂದಾಗ ನಿನ್ನ ಮಾತು ಅವರಿಗೆ ಸಿಟ್ಟು ಬರಿಸಿದರೆ, ಅವರ್ತಾನೆ ಹ್ಯಾಂಗೆ ತಡಕೋತಾರೆ ಹೇಳು ಮತ್ತೆ. ನೀ ಹೇಳೋದು ಹ್ಯಾಂಗೆ ಇರ್ತತಿ ಅಂದ್ರೆ, ಎಲ್ಲಾ ಕೆಟ್ಟ-ಹೊಟ್ಟದ್ದಕ್ಕೂ, ಅವ್ರೇ ಹೊಣೆ ಅಂಥಾಂಗ ಮಾತಾಡ್ತಿ ನೋಡು. ಮಾತು-ಮಾತಿಗೂ, ಮಂದಿ ಕಡೆ ಕೈಮಾಡಿ, ನೀವ್ ಹಲ್ಕಟ್ ಆದೀರಿ, ನೀವ್ ಸುಟ್ಟ ಸಮಾಜಾನ ಸೃಷ್ಟೀ ಮಾಡೀರಿ, ನೀವ್ ಕೆಟ್ಟ ಮಂದೀನ ಆರಿಸಿ ಕಳ್ಸಿ, ರಾಜಕೀಯಾನೇ ರಾಡೀ ಮಾಡೀರಿ, ನೀವ್ ಲಂಚಕೋರ್ರನ್ನ ಹುಟ್ಟು ಹಾಕೀರಿ, ನೀವ್ ಧರ್ಮಾನ-ಮಠಾನ ಕುಲಗೆಡಿಸೀರೀ ಅಂತಾ, ಎಲ್ಲಕ್ಕೂ, ನೀವು-ನೀವು-ನೀವೂಂತಾ, ಅನ್ನಿಕ್ಕೆ ಹತ್ತೀಯಲ್ಲಾ, ಆಗ ನೀನೆಲ್ಲಿದ್ದೆಪ್ಪಾ? ರಂಗದಮ್ಯಾಗೆ ಇರೋ ಮೂರು ತಾಸು ಬಿಟ್ರೆ, ಉಳಿಕಿ

ಅಂತೇ ಎಲ್ಲಿ ಇರ್ತೀಯಪಾ? ವಿಚಾರ ಮಾಡು. ನೀನೂ ಅದೇ ಸಮಾಜಶಿಶು ತಾನೆ? 'ದತ್ತು' ವಾಗೋ ಮುಂದೂ ಅಲ್ಲೇ ಇದ್ದೆ. ಆಮೇಲೂ ಮತ್ತೆ ಅಲ್ಲೀಗೇ ಹೊಕ್ಕಿ, ಹೌದೋ ಅಲ್ಲೋ? ಅಂದಮ್ಯಾಗೆ ಆ ಸಮಾಜ ಕುಲಗೆಟ್ಟೈತಿ ಅನ್ನೋದೇ ಖರೇ ಆದ್ರೆ, ಅದರಾಗೆ ನಿಂದೂ ಪಾಲೈತೋ ಇಲ್ಲೋ? ಅಲ್ಲಿ ಬಿದ್ದಿರೋ ಹೊಲಸ್ನಾಗೆ, ನಿಂದೂ ಅಷ್ಟೋ ಇಷ್ಟೋ ಕೂಡೈತೋ ಇಲ್ಲೋ? ನೋಡೂ, ಈ ಸಮಾಜ ಬಿಟ್ಟು ನೀನಿಲ್ಲಾ, ನಿನ್ನ ಬಿಟ್ಟು ಈ ಸಮಾಜ ಇಲ್ಲ. ರಂಗದ ಮೇಲಷ್ಟೇ ನೀ ಪಾತ್ರಧಾರಿ, ಕೆಟ್ಟಿರೋ ಸಮಾಜಕ್ಕೆ ನೀನೂ ಒಬ್ಬ ಸೂತ್ರಧಾರಿ. ಅಂದಾಗ ಅವರನ್ನ ಮಾತ್ರ ಅನ್ಲಿಕ್ಕೆ, ನಿನಗೆ ಏನು ನೈತಿಕ ಹಕ್ಐತಿ?

ಗೀತಾಚಾರ್ಯನ ಮುಂದೆ ಕೂತ ಅರ್ಜುನನ ಸ್ಥಿತಿ ನನ್ನದಾಗಿತ್ತು. ತಪ್ಪಿನ ಪೂರ್ಣ ದರ್ಶನವಾಗಿತ್ತು. ಭಕ್ತಿ-ಜ್ಞಾನ ಯೋಗಗಳಿಂದ ಹಣ್ಣಾಗಿ ಹೊರಬಂದು, ಮುಂದಿನ ಕರ್ಮ ಯೋಗದತ್ತ ಧಾವಿಸಿದೆ. ಅಜ್ಜನವರನ್ನು ಇದಕ್ಕೆ ಪರ್ಯಾಯೋಪಾಯವೇನೆಂದು ಬೇಡಿದೆ. ''ಅದ್ನೇ ಹೇಳ್ತೀನಿ ಕೇಳು ತಮ್ಮ. ಇದನ್ನ ನಿಂಗೆ ಹೇಳ್ಳಿಕ್ಕೂ ಒಂದು ಬಲವಾದ, ನನ್ನ ಸ್ವಾರ್ಥನೂ ಐತಿ. ಯಾಕ ಹಾಂಗ ಮೋರೆ ನೋಡ್ತಿ. ಇದರಾಗ ಈ ಮುದುಕನ ಸ್ವಾರ್ಥ ಏನೈತೀಂತಾ ಅಲ್ಲೇನು? ನೋಡು ತಮ್ಮಾ, ನೀಯೇನು ಮಾಡ್ತಾ ಅದೀ, ಮಾಡ್ಲಿಕ್ಕೆ ಹೊಂಟಿದೀ, ನಮ್ಮಂಥಾ ಚಿಂತಕರ ಉದ್ದೇಶ್ಯಾನೂ ಅದೇ ನೋಡಪ. ಆದರೆ, ನಮ್ಮದು ಅಕ್ಷರ-ಪ್ರಾಕಾರ, ನಿಂದು ದೃಶ್ಯಾವತಾರ. ನಿರಕ್ಷರ ಕುಕ್ಷೀ ತಲೀವಳಕ್ಕೂ ಹೋಗೋಂಥಾ ಮಾಧ್ಯಮ ನಿಂದೋ. ಹಳ್ಳೀ-ಹಳ್ಳೀ ಮ್ಯಾಗೆ ಸುತ್ತಿ, ಜನ-ಜಾಗೃತಿ ಮೂಡಿಸೋಂಥಾ, ಮನರಂಜನೆ-ಮನೋವಿಕಾಸಗಳ ಸಂಗಮ ಕ್ಷೇತ್ರಾ ನಿಮ್ಮ ರಂಗಭೂಮಿ. ಜೊತೀಗೆ, ನಿನ್ನ ಮಾತಿಗೆ ಇಂದಿಗಿಂತಾ, ಮುಂದು ಹೆಚ್ಚೆಚ್ಚು ಮಂದಿ, ಹುಚ್ಚು ಹತ್ತಿ ಬೀಳ್ತಾರಂಬೋ ಭರವಸೆ ನಂಗೈತಿ. ಕೇಳ, ಮುಂದೆ ಇನ್ನು ಎಂದೂ, ನೀವು-ನೀವು ಅನ್ನೋ ಸಂಭೋದನ ಕೈಬಿಟ್ಟು, ಅದರ ಜಗಾದಾಗೆ, ನಾವು-ನಾವು ಅಂತಾ ಹೇಳ್ಳಿಕ್ಕೆ ಶುರು ಹಚ್ಚು. ಆಗ ನೋಡೂಣಾ, ಅದ್ಯಾರು ನಿನ್ನ ತಡವಲಿಕ್ಕೆ ಬರ್ತಾರಂತಾ? ನೋಡು ತಮ್ಮಾ ಕಲಾವಿದ ಎಂದೂ ಕಲೀತಿರೋನೇ ಶಿವಾಯಿ, ಕಲ್ತೋನಾಗೋದು ಒಂದೇ ಸಲ ನೋಡಪಾ.. ಯಾವಾಗ ಅಂತೀಯೆನೂ, ಅದು ಅವಂ ಸತ್ತಮ್ಯಾಗ''- ''ಸುಸ್ತಾಗೀರೀ ಮಾತಾಡೀ-ಆಡೀ, ತಗೋರೀ ಚಾಯ್, ಕುಡ್ದು ಮಾತಾನ ಮುಂದುವರಸ್ರಲಾ'' ಎಂಬ ಶ್ರೀ ವಾಮನ ಬೇಂದ್ರೆಯವರ ಮಾತು ಕೇಳೀದಾಗಲೇ ನಮಗೆ ಎಚ್ಚರ. ಮಾಡಿದರೆ ದೊಡ್ಡವರ, ಸೇವೆ-ಸಹವಾಸ ಮಾಡಬೇಕಂತೆ. ಆಗ ಅವರ ಪಾದಕ್ಕೆ ಬೀಳೋ ಹೂವು, ನಮ್ಮ ತಲೆ ಮುಟ್ಟೇ ಮುಟ್ಟುತ್ತೆ, ಅದಕ್ಕೆ ಆಂಜನೇಯಾನೇ ಸಾಕ್ಷಿ.

ಹುಬ್ಬಳ್ಳಿಗೆ ನಾನು ಹಿಂತಿರುಗಿದಾಗ ಕತ್ತಲು ಹರಿದಿತ್ತು, ಹೌದು ಒಳಗೂ-ಹೊರಗೂ ಸಹ. (10-06-2002) ■

---

ಹೆಣ್ಣು ಗಂಡು ಸೇರಿದರೆ – ಮೊದಲಿಗೆ ಸಂಬಂಧ
ಹೆಣ್ಣು ಗಂಡು ಸೇರಿದರೆ – ನಂತರ ಅನುಬಂಧ
ಹೆಣ್ಣು ಗಂಡು ಸೇರಿದರೆ – ಮುಂದಿನ ದಿನಗಳಲಿ
...ಜಗಳಾನುಬಂಧ

# ಭಾಷಾಗೊಂದಲಗಳು

**-ಪಾಲಹಳ್ಳಿ ವಿಶ್ವನಾಥ್**

ವರ್ಷಗಳ ಹಿಂದಿನ ಕಥೆ. ನಾನು ಮದ್ರಾಸಿನಲ್ಲಿ (ಇಂದಿನ ಚೆನ್ನೈ) ಒಂದು ಹೊಟೇಲಿನಲ್ಲಿ ಇಳಿದುಕೊಂಡಿದ್ದೆ. ಬೆಳಿಗ್ಗೆಯ ಸಮಯ. ಮಹಡಿಯ ಮೇಲಿದ್ದ ನನ್ನ ಕೋಣೆಯಿಂದ ಕೆಳಗೆ ಬಂದೆ. ಸ್ವಾಗತದ ಮೇಜಿನಲ್ಲಿ ಕುಳಿತಿದ್ದ ಮಾಲೀಕ ಮತ್ತು ಅವನ ಪತ್ನಿ ಹಲೋ ಹೇಳಿ ಅಂದಿನ ದಿನಪತ್ರಿಕೆಯನ್ನು ಕೊಟ್ಟರು. ಅದನ್ನು ತೆಗೆದುಕೊಂಡು ದೂರ ಹೋಗಿ ಓದಲು ಕುಳಿತೆ. ಸ್ವಲ್ಪ ಸಮಯದ ನಂತರ ಪ್ರವಾಸಿಯೊಬ್ಬ ತನ್ನ ಸಾಮಾನನ್ನು ತೆಗೆದುಕೊಂಡು ಸ್ವಾಗತದ ಮೇಜಿನ ಬಳಿ ಹೋಗಿ ಏನೋ ಹೇಳಿದ. ಆದರೆ ಅದು ಮಾಲೀಕರಿಗೆ ಅರ್ಥವಾಗಲಿಲ್ಲ, ಅಲ್ಲೇ ಇದ್ದ ಅವರ ಪತ್ನಿಗೂ ಅರ್ಥವಾಗಲಿಲ್ಲ. ಇಬ್ಬರೂ ಇಲ್ಲ ಎನ್ನುವಂತೆ ತಲೆ ಅಲ್ಲಾಡಿಸಿದರು. ಪ್ರವಾಸಿಗೆ ತಬ್ಬಿಬಾಯಿತೋ ಏನೋ! ಅವನ ಮುಖದಲ್ಲಿ ಪ್ರಶ್ನೆಯ ಕಳೆ ಇತ್ತು. ಮತ್ತೆ ಏನೋ ಹೇಳಿದ. ಮತ್ತೆ ಅವರಿಬ್ಬರೂ ತಲೆ ಅಲ್ಲಾಡಿಸಿದರು. ಅವರಿಬ್ಬರ ತಲೆಗಳೂ ಒಂದೇ ರೀತಿ, ಮೊದಲು ಎರಡೂ ಒಂದೇ ದಿಕ್ಕಿಗೆ ಆನಂತರ ಒಂದೇ ಸಮಯದಲ್ಲಿ ದಿಕ್ಕು ಬದಲಾಯಿಸಿ ಇನ್ನೊಂದು ಕಡೆಗೆ, ತಿರುಗುತ್ತಿದ್ದನ್ನು ನೋಡಿದಾಗ ಭೌತವಿಜ್ಞಾನದ ಅನುರಣನ ವಿದ್ಯಮಾನಕ್ಕೆ ಒಳ್ಳೆಯ ಉದಾಹರಣೆ ಎಂದುಕೊಂಡೆ. ಪ್ರವಾಸಿಗೆ ಬೇಸತ್ತು ಹೋಗಿತ್ತೋ ಏನೋ! ಜೋರಾಗಿ ''ಏನು ಮಾಡೋದೀಗ'' ಎಂದ. ತಕ್ಷಣ ಮಾಲಿಕ ''ಓ ನೀವು ಕನ್ನಡದವರಾ?'' ಎಂದ; ಅವರ ಪತ್ನಿಯೂ ಬಂದು ಅವನನ್ನು ಕನ್ನಡದಲ್ಲಿ ಮಾತನಾಡಿಸಿದಳು. ಇಬ್ಬರ ಕನ್ನಡವೂ ಚೆನ್ನಾಗಿತ್ತು. ಸಕಲಭಾಷಾ ಪ್ರವೀಣರು ಎಂದುಕೊಂಡೆ. ವ್ಯಾಪಾರಿಗಳಲ್ಲಿ ಅದು ಅತಿಶಯವೇನಲ್ಲ.

ರಾತ್ರಿ ಭೋಜನಕ್ಕೆ ಆ ಪ್ರವಾಸಿ ನನ್ನ ಪಕ್ಕವೆ ಕುಳಿತರು. ನನಗೆ ಬೆಳಿಗ್ಗೆಯಿಂದಲೇ ಕುತೂಹಲವಿದ್ದು ಅದನ್ನು ವ್ಯಕ್ತಪಡಿಸಿದೆ. ''ನೀವು ಬೆಳಿಗ್ಗೆ ಬಂದಾಗ ಹೊಟೇಲ್ ಮಾಲೀಕರನ್ನು ಯಾವ ಭಾಷೆಯಲ್ಲಿ ಮಾತನಾಡಿಸಿದಿರಿ?'' ಅವರು ''ತಮಿಳು, ಜಾಗ ಇದೆಯಾ ಎಂದು ಕೇಳಿದೆ ಏಕೆ'' ಎಂದರು. ''ಹೌದಾ?'' ಎಂದೆ. ''ನನ್ನ ಧ್ವನಿಯಲ್ಲಿನ ಅನುಮಾನವನ್ನು ಗುರುತಿಸಿದರೋ ಏನೋ! ಏಕೆ, ನಿಮಗೆ ಅರ್ಥವಾಗಲಿಲ್ಲವೆ?'' ಎಂದರು. ''ದೂರ ಕೂತಿದ್ದೆ ಅದೂ ಅಲ್ಲದೆ ಎಲ್ಲೋ ಓಡಾಡಿ ಅರ್ಧಂಬರ್ಧ ಕಲಿತಿರ್ತೀವಿ ಭಾಷೆ ಅಷ್ಟು ಗೊತ್ತಿಲ್ಲ'' ಎಂದೆ. ಅದಕ್ಕೆ ಆ ವ್ಯಕ್ತಿ ''ಆದರೆ ಅವರಿಗಾದರೂ ಅರ್ಥವಾಗಬೇಕಲ್ಲವೇ? ತಮಿಳು ಅವರದ್ದೇ ಭಾಷೆ ಅಲ್ಲವೆ'' ಎಂದರು. ಆಗ ನಾನು ''ಅಷ್ಟು ಖಚಿತವಾಗಿ ಹೇಳಲು ಬರದು ಹಿಂದೆ ಇಲ್ಲಿ ತೆಲಗು ಬಹಳ ಇತ್ತು ಆದ್ದರಿಂದ ಅವರು ತೆಲಗಿನವರಿರಬಹುದು ಅವರ ತಮಿಳು ಕಲಬೆರಕೆ'' ಎಂದೆ. ಪ್ರವಾಸಿ ಉದ್ವಿಗ್ನರಾದರು. ಸ್ವಾಮೀ! ನಾನು ಎರಡನೇ ಬಾರಿ ಕೋಣೆ ಕೇಳಿದಾಗ ತೆಲಗಿನಲ್ಲೆ ಮಾತಾಡಿದ್ದೆ. ಅದೂ ಅವರಿಗೆ ಅರ್ಥವಾಗಲಿಲ್ಲವಲ್ಲ ಎಂದರು. ''ಹೌದಾ? ನಿಜವಾಗಿಯೂ ಆಶ್ಚರ್ಯ'' ಎಂದೆ. ''ನನಗೂ ಅಷ್ಟೇ! ನೋಡಿ, ನಾನು ನಿಜವಾಗಿಯೂ ಭಾಷಾತಜ್ಞ! ನಾನು ಸುಮಾರು 10 ಭಾಷೆಗಳನ್ನು ಬಲ್ಲೆ. ಬರೀ ಬಲ್ಲೆ ಅಲ್ಲ, ಚೆನ್ನಾಗಿಯೇ ಬಲ್ಲೆ. ಬೆಂಗಾಲಿ, ಹಿಂದಿ, ಗುಜರಾತಿ, ಮರಾಠಿ, ತಮಿಳು, ಕನ್ನಡ, ತೆಲಗು, ಮಲಯಾಳಮ್ ಇತ್ಯಾದಿ. ನಾನು ಭಾಷೆಗಳ ವಿಷಯದಲ್ಲಿ ಪಿ.ಎಚ್.ಡಿ ಕೂಡ ಮಾಡಿದ್ದೀನಿ. ವಿಶೇಷ ಭಾಷಣಗಳಿಗೆ ಎಲ್ಲೆಲ್ಲೂ ಕರೆಯುತ್ತಿರುತ್ತಾರೆ. ಹಲವು ಬಾರಿ ವಿದೇಶಕ್ಕೂ ಹೋಗಿದ್ದೇನೆ. ಆದರೆ ಏನು ಉಪಯೋಗ!

ಇಲ್ಲಿ ಮಾತ್ರವಲ್ಲ ಬಹಳ ಕಡೆ ಹೀಗೇ ಆಗಿದೆ ಏಕಿರಬಹುದು?'' ಎಂದು ಬಹಳ ಬೇಸರಮಾಡಿಕೊಂಡರು. ನನಗೆ ಅವರನ್ನು ನೋಡಿ ಕನಿಕರವಾಯಿತು. ''ನೋಡಿ ನೀವು ಬಹಳ ಓದಿರುವವರು. ನನಗೆ ಏನು ಅನ್ನಿಸುತ್ತೆ ಹೇಳಲೆ'' ಎಂದು ಮುಂದುವರಿಸಿದೆ ''ನಿಮ್ಮ ಉಚ್ಚಾರಣೆ ಬಹಳ ಶುದ್ಧ. ಅಲ್ಲೇ ತೊಂದರೆ ಇರುವುದು. ಅಂತಹ ಒಳ್ಳೆಯ ಭಾಷೆಯೇ ಸಾಮಾನ್ಯ ಜನರನ್ನು ದಿಗ್ಭ್ರಮೆಗೊಳಿಸುತ್ತದೆ. ಸ್ವಲ್ಪ ನ್ಯಾಚುರಲ್ ಆಗಿರಲು ಪ್ರಯತ್ನಿಸಿ. ಆಗಾಗ ತಪ್ಪುಗಳನ್ನು ಮಾಡಿ. ಬೇಕೆಂತಲೇ ಮಾಡಿ. ತಪ್ಪುಗಳು ಹೆಚ್ಚಿದ್ದರೆ ಒಳ್ಳೆಯದು. ಜನರಿಗೂ ಇವರೂ ನಮ್ಮ ತರಹವೆ ಅನ್ನಿಸಿ ಅವರ ಕಿವಿಗಳೂ ಸ್ವಲ್ಪ ತೆರೆಯುತ್ತವೆ.''

ಭಾಷೆ ಅಂದರೆ ಮತ್ತೊಂದು ತಮಾಷೆ ಜ್ಞಾಪಕಕ್ಕೆ ಬರುತ್ತದೆ. ನಾನು ಊಟಿಯಲ್ಲಿ ಕೆಲಸಮಾಡುತ್ತಿದ್ದೆ ಮತ್ತು ನಮ್ಮ ಸಂಶೋಧನೆಗಳಲ್ಲಿ ನಮಗೆ ಸರಿಯಾದ ವೇಳೆಯ ಅವಶ್ಯಕತೆ ಬಹಳ ಇದ್ದಿತು. ಆಗೆಲ್ಲಾ ಜಿ.ಪಿ.ಎಸ್ ಇರಲಿಲ್ಲ. ಚೀನಾದಿಂದ ಒಂದು ಟೈಮ್ ಸಿಗ್ನಲ್ ಸಿಗುತ್ತಿದ್ದು ಅದನ್ನು ಬಳಸುತ್ತಿದ್ದೆವು. ಸಿಗ್ನಲ್ಲೇನೋ ಬರುತ್ತಿತ್ತು, ಆದರೆ ಜೊತೆಯಲ್ಲಿ ಚೀನಿ ಭಾಷೆಯಲ್ಲಿ ಏನೇನೋ ಕೇಳಿಸುತ್ತಿತ್ತು. ಇದು ಟೈಮ್ ಸಿಗ್ನಲ್‌ಗೆ ಸಂಬಂಧ ಇರಬಹುದಾದ್ದರಿಂದ ನಮಗೆ ಅವರು ಏನು ಹೇಳುತ್ತಿದ್ದಾರೆ ಎಂಬುದರ ಬಗ್ಗೆ ಕುತೂಹಲವಾಯಿತು. ಆದರೆ ಯಾರನ್ನು ಕೇಳುವುದು? ನಾವೆಲ್ಲಾ ಆಗಾಗ್ಗೆ ಒಂದು ಚೀನಿ ರೆಸ್ಟೋರೆಂಟಿಗೆ ಹೋಗುತ್ತಿದ್ದೆವು. ಸರಿ, ಅದರ ಮಾಲೀಕರನ್ನೆ ಕೇಳೋಣ ಎಂದು ನಿರ್ಧರಿಸಿದೆವು. ಅವರೂ ಅಲ್ಲಿಯವರ ಚಹರೆಯೇ ಇದ್ದು ನಮಗೆ ಹೆಚ್ಚು ಭರವಸೆಯನ್ನು ಮೂಡಿಸಿತು. ಆ ಸಿಗ್ನಲ್ ಮತ್ತು ಮಾತುಗಳನ್ನು ರೆಕಾರ್ಡ್ ಮಾಡಿಕೊಂಡು ಚೀನಿ ರೆಸ್ಟೋರೆಂಟಿಗೆ ಹೋದೆವು. ಅವರು ಮೂರು ನಾಲ್ಕು ಬಾರಿ ಕೇಳಿ ''ಸಾರಿ! ನಿಮಗೆ ಗೊತ್ತಿರುವ ಹಾಗೆ ಚೀನಾದಲ್ಲಿ ಇರುವುದು ಎರಡು ಮುಖ್ಯ ಭಾಷೆಗಳು. ಕ್ಯಾಂಟನೀಸ್ ಮತ್ತು ಮ್ಯಾಂಡರೀನ್. ನಾನು ಕ್ಯಾಂಟನೀಸ್ ಇವರು ಮಾತನಾಡುತ್ತಿರುವುದು ಮ್ಯಾಂಡರೀನ್. ನನಗೆ ಅರ್ಥವಾಗುವುದಿಲ್ಲ ಕ್ಷಮಿಸಿ'' ಎಂದರು. ನಾವು ಧನ್ಯವಾದಗಳನ್ನು ಅರ್ಪಿಸಿ ಮುಂದೆ ಏನು ಮಾಡುವುದೆಂದು ಯೋಚಿಸಿದೆವು. ಊಟಿಯಲ್ಲಿ ಇನ್ನೂ ಮೂರು ಚೀನಿ ರೆಸ್ಟೋರೆಂಟುಗಳಿದ್ದವು. ಆದರೆ ಅಲ್ಲಿಯ ಮಾಲೀಕರ ಮುಖ ನೋಡಿದರೆ ಅವರು ಚೀನಾದವರಲ್ಲ ಎಂದು ಬಹಳ ಸುಲಭವಾಗಿ ತಿಳಿಯುತ್ತಿತ್ತು. ಸರಿ, ನಮ್ಮ ಮೂಲ ಆಫೀಸು ಮುಂಬಯಿಯಲ್ಲಿ ಇದ್ದಿತು. ನಾವು ಯಾರಾದರೂ ಮುಂಬಯಿಗೆ ಹೋದಾಗ ಅದನ್ನು ತೆಗೆದುಕೊಂಡು ಹೋಗೋಣ. ಅಲ್ಲಿ ಬೇಕಾದಷ್ಟು ಚೀನಿ ರೆಸ್ಟೋರೆಂಟುಗಳಿವೆ. ಆ ಕೆಲಸ ನನ್ನ ಪಾಲಿಗೆ ಬಿದ್ದಿತು. ಗೇಟ್ ವೇ ಆಫ್ ಇಂಡಿಯಾದ ಬಳಿ ಒಂದು ದೊಡ್ಡ ಚೀನಿ ರೆಸ್ಟೋರೆಂಟಿತ್ತು. ಅದರ ಮಾಲೀಕರ ಬಳಿ ತೆಗೆದುಕೊಂಡು ಹೋದೆವು. ಅವರೂ ಚೀನದವರ ತರಹವೆ ಕಾಣಿಸಿದರು. ''ಪ್ರಯತ್ನಿಸೋಣ ಬನ್ನಿ'' ಎಂದು ಒಳಗೆ ಕರೆದುಕೊಂಡು ಹೋದರು. ಇವರೂ 3-4 ಬಾರಿ ಆ ರೆಕಾರ್ಡಿಂಗ್ ಕೇಳಿದ ನಂತರ ''ಸಾರಿ! ನಿಮಗೆ ಗೊತ್ತಿರುವ ಹಾಗೆ ಚೀನಾದಲ್ಲಿ ಇರುವುದು ಎರಡು ಮುಖ್ಯ ಭಾಷೆಗಳು. ಕ್ಯಾಂಟನೀಸ್ ಮತ್ತು ಮ್ಯಾಂಡರೀನ್. ನಾನು ಮ್ಯಾಂಡರೀನ್ ಭಾಷೆಯವ. ಆದರೆ ಇವರು ಮಾತಾಡುತ್ತಿರುವುದು ಕ್ಯಾಂಟನೀಸ್ ಭಾಷೆಯಲ್ಲಿ ನನಗೆ ಅರ್ಥವಾಗುವುದಿಲ್ಲ'' ಎಂದು ಹೇಳಿ ನಮ್ಮನ್ನು ಬೀಳ್ಕೊಟ್ಟರು.

ನಾನು ಕೆಲಸ ಮಾಡಲು ಪ್ರಾರಂಭಿಸಿದಾಗ ಸುಮಾರು ಒಳ್ಳೆಯ ಇಂಗ್ಲೀಷನ್ನೇ

ಮಾತನಾಡುತ್ತಿದ್ದೆ. ಆದರೆ ನಮ್ಮ ಸಂಸ್ಥೆಗೆ ಒಬ್ಬ ಇಂಗ್ಲೀಷಿನವ ಬಂದ ನಂತರ ತೊಂದರೆಗಳು ಶುರುವಾದವು. ಆತ ಬರ್ನಾರ್ಡ್ ಶಾರ 'ಮೈ ಫೇರ್ ಲೇಡಿ' ಚಿತ್ರದ ಭಾಷಾ ತಜ್ಞ ಹೆನ್ರಿ ಹಿಗ್ಗಿನ್ಸ್‌ನ ಪೀಳಿಗೆಯವನ ರೀತಿ ವರ್ತಿಸುತ್ತಿದ್ದ! ಅವನ ಜೊತೆ ಮಾತನಾಡುವಾಗ ಕೆಲವು ಪದಗಳನ್ನು ತಿದ್ದಲು ಪ್ರಾರಂಭಿಸಿದ. 'ಇಲ್ಲ, ನೀನು ಸರಿಯಾಗಿ ಉಚ್ಚರಿಸುತ್ತಿಲ್ಲ, ಅಲ್ಲಿ ಒತ್ತಿರಬಾರದು. ಇಲ್ಲಿ ಒತ್ತು ಇರಬೇಕು' ಅದಲ್ಲದೆ ಕೆಲವು ಬಾರಿ ಅವನು ''ಈ ಧ್ವನಿ ನಿನ್ನ ಬಾಯಿಯಿಂದ ಬರುತ್ತಿದೆ. ಅದಲ್ಲ ಅದರ ಮೂಲ ಸ್ಥಾನ. ಒಳಗೆ ಆಳದಿಂದ ಬರಬೇಕು'' ಎನ್ನುತ್ತಿದ್ದ. ಆಳ ಎಂದರೆ ಹೊಟ್ಟೆಯಿಂದ? ಹೌದು? ಹೊಟ್ಟೆಯ ಕೆಲಸವೇ ಬೇರೆ ಎಂದು ನಾನು ನಕ್ಕಾಗ ಅವನಿಗೆ ಇಷ್ಟವಾಗಲಿಲ್ಲ. ಒಟ್ಟಿನಲ್ಲಿ ಇದರಿಂದ ನನಗೆ ಕೀಳರಿಮೆ ಪ್ರಾರಂಭವಾಗಿ ಆ ಪದಗಳನ್ನು ಬಳಸಲು ಹಿಂದೇಟು ಹಾಕುತ್ತಿದ್ದೆ ಹಾಗೇ ನಾನು ಬಳಸುತ್ತಿದ್ದ ಇಂಗ್ಲೀಷ್ ಪದಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಗಿ ನನ್ನ ಶಬ್ದಕೋಶದಲ್ಲಿ ಕೆಲವೇ ಪದಗಳು ಉಳಿದುಕೊಂಡವು. ಕೆಲವು ವರ್ಷಗಳ ನಂತರ ನನಗೆ ಇಂಗ್ಲೆಂಡಿಗೆ ಹೋಗುವ ಅವಕಾಶ ಸಿಕ್ಕಿತು. ನನ್ನ ಇಂಗ್ಲೀಷ್ ಸ್ನೇಹಿತ ಅಭಿನವ ಹೆನ್ರಿ ಹಿಗ್ಗಿನ್ಸ್ ಹೇಳಿಕೊಟ್ಟಿದ್ದ ಪದ ಮತ್ತು ವಿಧಾನಗಳೆಲ್ಲಾ ಜ್ಞಾಪಕಕ್ಕೆ ಬಂದವು. ಅಲ್ಲಿಯ ಜನಕ್ಕೆ ನನ್ನ ಭಾಷಾ ಪ್ರೌಢಿಮೆ ತೋರಿಸಬಹುದಲ್ಲ ಎಂದು ಖುಷಿಯಾದೆ. ಲಂಡನ್ನಿನಲ್ಲಿ ಇಳಿದ ತಕ್ಷಣವೆ ಅವನು ಹೇಳಿಕೊಟ್ಟ ಹಾಗೆಯೇ ಮಾತನಾಡಲು ಪ್ರಾರಂಭಿಸಿದೆ. ಯಾರಿಗೂ ಅರ್ಥವಾದ ಹಾಗೆ ಕಾಣಲಿಲ್ಲ, ತಲೆ ಅಲ್ಲಾಡಿಸುತ್ತಾ ಹೊರಟುಹೋಗುತ್ತಿದ್ದರು. ಕಡೆಗೆ ನನ್ನ ಹಳೆಯ ಇಂಡಿಯನ್ ಇಂಗ್ಲೀಷಿಗೆ ವಾಪಸ್ಸು ಹೋದೆ. (ಸ್ವಲ್ಪ ಜೆರೋಮ್ ಕೆ ಜೆರೋಮ್‌ರಿಂದ) ■

## ಹೆಂಡ್ತಿ ಅಂದ್ರೆ ಹೇಗಿರಬೇಕು

ಶ್ರೀಪತಿ ತಲೆ ತಲೆ ಚಚ್ಕೊತಾ ಇದ್ದಾಗ ಸುಬ್ರಾಮು ಓಡಿ ಬಂದು ಅವನ ಕೈ ಹಿಡ್ಕೊಂಡು

"ಇದ್ಯಾಕೆ ಹೀಗೆ ತಲೆ ಚಚ್ಕೊತಾ ಇದೀರ. ಏನು ಸಮಸ್ಯೆ" ಅಂತ ಕೇಳಿದರು.

"ಸಮಸ್ಯೆ ಅಂತ ಕೇಳಿ, ಮನೆಲಿರೋ ಹೆಂಗಸರು ಜಗಳಗಂಟಿಯರಾಗಿಬಿಟ್ರೆ ಏನ್ ಮಾಡೋದು"

"ಈಗ ನಾನು ಅನುಭವಿಸಿಕೊಂಡಿಲ್ವೇ ಹಾಗೆ ಇರೋದು "

"ಅಲ್ಲಾ ಹೆಂಡ್ತಿ ನಾವು ಹೇಳಿದ ಹಾಗೆ ಕೇಳದೇ ಹೋದ್ರೆ"

"ನಾವೇ ಅವರು ಹೇಳಿದ ಹಾಗೆ ಕೇಳಿದರಾಯ್ತು"

"ಸಂಪಾದನೆ ಕಡಿಮೆ ಆದರೆ"

"ಅವಳು ಖರ್ಚು ಮಾಡೋದಕ್ಕಿಂತ ಹೆಚ್ಚು ಸಂಪಾದನೆ ಮಾಡಬೇಕು"

"ಮಾವನ ಮನೆಯವರು ಬಂದು ಇಲ್ಲಿ ಜಾಂಡಾ ಊರಿದರೆ"

"ಮಗಳ ಮನೆ ಅಂದ್ರೆ ಬಂದೇ ಬರ್ತಾರಲ್ಲ"

"ಹೆಂಡ್ತಿ ವಿಚಾರ ನೆನೆಸಿಕೊಂಡ್ರೆ ಮೈಯೆಲ್ಲ ಉರಿಯುತ್ತೆ"

"ಅದ್ಯಾಕೆ ಅಷ್ಟೊಂದು ಬೇಜಾರು ಮಾಡ್ಕೊತೀರ. ನಿಮ್ಮ ಹೆಂಡ್ತಿ ನಿಮ್ಮನ್ನು ಅಷ್ಟೊಂದು ಗೋಳು ಹುಯ್ಕೊತಾರಾ"

"ಇಲ್ಲ, ನನಗಿನ್ನೂ ಮದುವೆನೇ ಆಗಿಲ್ಲ. ಮದುವೆಗೆ ಎಂಥಾ ಹೆಣ್ಣು ಹುಡುಕ್ಕೊಬೇಕು ಅಂತ ಯೋಚನೆ ಮಾಡೇ ತಲೆ ಕೆಟ್ಟು ಹೋಯ್ತು. ಅದಕ್ಕೆ ತಲೆ ಚಚ್ಕೊತಾ ಇದ್ದೆ."

# ಉತ್ತರವಿಲ್ಲದ ಪ್ರಶ್ನೆ

**ಸಿ.ಆರ್. ಸತ್ಯ**

ಬೆಂಗಳೂರಿನ ತರಗುಪೇಟೇಲಿ ಇರೋ ಒಂದು ಹಿಂದೂ ಮಿಲಿಟರಿ ಹೋಟೆಲ್‌ನಲ್ಲಿ ಗೂಡಿನಲ್ಲಿ ಇಟ್ಟಿದ್ದ ಒಂದು ಕೋಳಿಗೂ ಪಕ್ಕದಲ್ಲೇ ಒಂದು ಬ್ಯಾಸ್ಕೆಟ್‌ನಲ್ಲಿ ಇಟ್ಟಿದ್ದ ಒಂದು ಮೊಟ್ಟೆಗೂ ಆದ ಸಂಭಾಷಣೆ ಇದು:

ಕೋಳಿ: ಮೊಟ್ಟೆ... ಶತಮಾನಗಳು ಕಳೆದರೂ ಈ ಪ್ರಪಂಚದಲ್ಲಿ ನಾನು ಮೊದಲು ಬಂದನೋ ಅಥವಾ ನೀನು ಮೊದಲು ಬಂದ್ಯೋ ಅನ್ನೋ ಪ್ರಶ್ನೇಗೆ ಇನ್ನೂ ಉತ್ತರಾನೇ ಸಿಕ್ಕಲಿಲ್ಲವಲ್ಲಪ್ಪ?

ಮೊಟ್ಟೆ: ನಿನಗೆ ಎಷ್ಟು ಸಲ ಬಡ್ಕೊಳ್ಳಲಿ? ನಾನೇ ಮೊದಲು ಬಂದಿದ್ದು ಅಂತ? ನಮ್ಮನ್ನ ಒಡೆದುಕೊಂಡು ಅಲ್ಲವಾ ನೀವೆಲ್ಲ ಹೊರಗೆ ಬಂದಿದ್ದು?

ಕೋಳಿ: ನೀನೇನು ಆಕಾಶದಿಂದ ಬಂದು ಬಿದ್ಯಾ? ನಾವಲ್ವಾ ನಿಮ್ಮನ್ನೆಲ್ಲಾ ಹೊಟ್ಟೆ ಇಂದ ಹೊರಗೆ ನೂಕಿದ್ದು?

ಮೊಟ್ಟೆ: ಇರಬಹುದು. ಆದರೆ ನೀವೇ ಎಲ್ಲಿಂದ ಬಂದ್ರಿ ಆಂತ ಯೋಚಿಸಿದ್ಯಾ? ಏನು, ನಿಮ್ಮ ಗಂಡಂದಿರೆಲ್ಲಾ ನಿಮ್ಮನ್ನ ಮೆಟರ್ನಿಟಿ ಹೋಮ್‌ಗೆ ಸೇರಿಸಿ ನಮ್ಮನ್ನ ಡೆಲಿವೆರಿ ಮಾಡಿಸಿದರಾ? ಈಗ ಮನುಷ್ಯರು ದೇಹದಲ್ಲಿ ಕಿಡ್ನಿ ಸ್ಟೋನ್ಸ್ ಇದೆ ಅಂತಾರಲ್ಲ, ಹಾಗೆ ನಿಮ್ಮ ಹೊಟ್ಟೇಲಿ ನನ್ನ ತರಹ ನಾಲ್ಕೈದು ಮೊಟ್ಟೆಗಳನ್ನ ಇಟ್ಕೊಂಡಿರ್ತಿದ್ರಿ- ಅವಕ್ಕೆ ಜಾಗ ಸಾಕಾಗಲಿಲ್ಲ-ಹೊರಗೆ ಬಂದವು ಅಷ್ಟೆ. ಅದರಲ್ಲಿ ನಾನೂ ಒಬ್ಬ.

ಕೋಳಿ: ನಮಗೆ ಅಂತಾ ಹೊಟ್ಟೆ ಇದ್ದಿದ್ದಕ್ಕೆ ನೀವು ಅಲ್ಲಿ ಹುಟ್ಕೊಂಡ್ರಿ.

ಮೊಟ್ಟೆ: ನಾವು ಎಲ್ಲಿ ಹುಟ್ಕೊಂಡ್ವಿ ಅನ್ನೋದು ಮುಖ್ಯ ಅಲ್ಲ ಕೋಳಿ. ನಮ್ಮನ್ನ ಒಡಕೊಂಡು ನೀವೆಲ್ಲಾ ಹೊರಗೆ ಬಂದ್ರಿ ಅನ್ನೋದು ಮುಖ್ಯ!

ಕೋಳಿ: ಅಷ್ಟು ಸುಲಭವಾಗಿ ನೀವು ಹೊರಗೆ ಬಂದಿದ್ದು ನಮ್ಮ ಹೊಟ್ಟೆ ಇದ್ದಿದ್ದಕ್ಕೇ! ಇಲ್ಲದಿದ್ದರೆ ನೀವೇನು ಯಾವುದಾದರೂ ಮೆಶಿನ್‌ನಲ್ಲಿ ತಯಾರಾದ್ರಾ?

ಮೊಟ್ಟೆ: ಹೋಗಲಿ, ಒಂದು ಕೆಲಸ ಮಾಡೋಣ. ಇಲ್ಲೊಂದು ಹುಂಜ ಪೆಕ್ರ ಪೆಕ್ರವಾಗಿ ಕೂತಿದ್ಯಲ್ಲ, ಅದನ್ನ ಕೇಳೋಣ.

ಕೋಳಿ: ಸರಿ, ಅದಕ್ಕಿರೋ ಬುದ್ಧಿ ಅಷ್ಟರಲ್ಲೇ ಇದೆ. ಅದಕ್ಕೆ ಓದಿಲ್ಲ ಬರಹ ಇಲ್ಲ, ಬೆಳಗ್ಗಿನಿಂದ ರಾತ್ರಿ ತನಕ ಕೊಕ್ಕೊಕ್ಕೋ ಅಂತ ಅಲ್ಲಿಂದ, ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಡ್ಕೊಂಡು ಇರೋದು ಗೊತ್ತೇ ಹೊರತು, ಅದಕ್ಕೆ ನಮ್ಮ ಚರಿತ್ರೆಗೊತ್ತಿದೆಯೇ? ಅಂದ ಹಾಗೆ, ಯಾರೋ ಹೇಳಿದ್ದು ನಾವು-ಅಂದರೆ ಕೋಳಿಗಳು-ಮುಂಚೆ ಬಂದ್ವಿ, ಆಮೇಲೇ ಚೀನಾದವರು ನಮ್ಮ ಮರಿಗಳನ್ನ ಹಿಡಿದುಕೊಂಡು, ನಿಮ್ಮ ತರಹ ಪ್ಲಾಸ್ಟಿಕ್ ಮೊಟ್ಟೆಗಳನ್ನ ತಯಾರಿಸಿ ಅದರೊಳಗೆ ಮರಿಗಳನ್ನ ಸೀಲ್ ಮಾಡಿದ್ರು. ಇದು ಅವರು ಎಕ್ಸ್‌ಪೋರ್ಟ್ ಮಾಡೋಕ್ಕೆ ಅನುಕೂಲ ಅಂತ ಕಂಡು ಹಿಡಿದ ತಂತ್ರಜ್ಞಾನ. ಅದರಿಂದಲೇ ನೀವೆಲ್ಲಾ ಎಲ್ಲಾ ಕಡೆ

ಹರಡಿಕೊಂಡ್ರಿ. ಮರಿಗಳು ಸಿಕ್ಕದೇ ಇದ್ದ ಸಮಯದಲ್ಲಿ, ಒಳಗಡೆ ಹಳದಿ, ಬಿಳಿ ಕೆಮಿಕಲ್ಸ್ ಹಾಕಿ ಆಮ್ಲೆಟ್‌ಗೆ ಬಾಯಿಲ್ಡ್ ಎಗ್ಸ್ ಅಂತ ಮಾರ್ಕೆಟಿಂಗ್ ಮಾಡಿದ್ರು.

ಮೊಟ್ಟೆ: ನಿಮ್ಮ ಕಥೆ ನನಗೆ ಗೊತ್ತಿಲ್ಲಾ ಅಂತ ಅಂದ್ಕೊಂಡಿದ್ದೀಯಾ? ನಾನೂ ಇದೆಲ್ಲೋ ಕೇಳಿದೀನಿ. ನಾವು ಸಾವಿರಾರು ವರುಷಗಳ ಹಿಂದೇನೇ ಈ ಪ್ರಪಂಚದಲ್ಲಿ ಇದ್ವಿ. ಆಗ ನಿಮ್ಮಂತಹ ಕೋಳಿಗಳೇ ಎಲ್ಲೂ ಇರಲಿಲ್ಲ. ಇತ್ತೀಚೆಗಷ್ಟೆ ನಾರ್ತ್ ಕೊರಿಯಾದಲ್ಲೋ ಎಲ್ಲೋ, ನಿಮ್ಮನ್ನೆಲ್ಲಾ ಕ್ಲೋನ್ ಮಾಡಿ ಫ್ಯಾಕ್ಟರಿಗಳಲ್ಲಿ ತಯಾರಿ ಮಾಡಿದ್ರಂತೆ. ಕೋಳಿಗಳಿಗೆ ಒಳ್ಳೇ ಬೆಲೆ ಸಿಗಲಿ ಅಂತ, –ಇದಕ್ಕೆ ವ್ಯಾಲ್ಯೂ ಆಡಿಶನ್ ಅಂತಾರೆ–ಫ್ಯಾಕ್ಟ್ರಿನಲ್ಲೆ ಅವುಗಳ ಹೊಟ್ಟೇಲಿ ಮೂರೋ ನಾಲ್ಕೋ ನಮ್ಮಂಥಹ ಮೊಟ್ಟೆಗಳನ್ನ ಇಟ್ಟು ಮಾರೋಕ್ಕೆ ಶುರು ಮಾಡಿದರಂತೆ. ಇದು ನಿಮ್ಮ ತರಹ ಕೋಳಿ ಬುದ್ಧಿ ಇರೋವರಿಗೆ ಅರ್ಥವಾಗಿಲ್ಲ ಅಷ್ಟೆ.

ಕೋಳಿ: ಯಾಕೋ ನೊಡಿದ್ರೆ, ಈ ಪ್ರಶ್ನೇನ ಬಗೆ ಹರಿಸೋದಕ್ಕೆ ಸುಪ್ರೀಮ್ ಕೋರ್ಟ್‌ಗೇ ಹೋಗಬೇಕು ಅಂತ ಅನಿಸುತ್ತೆ.

ಮೊಟ್ಟೆ: ಸರಿ ಹೋಯ್ತು, ಸುಪ್ರೀಮ್ ಕೋರ್ಟ್‌ಗೆ ಬ್ಲಾಕ್ ಮನಿ, ಆ ಸ್ಕ್ಯಾಮ್, ಈ ಸ್ಕ್ಯಾಮ್‌ಗಳನ್ನ ನೋಡೋಕ್ಕೆ ಸಮಯ ಇಲ್ಲ, ಇನ್ನು ಕೋಳಿ ಮೊಟ್ಟೆ ಕಥೆ ಅದರ ಗಮನಕ್ಕೆ ಬರುತ್ಯೆ? ಒಂದು ಕೆಲಸ ಮಾಡಬಹುದು–

ಓದುಗರು ಕ್ಷಮಿಸಬೇಕು. ಸಂಭಾಷಣೆ ಈ ಘಟ್ಟಕ್ಕೆ ಬಂದಾಗ, ಹಿಂದೂ ಮಿಲಿಟರಿ ಹೋಟೆಲ್ ಅಡಿಗೆಯವನು ಅಲ್ಲಿಗೆ ಬಂದು ಕೈನಲ್ಲಿ ಕೋಳೀನೂ ಮೊಟ್ಟೇನೂ ಬಾಚಿಕೊಂಡು ಅಡುಗೆ ಮನೆಗೆ ಓಡಿದ. ದಿಢೀರ್ ಅಂತ ಕಸ್ಟಮರ್‌ಗಳು ಬಂದರಂತೆ. ಅವನ ಕೈನಲ್ಲಿ ಕೋಳೀ ಚಿಕನ್ ಕರಿ, ಚಿಕನ್ ಪುಲಾವ್ ಆಯ್ತು. ಮೊಟ್ಟೆ ಆಮ್ಲೆಟ್ ಆಗಿ ಹೋಯಿತು.

ಒಟ್ಟಿನಲ್ಲಿ, ಈ ಪ್ರಪಂಚಕ್ಕೆ ಕೋಳಿ ಮೊದಲು ಬಂತೋ ಅಥವಾ ಮೊಟ್ಟೆ ಮೊದಲು ಬಂತೋ ಅನ್ನೋ ಪ್ರಶ್ನೆಗೆ ಉತ್ತರ ಇಲ್ಲದೆ ಅದು ಒಂದು ನಿಗೂಢ ಪ್ರಶ್ನೆಯಾಗೇ ಉಳೀತು!

■

## ನುಡಿಮುತ್ತು

ಇಡೀ ಪ್ರಪಂಚ ಕೊಟ್ಟು ತೆಗೆದುಕೊಳ್ಳುವವರ ಸಂತೆ. ತೆಗೆದುಕೊಳ್ಳುವವರು ಚನ್ನಾಗಿ ಊಟ ಮಾಡಿದರೆ ಕೊಡುವವರು ಚನ್ನಾಗಿ ನಿದ್ದೆ ಮಾಡುತ್ತಾರೆ. ತೆಗೆದುಕೊಳ್ಳುವವರಿಗೆ ಒಳ್ಳೆ ಸಮಯವಿದ್ದರೆ ಕೊಡುವವರಿಗೆ ಒಳ್ಳೆಯ ಬದುಕು ಇರುತ್ತದೆ.

***

ಈ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ. ನಮ್ಮ ಕಷ್ಟಗಳೂ ಸಹ. ನಾನು ಮಳೆಯಲ್ಲಿ ನೆನೆಯುತ್ತಾ ನಡೆಯುತ್ತೇನೆ. ಏಕೆಂದರೆ ನನ್ನ ಕಣ್ಣೀರು ಯಾರಿಗೂ ಕಾಣದಿರಲಿ. ಒಂದು ದಿನ ನಗದೇ ಕಳೆದರೆ ಒಂದು ದಿನ ನಷ್ಟವಾದಂತೆ.

***

ನೀವು ಇತರರ ನೆರವಿಗೆ ಸಿದ್ದರಾಗಿದ್ದರೆ ಅವರು ನಿಮಗೆ ಬೇರೆ ಕೆಲಸ ಇಲ್ಲ ಎಂದು ತಿಳಿದುಬಿಡುತ್ತಾರೆ. ಆದರೆ ನೀವು ಅವರಿಗಾಗಿ ಬಿಡುವು ಮಾಡಿಕೊಂಡಿರಿ ಎನ್ನುವುದನ್ನು ಅರಿಯುವುದಿಲ್ಲ.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

✓ ರಾಜಕಾರಣಿ ಬಾಳೆ ಹಣ್ಣಿನಂತೆ. ಮೊದಲು ಹಸಿರಾಗಿರುತ್ತಾನೆ, ನಂತರ ಹಳದಿಗೆ ತಿರುಗುತ್ತಾನೆ. ನಂತರ ಕೊಳೆಯುತ್ತಾನೆ.

✓ ಮೊದಲನೆ ಪ್ರಯತ್ನದಲ್ಲಿ ಯಶಸ್ಸು ಕಾಣದಿದ್ದರೆ ಸ್ಕೈಡೈವಿಂಗ್ ನಿಮಗೆ ಸರಿ ಹೊಂದದು.

✓ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಈಸ್ ನೊ ಮ್ಯಾಚ್ ಫಾರ್ ನ್ಯಾಚುರಲ್ ಸ್ಟುಪಿಡಿಟಿ.

✓ ಒತ್ತಡಕ್ಕೆ ಕಾರಣ: 'ಇಲ್ಲಿ' ಇದ್ದರೂ 'ಅಲ್ಲಿ' ಇರಬೇಕೆಂಬ ತುಡಿತ.

✓ ಹೌ ಡಸ್ ಒನ್ ಎಕ್ಸಪೀರಿಯನ್ಸ್ ಅಲ್ಟಿಮೇಟ್ ಸೆಲ್ಫೀ? ಸ್ವಾಲೊ ಯುವರ್ ಸೆಲ್‌ಫೋನ್.

✓ ಬಾಲಕಿಯರು ಬಾಲಕರೊಂದಿಗೆ ಸ್ಪರ್ಧಿಸಲು ಹೋಗಲೇ ಬಾರದು. ಹಾಗೆ ಮಾಡಲು ಹೊರಟರೆ ಬಾಲಕರು ಮೇಲ್ಮಟ್ಟವವರು ಎಂದು ಮೊದಲೇ ಒಪ್ಪಿಕೊಂಡ ಹಾಗಾಗುತ್ತದೆ. ಅವರು ಮಾಡಿದ್ದನ್ನು ನಮಗೂ ಮಾಡಲು ಸಾಧ್ಯ ಎಂದು ತೋರಿಸಿಕೊಡಲು ಹೊರಟಂತಾಗುತ್ತದೆ. ನಿಮ್ಮ ಮಟ್ಟಿಗೆ ನೀವೂ ಬಲಶಾಲಿಗಳೇ.

✓ ತಪ್ಪು ಮಾಡಿದವನಿಗೆ ಶಿಕ್ಷೆ ಆಗದಿರುವುದೇ ಶಿಕ್ಷೆ. ಏನಾಗುವುದೋ ಎಂಬ ಭಯದ ಶಿಕ್ಷೆ.

✓ ನೊ ರಿಟೇಕ್ ಇನ್ ರಿಯಲ್ ಲೈಫ್.

✓ ನಮಗೆ ಸಮಸ್ಯೆಗಳದ್ದಲ್ಲ ಚಿಂತೆ. ಅವುಗಳಿಂದ ಏನಾಗಬಹುದೋ ಎಂಬುದರ ಬಗ್ಗೆ ಕಲ್ಪಿತ ಆತಂಕಗಳದ್ದೇ ಹೆಚ್ಚು ಚಿಂತೆ.

✓ ಹಣದಿಂದ ಸುಖ ಕೊಳ್ಳಲಾಗದು. ಆದರೆ ಅದನ್ನು ವಿಶ್ಲೇಷಿಸಲು ಹೊರಟ ಸಂಶೋಧಕರ ಸಂಬಳ ಕೊಡಲು ಉಪಯೋಗಕ್ಕೆ ಬರುತ್ತದೆ.

✓ ಎಲ್ಲವನ್ನೂ ಇನ್ನಷ್ಟು ಚೆನ್ನಾಗಿಸಲು ಸಾಧ್ಯ ಎಂದಾದರೆ ಪರಿಪೂರ್ಣ ಎಂಬುದು ಇರಲಿಕ್ಕೆ ಸಾಧ್ಯವಿಲ್ಲ.

✓ ನಾಳಿನ ಬಗ್ಗೆ ಚಿಂತಿಸಬೇಡಿ, ಏಕೆಂದರೆ ನಾಳೆಗೆ ಅದರದ್ದೇ ಆದ ಚಿಂತೆಗಳಿವೆ.

✓ ಬೈಬಲ್ ಡಸ್ ನಾಟ್ ಸೆ 'ಗಿವ್ ಅಸ್ ದಿಸ್ ಡೆ ಅವರ್ ಮಂತ್ಲಿ ಬ್ರೆಡ್'. ಗಾಡ್ ವಾಂಟ್ಸ್ ಟು ಡಿಪೆಂಡ್ ಆನ್ ಹಿಮ್ ಒನ್ ಡೆ ಅಟ್ ಅ ಟೈಮ್.

✓ ನಾವು ಭಯೋತ್ಪಾದಕರನ್ನು ಕೊಲ್ಲುತ್ತಿದ್ದೇವೆ, ಭಯೋತ್ಪಾದನೆ ಅಲ್ಲ.

✓ ನಮ್ಮ ಪ್ರೊಫೆಸರ್ ಅವರಷ್ಟಕ್ಕೆ ಅವರೇ ಮಾತನಾಡಿಕೊಳ್ಳುತ್ತಿರುತ್ತಾರೆ. ನಿಮ್ಮ ಪ್ರೊಫೆಸರ್?

ಅವರೂ ಅಷ್ಟೆ. ಆದರೆ ನಾವು ಕೇಳಿಸಿಕೊಳ್ಳುತ್ತಿದ್ದೇವೆ ಎಂದು ತಿಳಿದುಕೊಂಡಿದ್ದಾರೆ.

# 'ಸದಾರಮೆ' ಸರದಾರರಿಗೆ ಅರವತ್ತು!

**ಹಿರೇಮಗಳೂರು ಕಣ್ಣನ್**

*(ಕೃಪೆ: 'ಅನ್ನದಾತರ ಅಂಗಳದಿಂದ' ಗ್ರಂಥ)*

''ಒಂದು ಒಳ್ಳೆಯ ಮಾತು, ಒಂದಿಷ್ಟು ಪ್ರೀತಿಯ ಸ್ವಾಗತ ಒಂದು ಸದ್ಭಾವದ ಸ್ಮಿತ, ಜೀವನಕ್ಕೆ ಪರಸ್ಪರ ಹಿತ, ಆದರೆ ಅದು ಕಳೆದುಕೊಂಡಿದೆ ತನ್ನ ನೆಲದಲ್ಲಿ ಇಂದು ಭಾರತ.

ಸ್ವದೇಶದ ಹೂವು ಬಾಡಿದೆ. ವಿದೇಶದ ಹೂವು ಅರಳಿದೆ. ಅಂಗಳ ಅಂಗಳದಲ್ಲಿ ಕಂಗಳಿಗೆ ತಿಂಗಳ ಬೆಳಕಿಲ್ಲ. ಪರಂಗಿಯರ ರಂಗುರಂಗಿನ ಬೆಳಕು ತುಂಬಿದೆ. ಒಳಗಿನ ಬೆಳಕು ಕತ್ತಲೆಯಾಗಿ, ಹೊರಗಿನ ಬೆಳಕಿನಲಿ ತಾಯಿ ಬೆತ್ತಲೆಯಲಾಗಿದ್ದಾಳೆ.

ಯಾರನ್ನು ನೋಡಿದರೂ ಯಾರನ್ನೋ ನೋಡಿದಂತೆ! ನೋಡಿದರೂ ನೋಡದಂತೆ ನಡಿಗೆ ಸಾಗಿದೆ. ಇಂಗ್ಲೆಂಡು, ಇಂಡಿಯಾ ಆಗ ಹೊರಟರೆ ಇಂಡಿಯಾ ಇಂಗ್ಲೆಂಡು ಆಗ ಹೊರಟಿದೆ. ಮನೆ ಮನೆಯ ಮನಗಳಲ್ಲಿ ಆಧುನಿಕತೆ, ಮನಸುಮಗಳಲ್ಲಿ ಭಾಷಾಂಧತೆ, ಸುಗತಿ-ಸಂಸ್ಕೃತಿಗಳಲ್ಲಿ ಪಾಶ್ಚಿಮಾತ್ಯತೆ ಮಡುಗಟ್ಟಿದೆ. ನೆಪಕ್ಕೆ ಸಂಪ್ರದಾಯ, ನೆತ್ತಿವರೆಗೆ ಬೇಕು ನಿತ್ಯ ಆದಾಯ ಎಂದು ಸಾಗುವ ಹಾದಿ ಹಿರಿದಾಗಿದೆ.

ಶಿಷ್ಟಾಚಾರ ಮರೆಯಾಗಿ ಭ್ರಷ್ಟಾಚಾರ ಮೆರೆದಿದೆ. ಹತ್ತವತಾರದ ನೆಲದಲ್ಲಿ ನಿತ್ಯ ಲಂಚಾವತಾರ, ಮಂಚಾವತಾರ ನಿತ್ಯೋತ್ಸವ ಎನಿಸಿದೆ. ''ತೀರ್ಥರೂಪ'' ಎಂಬ ಪದ ಮದವೇರಿಸುವ ತೀರ್ಥದ ರೂಪಕ್ಕೆ. ಒಟ್ಟಿನಲ್ಲಿ ನಮ್ಮ ಭರತಮಾತೆಯ ಶಿರಕೆ ಮಕಮಲ್ ಟೋಪಿ ಇರಿಸಿ, ನರನಾರಾಯಣ ನಡುಬೀದಿ ನಾರಾಯಣನಾಗಿದ್ದಾನೆ ಎನಿಸಿದೆ. ಯುಕ್ತವಲ್ಲದ ಬದುಕು ಮುಕ್ತವಾಗಿ ತಂದೆ ಮಗಳ, ತಾಯಿ ಮಗನ, ಗುಮಾಸ್ತೆ ಅಧಿಕಾರಿಯ, ಶಿಷ್ಯೆ. ಶಿಕ್ಷಕನ ವಾಕಿಂಗ್-ಟಾಕಿಂಗ್, 'ಟೂರಿಂಗ್ ಟಾಕಿಸ್'ನಂತೆ ನಿತ್ಯ ಟೂರ್ ಮಾಡುತ್ತಿದೆ? ಇನ್ನು ಆಳುವವರು ಮಾಡಿರುವ ದೇಶದ ಆಳ ಇರುವ ಜನಕೋಟಿಯೆಲ್ಲಾ ಮಣ್ಣು ಹೊತ್ತು ಹಾಕಿದರೂ ಮುಚ್ಚಲಾಗದು ತಳ.... ಮನೆಹಾಳ ಮುರುಕರಿಂದ ಭವ್ಯ ಭಾರತದ ಮಾನ ಮಣ್ಣುಪಾಲಾಗಿದೆ.''

-ಹೀಗೆ ತಮ್ಮ ಅಂತರಾಳದ ಅಂತರಾರ್ಥವನ್ನು ತೋಡಿಕೊಂಡು ಅಂತರಂಗದಲ್ಲೇ ಚಿಂತಿಸಿ, ಅದನ್ನು ಅನಂತ ನಗೆ ಮಾತುಗಳಿಂದ ಪೋಣಿಸಿ, ಜಾಗೃತಿಗಾಗಿ 'ನಾಟಕ' ಒಂದು ಮಾಧ್ಯಮವಾಗಿಸಿಕೊಂಡು ಕಣ್ಣು ತೆರೆಸುತ್ತಿರುವವರು- ಅವರೇ ನಮ್ಮ ಮಾಸ್ಟರ್ ಹಿರಣ್ಣಯ್ಯ. ಅರವತ್ತಾದರೂ ಆರಡಿ ಅಲ್ಲದ ಈ ಮೂರಡಿ ಮಾಸ್ಟರ್‌ಗೆ ಇಂದೂ ಮೈಕಟ್ಟು, ಭೀಮನು ತೋಳು. ಅರಳು ಹುರಿದಂತೆ ಅಲ್ಲ, ಮರಳು ಸಿಡಿದಂತೆ ಮಾತು. ಮುಲಾಜಿಲ್ಲದ ಮಾತಿನ ಸಾಲು. ಸರಳ ಉಡಿಗೆಯಲ್ಲಿ ಸಹಜ ಬಾಳು. ದುಡಿಮೆಯಲಿ ಅನೇಕ ಜೀವಿಗಿತ್ತಿದ್ದಾರೆ ಸಹಪಾಲು. ನಿತ್ಯನಾಲಿಗೆಯಲಿ ಕನ್ನಡ ನುಡಿಯೇ ನುಡಿವ ಕಟ್ಟಾಳು.

ಹೆಸರಿಗೆ ಬೆಂಗಳೂರು ವಾಸ. ಭಾರತ, ಕರ್ನಾಟಕ ನಿತ್ಯ ಪ್ರವಾಸ. ಇಷ್ಟಲ್ಲದೆ ವಿದೇಶಕ್ಕೆ ನೆಗೆತ. ಅಲ್ಲಿ ಕನ್ನಡ ಮಾತಿನ ಸಿಡಿತ. ಇದು ಇವರ ವ್ರತ. ಇರುವೆಗೆ ಬೆಲ್ಲದಂತೆ ಇವರಿದ್ದೆಡೆ ಜನ ಮುತ್ತಿಗೆ. ಜಾತಕ ಪಕ್ಷಿಯಂತೆ ಕಾಯುವರು ಇವರ ಮಾತಿಗೆ.

## ತಂದೆಯ ಸಂಗ

ತಂದೆಯನ್ನೂ ಮೀರಿಸಿದ ಮಗ. ಅಭಿಜಾತ ಕಲಾವಿದರಾಗಿದ್ದ ದಿ॥ ಹಿರಣ್ಣಯ್ಯನವರ ಮಗನಾದ ಇವರ ಹೆಸರು ನರಸಿಂಹಮೂರ್ತಿ. ಆದರೆ ಕಿರಿನಾಲಿಗೆಯಿಂದ ಹಿರಿನಾಲಿಗೆವರೆಗೆ ''ಮಾಸ್ಟರ್ ಹಿರಣ್ಣಯ್ಯ'' ಎಂದೇ ಕೀರ್ತಿ

ತಂದೆಯಿತ್ತ ಬಳುವಳಿ ಕಲೆಯ ಹುಚ್ಚಿನಲ್ಲಿ ಕೈಗೆ ತೆಂಗಿನ ಚಿಪ್ಪು. ಚಂಗನೆ ರಂಗಕೆ ನೆಗೆದು ತಾವಾದರು ಮುತ್ತಿನ ಚಿಪ್ಪು! ಇವರು ನಾಟಕವಾಡಲು ಊರಿಗೆ ಬಂದು ತಳವೂರಿದರೆ ಪುಢಾರಿಗಳಿಗೆ, ಅಧಿಕಾರಿಗಳಿಗೆ, ಇಲಾಖೆಗಳಿಗೆ, ಆಷಾಢಭೂತಿಯ ಧರ್ಮರತ್ನಾಕರರಿಗೆ ಎಲ್ಲಿಲ್ಲದ ಭಯ. ಹೇಳದೇ ಕೇಳದೆ ತಲೆಮರೆಸಿಕೊಳ್ಳುವ ನಯ ಕಾರಣ? ಮಾಸ್ಟರ್ ಹಿರಣ್ಣಯ್ಯನವರ ಹದ್ದಿನ ಕಣ್ಣು, ಹಾವಿನ ಕಿವಿಯಲ್ಲಿ ಅವರುಗಳ ಜಾತಕ ಚಿತ್ರೀಕರಣ, ದಿನನಿತ್ಯ ನಾಟಕದಲ್ಲಿ ಜನಮನಕ್ಕೆ ವಾಗ್ಬಾಣ! ಅವರ ಲಫಂಗತನದ ಅನಾವರಣ!

ಯಾರೇ ಇರಲಿ, ಎಷ್ಟೇ ಎತ್ತರದವನಿರಲಿ, ಎಂಥ ಪ್ರಭಾವಶಾಲಿಯೇ ಆಗಿರಲಿ ಅವರನ್ನು ಕರೆಸಿ, ತನ್ನಿದಿರಿಗೆ ಕೂರಿಸಿ ಮುಖವೊರೆಸಿ ಕಳಿಸುವ ಎದೆಗಾರಿಕೆ ಇವರ ಕಲೆ. ಎಷ್ಟೋ ಕಡೆಗಳಲ್ಲಿ ಹಿರಣ್ಣಯ್ಯನವರ ಕಂಪೆನಿಗೆ ಪರವಾನಗಿ ನೀಡದಂತೆ ಕುಮ್ಮಕ್ಕು. ಏನಾದರೂ ಮಾಡಿ ತಡೆಯೊಡ್ಡಬೇಕು, ನಾಟಕ ಪ್ರದರ್ಶನ ತಪ್ಪಿಸಬೇಕು ಎಂಬ ಹುನ್ನಾರ. ತೆರೆಮರೆಯಲ್ಲಿ ಘಟಿಂಗರ ಜತೆ ಹೂಂಗುಡುತ್ತಿತ್ತು ತೋರಿಸಿಕೊಳ್ಳದೆ ಕೆಲವೊಮ್ಮೆ ಸರ್ಕಾರ! ಆದರೆ ಅವರಿಗೆ ಮೂಗುದಾರ ಹಾಕಿ ಬಗ್ಗಿಸುವ ಕಲೆಯಲ್ಲಿ ಗೆದ್ದು ಬರುವ ಕಲೆ ಕರತಲಾಮಲಕ ಈ ಸದಾರಮೆಯ ಸರದಾರ ಚಾಣಕ್ಯ ಬುದ್ಧಿಯ ಅಪರಾವತಾರ.

ನಗರಾಡಳಿತ, ಸಾರಿಗೆ, ಶಿಕ್ಷಣ, ನ್ಯಾಯ, ಆಡಳಿತ, ಪೊಲೀಸರ ದಂಧೆ, ಪತ್ರಿಕೆ, ಹೀಗೆ ಯಾವ ಇಲಾಖೆಯನ್ನೂ ಬಿಡದೆ ತಾನು ತಂಗಿದ್ದ ಊರಿನಲ್ಲಿ ಅವರ ರೀತಿ ನೀತಿ ಪತ್ತೆ ಹಚ್ಚಿ ಪ್ರತಿದಿನ ಒಂದೇ ನಾಟಕ ಶೀರ್ಷಿಕೆಯಲ್ಲಿ ವೈವಿಧ್ಯಮಯ ಮಾತುಗಳಿಂದ ಜನ ಟಿಕೆಟ್ಟು ಪಡೆದು, ಒಳಹೊಕ್ಕಲು ನಿತ್ಯ ಕ್ಯೂನಲ್ಲಿ ಬಂದು ನಿಲ್ಲುವಂತೆ ಮಾಡುವ ಅದ್ಭುತ ಕಲೆ ಇವರದಾಗಿದ್ದು, ಅವರ ನಿರ್ಭೀತ ಎದೆಗಾರಿಕೆಗೆ ಸರ್ಕಾರವೇ ಹೆದರುತ್ತಿತ್ತು, ಮಂತ್ರಿಮಂಡಲ ನಡುಗುತ್ತಿತ್ತು.

ಬೆಂಗಳೂರಿನ ಸುಭಾಷ್ ಮೈದಾನದಲ್ಲಿ ವರ್ಷಾನುಗಟ್ಟಲೆ ಮಾಸ್ಟರ್ ಹಿರಣ್ಣಯ್ಯನವರ ನಾಟಕ ಪ್ರದರ್ಶನ ಸಂಜೆಯ ವೇಳೆ ಜನಕ್ಕೆ ಮುಂಜಾವಿನ ಬೆಳಕು ಕಂಡಂತೆ. ಅಷ್ಟು ಪ್ರಭಾವ. ನಾಟಕದಲ್ಲಿ ಬಳಸುವ ಮಾತು ಕೇಳಿದ ಕಿವಿಗಳು ಪರಸ್ಪರ ಕಲೆತಾಗ ಸವಿಯುವ ತವಕ. ವಿಶಿಷ್ಟ ಕಲೆಯ ವಿಶಿಷ್ಟ ಶಕ್ತಿ ಮಾಸ್ಟರ್ ಅವರದ್ದು. ಇದುವರೆಗೆ ಆಡಿದ ಮಾತೆಷ್ಟೋ? ತರಾಟೆಗೆ ತೆಗೆದುಕೊಂಡ ಪದವೆಷ್ಟೋ? ನೀಡಿದ ಪ್ರದರ್ಶನವೆಷ್ಟೋ? ನಡುಗಿದ ಎದೆಯೆಷ್ಟೋ? ಅಡಗಿದ ಸದ್ದೆಷ್ಟೋ? ಇವರಿಗಿರಲಿ ಆ ಬ್ರಹ್ಮನಿಗೇ ಲೆಖ್ಖ ತಿಳಿಯದು.

**ನನಗೂ ನಿನಗೂ ಅಂಟಿದ ನಂಟಿನ ಈ ನಾಟಕ ನಂಟು**
**ಕಂಡವರಾರು, ಕಾಮಾಕ್ಷಿ?**
**ನನ್ನ ನಿನ್ನ ಲೆಖ್ಖವ ಹೇಳಲು**
**ಕಂಡಿತು ಯಾರ ಅಕ್ಷೀ?**
**ಯಮನೂ ಬರಲೊಲ್ಲ**
**ಹಗಲು ಸಾಕ್ಷಿ!**

ಎನ್ನುವ ಹಿರಣ್ಣಯ್ಯನವರಿಗೆ ಅವರ ನಾಲಿಗೆಯೇ ಸಾಕ್ಷಿ, ಹೃದಯವೇ ಅಕ್ಷಿ.

''ನಮ್ಮ ದೇಶದಲ್ಲಿ ಇಲಾಖೆ ಹುಟ್ಟಿದ ಮೇಲೆ ಕಳ್ಳರು ಜನಿಸಿದರು. ಪೊಲೀಸ್ ಇಲಾಖೆ ಬಂದ ಮೇಲೆ ಕಳ್ಳರು ಹೆಚ್ಚಿದರು. ಭಕ್ತರು ಬಂದ ಮೇಲೆ ಪೂಜಾರಿ ಜನಿಸಿದರು. ಪೂಜಾರಿಗಳು ಹೆಚ್ಚಿದ ಮೇಲೆ ದೇವರನ್ನೇ ಕೊಂದರು!'' ಎನ್ನುವ ಮಾಸ್ಟರ್‌ರವರ ಮಾತು ಕೇವಲ ಹಾಸ್ಯವಲ್ಲ, ಕೇಳಿದ ಕಿವಿ, ಬುದ್ಧಿ ಮುಟ್ಟಿ ಕಣ್ಣು ತೆರೆಸುವ ಸಂಜೀವಿನಿ. ಅವರ ಈ ಮಾತುಗಳನ್ನು ಜನ ನಗೆಯಲ್ಲೇ ಮರೆತಾಗ ಶ್ರೀ ಹಿರಣ್ಣಯ್ಯನವರಿಗೆ ಎಲ್ಲಿಲ್ಲದ ನೋವು.

**ದೇವ ಮಾಡಿಸಿದ ಪಾತ್ರಧಾರರು**
**ನಾವು ಕೂಡಿಸುವ ಸೂತ್ರಧಾರರು**
**ನೀವು ಹರಸುವ ಪುಣ್ಣಪಾತ್ರರು**
**ಯಾವ ಜನುಮದ ಭಾಗ್ಯವಂತರೂ**

ಇದು ಅರವತ್ತು ಸಂವತ್ಸರ ಸಿಹಿಕಹಿಯ ಬಾಳನ್ನು ಅರೆದು ಬರೆದ ಅವರದೇ ಮಾತು. ಆದರೆ ಅವರೇ ಬರೆದ ಸಾಲಿನಂತೆ ಇವರನ್ನು ಪಡೆದ ನಾವು ಯಾವ ಜನುಮದ ಭಾಗ್ಯವಂತರೋ? ಅಲ್ಲವೇ?

**ನನ್ನ ತನುವಿಗೀಗ ವೃದ್ಧಾಪ್ಯ. ಆದರೆ ನನ್ನ ಮನಕ್ಕಿನ್ನೂ ನವಯೌವನವಯ್ಯ**
**ನನ್ನ ತಲೆಗೂದಲಿಗೀಗ ನರೆ, ಆದರೆ ಅರಿವಿಗೆ ಬಂದಿಲ್ಲ ಮರೆ.**

ಎಂಬ ಕಾವ್ಯಾನಂದರ ಮಾತಿನಂತೆ ಪಾದರಸದ ಈ ನಟನಾ ಚತುರರನ್ನು ಇದೇ ಅರವತ್ತರಲ್ಲಿ ಕೆದಕಿದರೆ ಹೇಳುವ ಮಾತಿದು. ಅಷ್ಟೇ ಅಲ್ಲ, ಅವರ ಜೀವನಾನುಭವದ ಹಾದಿಯನ್ನ ಕೇಳಿದರೆ.

**ನಿನ್ನೆ ಕಡೆದ ಮಜ್ಜಿಗೆ ಇಂದು ಕಾಸಿದ ಹಾಲಿಗೆ ಹೆಪ್ಪು**
**ಮುನ್ನಿನವರ ಅನುಭವ ಇಂದಿನವರ ಅನ್ನಕ್ಕೆ ಉಪ್ಪು**
**ಮುನ್ನಿನವರ ಮನ್ನಿಸದವನು ನಾಳಿನವರ ಬಗ್ಗೆ ಚಿಂತಿಸಬಲ್ಲನೇ?**

ಎನ್ನುತ್ತಾರೆ. ಕವಿ ಮಾತಿನ ನುಡಿಯನ್ನೇ ಉತ್ತರವಾಗಿಸುತ್ತಾರೆ. ಒಟ್ಟಿನಲ್ಲಿ ನಗುನಗುತ್ತಾ ನಮ್ಮನ್ನು ಇಲ್ಲಿಯವರೆಗೆ ನಟನಾರಂಗದಿಂದ ತಿದ್ದಿ, ತಿದ್ದಿ ತೀಡುತ್ತಿರುವ ನಮ್ಮ ಕನ್ನಡತಿಯ ಮಾಸ್ಟರ್ ಹಿರಣ್ಣಯ್ಯನವರ ಬಾಳು ಶತಮಾನಶಿಖರ ಏರಲಿ. ನಮ್ಮ ಜಿಲ್ಲೆಯ ಸಖರಾಯ ಪಟ್ಟಣದ ಅವರ ತಾಯಿಯ ನೆಲದ ಹಾರೈಕೆ ಮುತ್ತಲಿ ಮುತ್ತಿನಂಥ ಬಾಳು ಸಾಗಲಿ.

**ಆಡಿ ಹಿಗ್ಗುವವರು ಹಲವು ಜನರಾದರೆ**
**ನೋಡಿ ಹಿಗ್ಗುವವರು ಸಹಸ್ರ ಜನ**
**ಬಾನುಲಿಯಲಿ ಕೇಳಿ ಹಿಗ್ಗುವರು ಲಕ್ಷ ಲಕ್ಷ ಜನ**
**ಪತ್ರಿಕೆಯಲಿ ಓದಿ, ನುಡಿಪೆಟ್ಟಿಗೆ (ಕ್ಯಾಸೆಟ್)ಯಲ್ಲಿ ಆಲಿಸಿ**

**ಹಿಗ್ಗುವವರು ಕೋಟಿ ಕೋಟಿ ಜನ**
**ಎಲ್ಲಿಯೋ ಹುಟ್ಟುವ ಹಿಗ್ಗಿನ ಅಲೆ**
**ಹಿಗ್ಗುತ್ತ ಹಿಗ್ಗುತ್ತ ಕೋಟಿ ಜನರ ಮುಟ್ಟುವಂತೆ**
**ಎಲ್ಲರ ಮನ ಮನಕ್ಕೆ ಮನೆ ಮನೆಗೆ**
**ನಮ್ಮ ಮಾಸ್ಟರ್ ಹಿರಣ್ಣಯ್ಯರ ಮಾತಿನ ಹಿಗ್ಗು ನಿತ್ಯ ಮುಟ್ಟಲಿ.**

ಹೊಸದಿಗಂತ, 16-8-94

# ಬಾವಿ ಕಟ್ಟೆ ಮಾತು

**ಸುಕೇಶವ**

ಶೀರ್ಷಿಕೆ ನೋಡಿ ಈಗಿನವರು ಏನು ಹೀಗಂದರೆ ಅಂತ ಕೇಳಬಹುದು. ಏಕೆಂದರೆ ಈಗ ಯಾವ ಊರಿನಲ್ಲೂ ಬಾವಿ ಕಟ್ಟೆ ಇಲ್ಲ. ಬೇಕಿದ್ದರೆ ಬೋರ್‌ವೆಲ್ ಕಟ್ಟೆ ಇದೆ ಅನ್ನಬಹುದು. ಬಾವಿ ಕಟ್ಟೆನೇ ಇಲ್ಲ ಅಂದ ಮೇಲೆ ಬಾವಿ ಕಟ್ಟೆ ಮಾತೆಲ್ಲಿ ಬಂತು. ಅಂದಿನ ಕಾಲದಲ್ಲಿ ನೀರು ತರಲು ಬಾವಿ ಕಟ್ಟೆಗೆ ಪ್ರತಿ ಮನೆಯಿಂದಲೂ ಒಂದು ಹೆಣ್ಣು ಬರೋದು. ಅಷ್ಟೂ ದಿನ ಅತ್ತೆಯಾದವಳು ನೀರು ಹೊರ್ತಾ ಇದ್ದರೆ, ಮನೆಗೆ ಸೊಸೆ ಬಂದ ಮೇಲೆ ಅವಳನ್ನೂ ನೀರು ಹೊರಲು ಕರೆದುಕೊಂಡು ಬರೋಳು. ಮುಂದೆ ನೀರು ಹೊರುವ ಕೆಲಸ ಅತ್ತೆಯಿಂದ ಸೊಸೆಗೆ ವರ್ಗಾವಣೆಗೊಳ್ಳುತ್ತಿತ್ತು. ಅದಕ್ಕೇ ಊರಿಗೆ ಬಂದವಳು ನೀರಿಗೆ ಬರಲಾರಳೇ ಅನ್ನೋ ಗಾದೆ ಹುಟ್ಟಿಕೊಂಡಿತ್ತು. ಆದರೆ ಈಗ ಊರಿಗೆ ಬಂದವಳು ನೀರಿಗೆ ಬರಲೇಬೇಕು ಎಂದಿಲ್ಲ. ಏಕೆಂದರೆ ಸೊಸೆಯಿಂದ ನೀರು ಹೊರಿಸುವ ಶಕ್ತಿ ಈಗಿನ ಯಾವ ಅತ್ತೆಯಂದಿರಿಗೂ ಇಲ್ಲ. ಬದಲಾಗಿ ನೀರೇ ಅವಳ ಮನೆಗೆ ಬರುತ್ತೆ, ನಲ್ಲಿಯ ರೂಪದಲ್ಲಿ, ಬೋರ್‌ವೆಲ್ ರೂಪದಲ್ಲಿ ಅಥವಾ ನೀರಿನ ಟ್ಯಾಂಕರ್ ರೂಪದಲ್ಲಿ, ಆ ದಿನಗಳಲ್ಲಿ ಬಹಳ ಮುಖ್ಯವಾದ ಮಾತುಗಳೆಲ್ಲಾ ಬಾವಿ ಕಟ್ಟೆಯ ಬಳಿಯೇ ನಡೆಯೋದು. ಸೊಸೆಯಾದವಳು ಅತ್ತೆಯ ಬಗೆಗೆ ಗಂಡನಿಗೆ ಚಾಡಿ ಹೇಳಬೇಕಾದರೆ ಕೊಡ ಸೊಂಟಕ್ಕೆ ಸೇರಿಸಿಕೊಂಡು ಹೋಗುವಾಗ ಗಂಡನ ಕಡೆ ನೋಡಿ ಬಾವಿ ಕಟ್ಟೆಗೆ ಬನ್ನಿ ಅಂತ ಸನ್ನೆ ಮಾಡಿ ಹೋಗೋಳು. ಮನೇಲಿ ಮಾಡಿದ ಕೋಡುಬಳೇನೋ ಚಕ್ಕುಲೀನೋ ತಿನ್ನೋಕೆ ಸಮಯವೇ ಇಲ್ಲದೇ ಹೋದರೆ ಕೊಡ ತೆಗೆದುಕೊಂಡು ಬಾವಿಗೆ ಹೋಗುವಾಗ ಒಂದೆರಡು ಕೋಡುಬಳೆಗಳನ್ನೂ ಸೊಂಟಕ್ಕೆ ಸಿಕ್ಕಿಸಿಕೊಂಡು ದಾರಿಯುದ್ದಕ್ಕೂ ತಿನ್ನುತ್ತಾ ಹೋಗೋರು. ಅಕ್ಕಪಕ್ಕದ ಮನೆಯವರೊಂದಿಗೆ ಮಾತು ಹಂಚಿಕೆ ಆಗುತ್ತಿದ್ದುದು ಬಾವಿ ಕಟ್ಟೆಯ ಬಳಿಯೇ. ಮನೆಯಲ್ಲಿ ಯಾರಿಗಾದರೂ ತುಂಬಾ ಬೇಜಾರು ಆಯಿತು ಎಂದರೆ ಅವರ ಏಕಾಂತಕ್ಕೆ ಬಾವಿ ಕಟ್ಟೆಯೇ ಸೂಕ್ತ ಸ್ಥಳ. ನಮ್ಮ ಊರಿನಲ್ಲಿ ಒಂದು ಕಡೆ ಸಿಹಿನೀರಿನ ಬಾವಿ ಇತ್ತು. ಅಲ್ಲಿಂದ ಬಹುಪಾಲು ಮನೆಯವರು ಕುಡಿಯುವ ನೀರು ತರುತ್ತಿದ್ದರು. ಕೆಲವರು ಊರಿನಲ್ಲಿ ನೋಡ್ರಪ್ಪಾ ಯಾರಿಗಾದರೂ ಬೇಜಾರಾಗಿ ಪ್ರಾಣ ಕಳ್ಕೊಬೇಕು ಅನಿಸಿದರೆ ದಯವಿಟ್ಟು ಸಿಹಿ ನೀರಿನ ಬಾವಿಗೆ ಬೀಳಬೇಡಿ. ಯಾಕೇಂದ್ರೆ ಕುಡಿಯೋ ನೀರಿಗೆ ಅದೊಂದೇ ಬಾವಿ ಇರೋದು. ಬೇಕಿದ್ರೆ ಬೇರೆ ಬಾವಿಗೆ ಬಿದ್ಕೊಳಿ ಅನ್ನೋರು. ಹೀಗೆ ಕುಡಿಯುವ ನೀರು ತರುವ ಸಮಯ ಸಂಜೆ ನಾಲ್ಕುವರೆ. ಸುಮಾರು ಎಂಟು ಹತ್ತು ಹೆಂಗಸರು ಸೊಂಟದ ಮೇಲೊಂದು ತಲೆಯ ಮೇಲೊಂದು ಅಂತ ಎರಡೆರಡು ಕೊಡ ಇಟ್ಕೊಂಡು ಬಾವಿಗೆ ಹೊರಟರೆ ಇನ್ನು ಬರೋದು ಕತ್ತಲೆಗೆ ಮುಂಚೆಯೇ. ಎರಡು ಕೊಡ ನೀರು ಸೇದುವುದರ ಜೊತೆಗೆ ಅಲ್ಲಿದ್ದ ಅಷ್ಟೂ ಜನರ ಮನೆಯ ಮಾತುಗಳು ವಿನಿಮಯಗೊಳ್ಳುತ್ತಿದ್ದವು. ಯಾರದ್ದಾದರೂ ಮನೆಯ ಮದುವೆ ಇದ್ದರಂತೂ ಮದುವೆಯ ಇಂಚಿಂಚು ವಿಚಾರಗಳೂ ಬಾವಿ ಕಟ್ಟೆಯ ಬಳಿಯೇ ವಿನಿಮಯಗೊಳ್ಳುತ್ತಿದ್ದವು. ರಾಜಣ್ಣನ ಮಗಳು ಮತ್ತೆ ಬಸಿರಿಯಂತೆ, ಅವನಿಗೆ ಏನು ಬಂತ್ರೀ ರೋಗ, ಮೊದಲನೇ ಮಗೂಗೆ ಇನ್ನೂ ಆರು ತಿಂಗಳು ತುಂಬಿಲ್ಲ, ಆಗಲೇ ಹೆಂಡ್ತಿನ ಮತ್ತೆ ಬಸುರಿ ಮಾಡಿದಾನೆ, ಸುಮಿತ್ರನ ಮಗಳು ಈ ಸಾರಿ ಊರಿಗೆ ಬರಲ್ಲ ಅಂದ್ಲಂತೆ, ಅದೇನೋ

ಡೆಲ್ಲಿಗೋ ಕಲ್ಕತ್ತಕ್ಕೋ ಟೂರ್ ಹೋಗ್ತಾರಂತೆ, ಅಷ್ಟಕ್ಕೇ ಸುಮಿತ್ರಂಗೆ ತಲೆ ನಿಲ್ತಿಲ್ಲ, ಪೂಜಾರಪ್ಪನ ಹೆಂಡ್ತಿ ನಾಲ್ಕಾಣೆ ತಗೊಂಡು ಒಂದು ಕಾಯಿ ಹೋಳು ಕೊಟ್ಲಲ್ಲ ಅದು ಪೂರ್ತಿ ಕೆಟ್ಟೇ ಹೋಗಿತ್ತು ರೀ. ಇಂಥ ಕೆಲವು ಮಾತುಗಳು ಅಲ್ಲಿ ವಿನಿಮಯಗೊಳ್ಳುತ್ತಿದ್ದವು.

ಇನ್ನು ಕೆಲವರ ಮನೇಲಿ ಹಿಂದುಗಡೆ ಹಿತ್ತಲಿನಲ್ಲಿ ಬಾವಿ ಇರೋದು. ಇಂಥಾ ಮನೆಗಳವರು ಊರಿನ ಬಾವಿ ಕಟ್ಟೆಗೆ ಹೋಗುತ್ತಿರಲಿಲ್ಲ. ಆಗಿನ ಕಾಲದಲ್ಲಿ ಬಾವಿ ಬತ್ತೋದು ಬಹಳ ಅಪರೂಪ. ಮಳೆಗಾಲದಲ್ಲಂತೂ ಕೊಡದಿಂದ ನೀರು ತುಂಬಿಕೊಳ್ಳುವಷ್ಟು ಮೇಲೆ ನೀರು ಇರುತ್ತಿತ್ತು. ತಮ್ಮ ಮನೆಯಲ್ಲಿ ಬಾವಿ ಇಲ್ಲದಿರೋರು, ಮನೆಯಿಂದ ಬಾವಿ ಕಟ್ಟೆ ದೂರ ಅಂದುಕೊಂಡೋರು ಇಂಥವರ ಮನೆಗಳಿಂದಲೇ ತಮ್ಮ ಮನೆಗೆ ನೀರು ಸೇದಿಕೊಳ್ಳುತ್ತಿದ್ದರು. ಆಗೆಲ್ಲಾ ಮಾತಿಗೆ ಜನ ಸಿಗೋದೇ ಅಪರೂಪ. ಅದಕ್ಕೇ ಕೆಲವರು ಅಷ್ಟು ದೂರ ಬಾವಿ ಕಟ್ಟೆಗೆ ಯಾಕೆ ಹೋಗ್ತೀರ ನಮ್ಮನೇಲೇ ಬಂದು ನೀರು ಸೇದ್ಕೊಂಡು ಹೋಗಿ ಅನ್ನೋರು. ಆಗ ಸಂಜೆ ಐದರ ಸುಮಾರಿಗೆ ನೀರು ಸೇದೋಕೆ ಯಾರೋ ಒಬ್ಬರು ಬರ್ತಾರೆ ಅಂತ ಗೊತ್ತಾದರೆ ಒಂದಿಬ್ಬರು ಅಲ್ಲಿ ಸೇರೋರು. ಏನು ಅಡಿಗೆ ಮಾಡಿದ್ರಿ ಅನ್ನೋದರಿಂದ ಪ್ರಾರಂಭವಾಗಿ ಅವರವರು ಕೇಳಿದ ಮಾತುಗಳನ್ನು ವಿನಿಮಯ ಮಾಡಿಕೊಳ್ಳೋರು. ಮಾಡಿದ ಅಡುಗೆ ಕೆಟ್ಟು ಹೋಗಿದ್ರೆ, ಹೊಸ ರುಚಿ ಮಾಡೋಕೆ ಹೋಗಿ ಅದ್ವಾನವಾದರೆ, ಅತ್ತೆ ಮಾವ ಬರ್ತಾರೆ ಅನ್ನೋದಾದರೆ, ಯಜಮಾನರು ಕೆಲಸದ ನಿಮಿತ್ತ ಬೇರೆ ಊರಿಗೆ ಹೋಗುತ್ತಾರೆ ಅನ್ನೋದಾದರೆ, ಇವುಗಳೆಲ್ಲಾ ಬಾವಿ ಕಟ್ಟೆಯ ಬಳಿ ಚರ್ಚೆಯಾಗುತ್ತಿದ್ದವು. ಪಾಪ ಆಗಿನ ಕಾಲದಲ್ಲಿ ಮನರಂಜನೆ ಅಂದರೆ ಇದೇ. ರೇಡಿಯೋ ಇಲ್ಲದ ದಿನಗಳು, ಟಿವಿ ಅಂದ್ರೆ ಏನೆಂದು ತಿಳಿಯದ ದಿನಗಳು, ಪೇಪರ್ ತರಿಸದಿರುವ ಮನೆಗಳು, ತರಿಸಿದರೂ ಓದಿನಲ್ಲಿ ಆಸಕ್ತಿ ಇಲ್ಲದ ದಿನಗಳು. ಹಾಗಿರುವಾಗ ಸಮಯ ಕಳೆಯಲು ಭಾವಿ ಕಟ್ಟೆಯಂಥ ಸ್ಥಳ ಬಿಟ್ಟರೆ ಬೇರೆ ಇರಲಿಲ್ಲ. ಬೇರೆ ಊರಿಗೆ ಹೋದವರು ಯಾವುದಾದರೂ ಸಿನಿಮಾ ನೋಡಿಕೊಂಡು ಬಂದುಬಿಟ್ಟಿದ್ರೆ ಆ ಸಿನಿಮಾದ ಕಥೆಯನ್ನು ನಾಲ್ಕು ಜನಕ್ಕೆ ಹೇಳೋತನಕ ಅವರಿಗೆ ನೆಮ್ಮದಿ ಇರುತ್ತಿರಲಿಲ್ಲ. ಈ ಕಥೆ ಹೇಳೋದಕ್ಕೆ ಬಾವಿ ಕಟ್ಟೆಯೇ ಸೂಕ್ತ ಸ್ಥಳ.

ಇನ್ನು ಮನೇಲಿ ಏನಾದರೂ ವಿಶೇಷ ತಿಂಡಿ ಮಾಡಿದ್ರೆ ಅದೂ ಭಾವಿ ಕಟ್ಟೆಯಲ್ಲಿ ವಿತರಣೆಯಾಗುತ್ತಿತ್ತು. ನೀರು ಸೇದಿಕೊಂಡು ಬರೋಕೆ ಅಂತ ಹೊರಟರೆ ಪಾಪ ಅವರೆಲ್ಲಾ ಬಂದಿರ್ತಾರೆ ಅಂತ ಒಂದಿಷ್ಟು ತಿಂಡಿಯನ್ನು ಬಾವಿ ಕಟ್ಟೆಗೇ ತಗೊಂಡು ಹೋಗೋರು. ರಂಗಮ್ಮ ಇವತ್ತು ಮನೇಲಿ ಆಂಬೊಡೆ ಮಾಡಿದ್ದೆ. ಆಂಬೊಡೆ ಅಂದ್ರೆ ನಿಮಗಿಷ್ಟ ಅಲ್ವಾ ಅದಿಕ್ಕೆ ಒಂದೆರಡು ಸೆರಗಿನಲ್ಲಿ ಕಟ್ಕೊಂಡು ಬಂದೆ. ಇಲ್ಲದಿದ್ದರೆ ಮನೇಲಿ ಎಲ್ಲಾನೂ ಅವುಗಳೇ ತಿಂದು ಮುಗಿಸುತ್ವೆ ಅನ್ನೋರು. ಬಾವಿ ಕಟ್ಟೆಗೆ ನೀರು ಸೇದಲು ಯಾರಾದರೂ ಬಂದರು ಅಂದರೆ ಅವರನ್ನು ಹುಡುಕಿಕೊಂಡು ಇನ್ನೊಬ್ಬರು ಬರೋರು. ಅಲ್ಲಿಗೆ ಬೆಳಗಿನಿಂದ ಅಲ್ಲಿಯವರೆಗೂ ಮನೆಯಲ್ಲಿ ನಡೆದ ವಿದ್ಯಮಾನಗಳನ್ನು ಮಾತಾಡಿಕೊಳ್ಳುತ್ತಿದ್ದರು. ಅವರುಗಳಲ್ಲಿ ಯಾರಾದರೂ ಒಂದೆರಡು ದಿನಗಳ ಮಟ್ಟಿಗೆ ಮೈಸೂರಿಗೋ ಬೆಂಗಳೂರಿಗೋ ಹೋಗಿ ಬಂದರು ಅಂದರೆ ಅವರು ಹಿಂದಿರುಗಿ ಬರೋದನ್ನೇ ಕಾಯುತ್ತಿದ್ದರು. ಇಲ್ಲಿಂದ ಬಸ್ಸು ಹತ್ತಿದಾಗಿನಿಂದ ಅಲ್ಲಿ ಬಸ್ಸಿಳಿದು ಮನೆಗೆ ಹೋಗಿದ್ದು, ಮದುವೆ ಮನೆ ಸಡಗರ, ವೈಭವ, ಹೆಣ್ಣು ಅಲಂಕರಿಸಿಕೊಂಡಿದ್ದ ರೀತಿ, ಇವೆಲ್ಲಾ ಮಾತಿನಲ್ಲಿ ಬರುತ್ತಿದ್ದವು. ಅಂಥಾ ದಿವಸಗಳಲ್ಲಿ ಬಾವಿ ಕಟ್ಟೆ ಜಾಮ್ ಪ್ಯಾಕ್ಡ್ ಅಂತಾರಲ್ಲ ಹಾಗಾಗಿರೋದು. ನೀರು ತರೋಕೆ ಹೋದೋಳು ಇನ್ನೂ

ಹಿಂದಿರುಗದೇ ಹೋದರೆ ಮನೇಲಿ ಅಪ್ಪ ಅನಿಸಿಕೊಂಡವನು ಮಗನನ್ನೋ ಮಗಳನ್ನೋ ಕರೆದು ನೋಡು ನಿಮ್ಮಮ್ಮ ನೀರು ತರ್ತಿನಿ ಅಂತ ಹೋದೋಳು ಇನ್ನೂ ಬಂದಿಲ್ಲ. ಹೋಗಿ ಕರ್ಕೊಂಡು ಬಾ ಅಂತ ಕಳಿಸೋರು. ಈ ಹೆಂಗಸರು ಬಾವಿ ಕಟ್ಟೆಯ ಬಳಿ ಸೇರಿದರೆ ಬರೀ ಮಾತೇ ಅನ್ನೋದು ಊರಿನ ಜನರಿಗೆಲ್ಲಾ ಗೊತ್ತು. ಅವರುಗಳೂ ಪಾಪ ಮಾತಾಡ್ಕೊಳ್ಳಿ ಬಿಡಿ ಅಂತ ಸುಮ್ಮನಿರೋರು.

ಕೆಲವರು ಬಾವಿ ಕಟ್ಟೆಗೆ ಹೋಗೋಲ್ಲ. ಅಂಥವರನ್ನು ಬಾವಿ ಕಟ್ಟೆ ಬಳಿ ಬರಮಾಡಿಕೊಳ್ಳೋದು ಹೇಗೆ. ಅದಕ್ಕೂ ಒಂದು ಉಪಾಯ ಮಾಡಿರೋರು. ಯಾರಿಂದಲಾದರೂ ಹೇಳಿ ಕಳಿಸಬೇಕು ಎಂದರೆ ಅದಕ್ಕೆ ಮಕ್ಕಳೇ ಸೂಕ್ತ. ತಮ್ಮ ಮನೆಯ ಚಿಲ್ಟಾರಿಯನ್ನು ಕರೆದು ಹೋಗು ಸುಬ್ಬಮ್ಮನವರನ್ನು ಸಂಜೆ ಬಾವಿ ಕಟ್ಟೆಯ ಬಳಿ ಬರಬೇಕಂತೆ ಅಂತ ಅಮ್ಮ ಹೇಳಿದಾರೆ ಅನ್ನು. ಪಂಕಜಮ್ಮನವರ ಮನೆ ಹತ್ರ ಇರೋ ಬಾವಿ ಕಟ್ಟೆ ಅನ್ನು ಇಲ್ಲದಿದ್ದರೆ ಅವರು ಗೋಪಮ್ಮನ ಮನೆ ಹತ್ರ ಇರೋ ಬಾವಿ ಕಟ್ಟೆಗೆ ಹೋದಾರು ಅಂತ ಹೇಳಿ ಕಳಿಸೋರು. ಇದು ಮಾತುಕತೆ ಸಂವಹನದ ವಿಧಾನ.

ಮನೆಯಲ್ಲಿ ಹೊಸದಾಗಿ ಮದುವೆಯಾದ ಗಂಡು ಹೆಣ್ಣುಗಳಿದ್ದರೆ ಅವರಿಗೂ ಪ್ರಶಸ್ತವಾದ ಸ್ಥಳ ಅಂದರೆ ಬಾವಿ ಕಟ್ಟೆಯೇ. ಇಲ್ಲದಿದ್ದರೆ ಮನೆಯಲ್ಲಿ ಏಕಾಂತವಿಲ್ಲ. ಈಗಿನ ಕಾಲದ ಹಾಗೆ ಪ್ರತ್ಯೇಕ ಕೋಣೆಗಳಿರುತ್ತಿರಲಿಲ್ಲ. ಇದ್ದರೂ ಬಾಗಿಲು ಹಾಕಿಕೊಳ್ಳುವ ಹಾಗಿರಲಿಲ್ಲ. ಮನೆಯಲ್ಲಿ ಮಾತಾಡಿದರೆ ಎಲ್ಲರಿಗೂ ಕೇಳುತ್ತದೆ ಅಂತ ಬಾವಿ ಕಟ್ಟೆಯ ಬಳಿ ಹೋಗೋರು. ಇನ್ನು ಮದುವೆ ನಿಶ್ಚಿತಾರ್ಥಕ್ಕೆ ಬಂದರೆ ನಮ್ಮ ಹುಡುಗ ನಿಮ್ಮ ಹುಡುಗಿಯ ಬಳಿ ಏಕಾಂತವಾಗಿ ಮಾತಾಡಬೇಕಂತೆ ಅಂದರೆ ( ಇಂಥಾ ಸಂದರ್ಭಗಳು ಆಗಿನ ಕಾಲಕ್ಕೆ ತೀರಾ ಅಪರೂಪ ಅಂದ್ಕೊಳಿ ) ಆಗಲೂ ಅದಕ್ಕೆ ಯೋಗ್ಯ ಸ್ಥಳ ಬಾವಿ ಕಟ್ಟೆಯೇ. ಅಮ್ಮನೇ ಮಗಳಿಗೆ ಹೋಗು ಬಾವಿ ಕಟ್ಟೆಯ ಬಳಿ ಮಾತಾಡ್ಕೊಂಡು ಬನ್ನಿ ಅಂತ ಹೇಳಿ ಕಳಿಸೋಳು. ಜೊತೆಗೆ ಒಂದು ಚಿಲ್ಟಾರಿಯನ್ನೂ ಕಳಿಸಿ ಅವರು ಏನು ಮಾತಾಡ್ತಾರೆ ಕೇಳ್ಕೊಂಡು ಬಾ ಅಂತ ಹೇಳಿರೋದು.

ಬಾವಿ ಕಟ್ಟೆ ಬರೀ ಇಂಥಾ ವಿಚಾರಗಳಿಗೇ ಸೀಮಿತ ಅಂತಲ್ಲ. ಎಲ್ಲ ರೀತಿಯ ಮಾತುಕತೆಗೂ ಬಾವಿ ಕಟ್ಟೆಯೇ ಸೂಕ್ತ. ಗಂಡ ಹೆಂಡತಿ ಮನೇಲಿ ಜಗಳ ಆಡುತ್ತಾರೆ. ಗಂಡ ಹೆಂಡತಿಗೆ ನಾಲ್ಕು ಬಾರಿಸುತ್ತಾನೆ. ಹೆಂಡತಿ ಅಳುತ್ತಾ ಹೋಗೋದು ಬಾವಿ ಕಟ್ಟೆಯ ಬಳಿಗೇ. ಯಾಕೋ ಅಷ್ಟು ಜೋರಾಗಿ ಹೊಡೆದೆ. ನಿನ್ನ ಹೆಂಡತಿ ಬಾವಿ ಕಟ್ಟೆ ಬಳಿ ಅಳ್ತಾ ಕೂತಿದಾಳೆ. ಎಲ್ಲಾದ್ರೂ ಬಾವಿಗೆ ಹಾರ್ಕೊಂಡ್ರೆ ಅಂತ ಯಾರಾದರೂ ಕೇಳಿದರೆ ಗಂಡ ಆ ಧೈರ್ಯ ಅವಳಿಗೆ ಇಲ್ಲ, ಯಾಕೆಂದ್ರೆ ಅವಳು ಈ ಜನ್ಮದಲ್ಲಿ ನನ್ನನ್ನು ಗೋಳು ಹುಯ್ಕೊಳ್ಳೋದು ಇನ್ನೂ ಮುಗಿದಿಲ್ಲ ಅನ್ನೋರು. ಸ್ವಲ್ಪ ಹೊತ್ತು ಅತ್ತು ಹಗುರಾಗಿ ಮನೆಗೆ ವಾಪಸ್ ಬಂದರೆ ಗಂಡ ಅದ್ಯಾಕೆ ವಾಪಸ್ ಬಂದೆ ಅಂದ್ರೆ ನಿಮಗೆ ಕಾಫಿಗೆ ಹೊತ್ತಾಯ್ತಲ್ಲ ಅನ್ನೋಳು. ಕಾಫಿಗೆ ಹೊತ್ತಾದದ್ದು ನನಗೋ ನಿನಗೋ ಅಂತ ಗಂಡ ತಮಾಷೆ ಮಾಡ್ತಿದ್ದ.

ಬಾವಿ ಕಟ್ಟೆಯ ಬಳಿ ಬೆಳಗಿನ ಹೊತ್ತು, ಸಂಜೆಯ ಹೊತ್ತು ಹಿರಿಯರು ಕೂತು ಹರಟೆ ಹೊಡೆಯೋರು. ಕೆಲವು ವೇಳೆ ಭಾವಿ ಕಟ್ಟೆಗಳು ಪಂಚಾಯ್ತಿ ಕಟ್ಟೆಗಳೂ ಆಗಿರುತ್ತಿದ್ದವು. ಹಾಗೆ

ಕೂತು ಮಾತಾಡುತ್ತಿರುವಾಗ ನೀರು ಸೇದಲು ಬರುವ ಹೆಂಗಸರೊಂದಿಗೂ ಲೋಕಾಭಿರಾಮ ಆಗುತ್ತಿತ್ತು. ಭಾವಿ ಕಟ್ಟೆ ಒಂದು ಕೇಂದ್ರ ಸ್ಥಳವಾಗಿರೋದು. ಗೃಹ ಪ್ರವೇಶದಂತಹ ಸಂದರ್ಭಗಳಲ್ಲಿ ಈ ಬಾವಿಗಳಿಂದಲೇ ಗಂಗೆ ತೆಗೆದುಕೊಂಡು ಹೋಗೋರು. ಪ್ರತಿದಿನ ಬಾವಿ ಕಟ್ಟೆಗೆ ಹೋಗಿ ಅಲ್ಲಿ ಕೂತು ಒಂದಿಷ್ಟು ಹರಟೆ ಹೊಡೆದು ಬರದಿದ್ದರೆ ಕೆಲವರಿಗೆ ನೆಮ್ಮದಿಯೇ ಇರುತ್ತಿರಲಿಲ್ಲ. ಜ್ವರ ಮುಂತಾದ ಕಾಯಿಲೆ ಬಂದು ಮಲಗಿಬಿಟ್ಟಿದ್ದರೆ ಬಾವಿ ಕಟ್ಟೆ ಮಿಸ್ ಮಾಡ್ಕೊತಾ ಇದೀನಿ ಅಂದ್ಕೊಳೋರು.

ಈಗ ಎಲ್ಲರೂ ಬಾವಿ ಕಟ್ಟೆಯನ್ನು, ಬಾವಿ ಕಟ್ಟೆಯ ಮಾತುಗಳನ್ನೂ, ಬಾವಿ ಕಟ್ಟೆಯಂತಹ ಪರಿಸರದ ಅವಿನಾಭಾವ ಸಂಬಂಧಗಳನ್ನೂ ಮಿಸ್ ಮಾಡ್ಕೊತಾ ಇದೀವಿ ಅನಿಸ್ತಿದೆ. ಅಂದಿನ ಬಾವಿ ಕಟ್ಟೆಯ ಜಾಗವನ್ನು ಇಂದಿನ ಬೋರ್ ವೆಲ್ ಗಳು ಆಕ್ರಮಿಸಿಕೊಂಡಿವೆ. ಮೊದಮೊದಲು ಬೋರ್ ವೆಲ್ ನಿಂದ ನೀರನ್ನು ಪಂಪ್ ಮಾಡಿಕೊಳ್ಳಬೇಕಿತ್ತು. ಆದರೆ ಇಂದು ಎಲ್ಲ ಕಡೆ ಅಲ್ಲಿಯೇ ಒಂದು ಟ್ಯಾಂಕ್ ಕಟ್ಟಿ ನಲ್ಲಿ ಹಾಕಿರ್ತಾರೆ. ಆದರೂ ಅಂದಿನ ಬಾವಿ ಕಟ್ಟೆಗೆ ಇಂದಿನ ಬೋರ್‌ವೆಲ್‌ಗಳು ಸಮ ಅಲ್ಲ. ಹೇಗೆಂದರೆ ಅಂದಿನ ಮೌಲ್ಯಗಳಿಗೆ ಇಂದಿನ ಮೌಲ್ಯಗಳು ಸಮವಲ್ಲವೋ ಹಾಗೆ. ಅಂದಿನ ದಿನಗಳು ಅಂದಿಗೆ ಸುಖ, ಇಂದಿನ ದಿನಗಳು ಇಂದಿಗೆ ಸುಖ ಮುಂದಿನ ದಿನಗಳು ಹೇಗೋ ಅಂತ ಅಂದಿನ ಬಾವಿ ಕಟ್ಟೆಯನ್ನು ನೆನೆದು ಬದುಕುವುದೇ ಸುಂದರ ಮತ್ತು ಸೂಕ್ತ. ■

---

## ನುಡಿಮುತ್ತು

ಭೂತಕಾಲವನ್ನು ಬದಲಾಯಿಸಲಾಗುವುದಿಲ್ಲ. ಭೂತಕಲಕ್ಕೆ ಹೆಚ್ಚಿನ ಚಿಂತೆ ನೀಡುವ ಬದಲು ವರ್ತಮಾನವನ್ನು ಚನ್ನಾಗಿ ಚಿಂತಿಸಿ ಭವಿಷ್ಯವನ್ನು ಚನ್ನಾಗಿ ರೂಪಿಸಿಕೊಳ್ಳಿ

***

ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳುವುದು ಒಂದು ಕಲೆ. ಆದರೆ ಎಲ್ಲರೂ ಕಲೆಗಾರರಲ್ಲ

***

ನೀವು ನಿಮ್ಮ ತೋಟವನ್ನು ಅಭಿವೃದ್ಧಿ ಪಡಿಸುವುದರಲ್ಲಿ ಆಸಕ್ತರಾಗಿದ್ದರೆ ಇನ್ನೊಬ್ಬರ ತೋಟ ನಿಮ್ಮದಕ್ಕಿಂತ ಹಸಿರಾಗಿದೆಯೇ ಎಂದು ನೋಡಲು ಸಮಯವೇ ಇರುವುದಿಲ್ಲ.

***

ನಾಯಕತ್ವ ಎಂದರೆ ಎಲ್ಲರಿಗಿಂತ ಹೆಚ್ಚು ಕೆಲಸ ಮಾಡುವುದು, ಅಂದರೆ ಹೆಚ್ಚು ದುಡಿಯುವುದು, ಹೆಚ್ಚು ಅರ್ಥಮಾಡಿಕೊಳ್ಳುವುದು, ಹೆಚ್ಚು ಕನಿಕರ ತೋರಿಸುವುದು ಎಂಬ ಕಲೆ

# ವಿಳಾಸ ವಿಲಾಸ

**ಅಣಕು ರಾಮನಾಥ್**

(ಕೃಪೆ: ಸುಗಮ ಕನ್ನಡ ಪತ್ರಿಕೆ – ಸಿಡ್ನಿ, ಆಸ್ಟ್ರೇಲಿಯಾ)

ಸಪ್ತ ಮಹಾಸಾಗರದಾಚೆ, ಕಡಿದಾದ ಬೆಟ್ಟದ ಪುಟ್ಟ ಗುಹೆಯೊಂದರಿಂದ ನೂರು ಗಾವುದ ದೂರದಲ್ಲಿ ಪಾರಿಜಾತದ ಗಿಡವೊಂದಿದೆ. ಗಿಡದ ಟೊಂಗೆಗಳ ಮಧ್ಯದಲ್ಲಿ ಆರು ಪಕ್ಷಿಗಳು ಗೂಡು ಕಟ್ಟಿಕೊಂಡಿವೆ. ಅವು ಇಟ್ಟಿರುವ ನೂರು ಮೊಟ್ಟೆಗಳಲ್ಲೊಂದರಲ್ಲಿ ನನ್ನ ಪ್ರಾಣ ಅಡಗಿದೆ' ಎಂದ ರಾಕ್ಷಸ. ಅವನ ಬಂಧನದಲ್ಲಿದ್ದ ರಾಜಕುಮಾರಿ ತನ್ನನ್ನು ಅರಸಿ ಬಂದ ಸಣಕಲು ಕಡ್ಡಿ ರಾಜಕುಮಾರನಿಗೆ ಇದನ್ನು ಚಾಚೂ ತಪ್ಪದೆ ಹೇಳಿದಳು. ರಕ್ಕಸನನ್ನು ಕಾಳಗಕ್ಕೆ ಕರೆದು ಹೊಡೆತ ತಿನ್ನುವುದಕ್ಕಿಂತ ಮೊಟ್ಟೆ ಒಡೆಯುವುದೇ ಸುಲಭವಲ್ಲವೇ! ರಾಜಕುಮಾರ ರಾಜಕುಮಾರಿ ಹೇಳಿದ ಅಡ್ರೆಸ್ ತಲುಪಿ ಮೊಟ್ಟೆ ಒಡೆದ. ರಕ್ಕಸ ಸತ್ತ. ರಕ್ಕಸನ ಸಾವಿನ ಸಂತಸವನ್ನು ಇಬ್ಬರೂ ಎಗ್ ಆಮ್ಲೆಟ್ ತಿನ್ನುತ್ತಾ ಹಂಚಿಕೊಂಡರು. ಈ ತರಹದ ಮಕ್ಕಳ ಕಥೆಗಳು ಎನಿತೋ. ಇದರಲ್ಲೇನಚ್ಚರಿ?' ಎಂದಿರೇನು? ಕೊಂಚ ಗಮನಿಸಿ. ಆ ಕಾಲದಲ್ಲಿ ಕ್ರಾಸ್, ಮೇಯ್ನ್, ಡೋರ್ ನಂಬರ್ಗಳು ಏನೂ ಇರಲಿಲ್ಲ, ಶೇರ್ ಲೊಕೇಶನ್' ಎಂದು ಪಕ್ಷಿಗೆ ಮೆಸೇಜ್ ಕಳುಹಿಸಲು ಎಸ್ಸೆಮ್ಮೆಸ್ಸೂ ಇರಲಿಲ್ಲ, ವಾಟ್ಸ್ಯಾಪೂ ಇರಲಿಲ್ಲ. ಜಿಪಿಎಸ್ ಅಂತೂ ಇರಲೇ ಇಲ್ಲ. ವಿಜ್ಞಾನ ಇಷ್ಟು ಮುಂದುವರೆದಿರುವ ಈ ದಿನಗಳಲ್ಲಿಯೂ ನಮಗೆ ತಿಳಿದಿರುವುದು ಪಂಚ ಮಹಾ ಸಾಗರಗಳೇ (ಶಾಂತಿ, ಹಿಂದೂ, ಅಟ್ಲಾಂಟಿಕ್, ಆರ್ಕ್ಟಿಕ್, ಅಂಟಾರ್ಟಿಕ್). ಅದು ಹೇಗೆ ಇನ್ನೆರಡು ಮಹಾಸಾಗರಗಳನ್ನು ಹುಡುಕಿ, ನಂತರ ಅವನ್ನು ದಾಟಿದನವನು? ಸಪ್ತಸಾಗರಗಳ ನಂತರದ ಅಡ್ರೆಸ್ಸೂ ಅಸ್ಪಷ್ಟವೇ. ದೊಡ್ಡ ಬೆಟ್ಟದಲ್ಲಿ ಪುಟ್ಟ ಗುಹೆಯಂತೆ. ಮೊದಲು ದೊಡ್ಡ ಬೆಟ್ಟವಾವುದೆಂದು ಆಲ್ಟೋಮೀಟರ್ ಇಲ್ಲದ ಆ ಕಾಲದಲ್ಲಿಯೂ ಕಂಡುಹಿಡಿದು, ಅದರಲ್ಲಿರುವ ಅಸಂಖ್ಯಾತ ಗುಹೆಗಳಲ್ಲಿ ಪುಟ್ಟದು ಯಾವುದೆಂದು ಕಂಡುಹಿಡಿದು, ಅಲ್ಲಿಂದ ನೂರು ಗಾವುದ (ಯಾವ ದಿಕ್ಕು ತಿಳಿಯದಾದ್ದರಿಂದ ದಶದಿಕ್ಕುಗಳಲ್ಲಿಯೂ ಅಲೆದು ಹುಡುಕಬೇಕಲ್ಲ!) ಸಾಗಿ ಪಾರಿಜಾತದ ಮರ ಕಂಡುಹಿಡಿಯಬೇಕು. ಜಿಪಿಎಸ್ ಇರುವ ಈಗಿನ ದಿನಗಳಲ್ಲಿಯೂ ಬೆಟ್ಟ, ಗವಿ, ಗಿಡಗಳ ಬಳಿ ನೆಟ್ವರ್ಕ್ ಸಿಗದಿರುವುದರಿಂದ ಅಡ್ರೆಸ್ ಹುಡುಕುವುದು ಕಷ್ಟವಿರುವಾಗ ಆ ರಾಜಕುಮಾರ ಆ ಮೊಟ್ಟೆಯನ್ನು ಹುಡುಕಿ ಹಿಡಿದನೆಂದರೆ ಅದ್ಭುತವೇ ಸೈ!

'ಈ ಅಡ್ರೆಸ್ ಎಲ್ಲಬರತ್ತೆ ಹೇಳಿ?' ಮಲ್ಲೇಶ್ವರದ ಮಾಸ್ತಿ ಟ್ರಸ್ಟ್‌ನ ವಿಳಾಸ ಹಿಡಿದು ನಿಂತೆ. '21, 10ನೆಯ ಕ್ರಾಸ್, ಎಲ್ಲಪ್ಪ ಗಾರ್ಡನ್, ಮಲ್ಲೇಶ್ವರ' ಎಂದಿತ್ತು ವಿಳಾಸ. ಹತ್ತನೆಯ ಕ್ರಾಸ್ ಸುಲಭವಾಗಿ ದೊರಕಿತು. ಎಲ್ಲಪ್ಪ ಎಂದು ಕೇಳುವುದಕ್ಕೆ ಮುಂಚೆಯೇ ಎಲ್ಲಪ್ಪ ಗಾರ್ಡನ್ನೂ ದೊರಕಿತು. ಆದರೆ 21? ನಾನು ನಿಂತಿದ್ದದ್ದು 25ನಂತರ 21 ಇರಬೇಕಿತ್ತು. 25ರ ಎಡದ ಕಟ್ಟಡದ ನಂಬರಿನತ್ತ ನೋಡಿದೆ. 26 ಎಂದಿತ್ತು. ನಂತರ 27. ನಂತರ ರಸ್ತೆ. ರಸ್ತೆಯಾಚೆಯ ಮೂಲೆಯ ಕಟ್ಟಡದ ಸಂಖ್ಯೆ 39! ರಸ್ತೆ ಇದ್ದದ್ದು 30 ಅಡಿಗಳು. ಅಷ್ಟರಲ್ಲಿ 12 ಮನೆಗಳು ಒಂದು ಕಾಲದಲ್ಲಿದ್ದು ಉರುಳಿರಲು ಸಾಧ್ಯವೆ? ಇರಲಿ. ನನಗೆ ಬೇಕಾದುದು 21 ಆದ್ದರಿಂದಲೂ ಈ ದಿಕ್ಕಿನಲ್ಲಿ ಸಂಖ್ಯೆ ಏರುತ್ತಿದ್ದುದರಿಂದಲೂ 25ರ ಬಲದ ಕಟ್ಟಡದ ಸಂಖ್ಯೆಯೇನೆಂದು ನೋಡಿದರೆ – 85! ಎಲ್ಕೆಜಿ ಮಗುವಿನ ಲೆಕ್ಕದ ಪ್ರಕಾರವೂ 25ರ ಹಿಂದಿನ ಸಂಖ್ಯೆ 24ಎ ಇರಬೇಕಿತ್ತು. 85 ಬಂದುದಾದರೂ ಹೇಗೆ? ಅಸಲಿಗೆ ಈ ಕಟ್ಟಡದ ಸಂಖ್ಯೆ 24ಎ

ಇದ್ದು, ಯಾರೋ ನ್ಯೂಮರಾಲಜಿಸ್ಟ್ ನಿನ್ನ ಕಟ್ಟಡದ ಸಂಖ್ಯೆಯನ್ನು ಬೋರ್ಡಿನಲ್ಲಾದರೂ 85 ಎಂದು ಬದಲಾಯಿಸದಿದ್ದರೆ ನಿನ್ನ ಮಗ ಬ್ಲೂವೇಲ್ ಆಟಕ್ಕೆ ಅಧೀನನಾಗುತ್ತಾನೆ. ನಿನ್ನ ವ್ಯಾಪಾರ ರೂಪಾಯಿಯ ಮೌಲ್ಯದಂತೆ ದಿನೇ ದಿನೇ ತಗ್ಗುತ್ತದೆ' ಎಂದು ಹೆದರಿಸಿದುದರಿಂದ 85 ಆಗಿರಬಹುದೇ ಎಂದು ಆಲೋಚಿಸುತ್ತಾ ನಿಂತೆ.

ಇಲ್ಲಿ ನಂಬರ್ಗಳು ಸರಿಯಿಲ್ಲ ಸಾರ್. ಪಕ್ಕದ ಕ್ರಾಸಲ್ಲಿ ಮೂರನೇ ಬಿಲ್ಡಿಂಗಲ್ಲಿದೆ ನೋಡಿ 21' ಎಂದನೊಬ್ಬ ಸ್ಥಳ ವಿಳಾಸ ತಜ್ಞ. 10ನೆಯ ಕ್ರಾಸ್ ಮಲ್ಲೇಶ್ವರ'ದ ಅಡ್ರೆಸ್ ಹೊಂದಿದ ಕಟ್ಟಡ ಗಲ್ಲಿಯಲ್ಲಿತ್ತು!

ವಿಳಾಸ ಹುಡುಕುವ ತಹತಹ ಇಂದು ನಿನ್ನೆಯದಲ್ಲ. ಆಧುನಿಕ ಕಾಲದವರಾದ ನಾವೇ ಯಾವಾಗಲೂ hurry hurry ಎನ್ನುವ ಆತುರಮುಖರು ಎಂದುಕೊಂಡಿದ್ದೇವೆ. ಆದರೆ ಪುರಾಣವನ್ನು ಅವಲೋಕಿಸಿದರೆ ಅದು ತಪ್ಪೆಂದು ತಿಳಿಯುತ್ತದೆ. ಭಸ್ಮಾಸುರನು ಶಿವನಿಂದ ವರ ಪಡೆದಾದ ನಂತರ ಎಲ್ಲರ ತಲೆಯ ಮೇಲೂ ಕೈ ಇಡಲು ಆರಂಭಿಸಿ, ಹರನ ತಲೆಯಮೇಲೂ ಕೈಯಿರಿಸಲೆಂದು ಎಲ್ಲಿಹನು ಹರ?' ಎಂದು ಹುಡುಕಾಡಲು ತೊಡಗಿದಂದು ಅಡ್ರೆಸ್ ಹುಡುಕುವ ಕಾಯಕ ಆರಂಭವಾಯಿತೆನಿಸುತ್ತದೆ. ಇವೆಲ್ಲ ದೇವಲೋಕದ ಪ್ರಿ–ಸಮುದ್ರಮಥನ ಪೀರಿಯಡ್'ದಾದರೆ, ಭೂಲೋಕದಲ್ಲಿ ಅಡ್ರೆಸ್ ಹುಡುಕುವುದು ಆರಂಭವಾದದ್ದು ಕೃತಯುಗದಲ್ಲೇ. ಹಿರಣ್ಯಕಶಿಪುವಿಗೆ ಹರಿಯನ್ನು ನೋಡುವ ಕಾತರ. ಆದ್ದರಿಂದ ಪ್ರಹ್ಲಾದನನ್ನು ಪೀಡಿಸುತ್ತಾ ಎಲ್ಲಿಹನು ಹರಿ? ಆ ಕಂಬದಲ್ಲಿರುವನೆ? ಈ ಕಂಬದಲ್ಲಿರುವನೆ? ತೋರಿಸು, ಪ್ಲೀಸ್ ಹರಿ' ಎಂದುದು ಭುವಿಯಲ್ಲಿ ಕೈಗೊಂಡ ಮೊದಲ ಅಡ್ರೆಸ್ ಹುಡುಕಾಟದ ಪ್ರಸಂಗವೆನ್ನಬಹುದು.

ಪುರಾಣದ ಪ್ರಸಂಗಗಳೆಂದಮೇಲೆ ಅವುಗಳನ್ನು ಕುರಿತು ನಾಟಕಗಳು ಇರಲೇಬೇಕಲ್ಲ. ಪ್ರಹ್ಲಾದ ಹರಿ ಎನ್ನುತ್ತಿದ್ದಾನೆ. ಹಿರಣ್ಯಕಶಿಪು ಎಲ್ಲಿಹನು ಹರಿ? ಈ ಕಂಬದಲ್ಲಿರುವನೇ?' ಎನ್ನುತ್ತಾ ಗದೆಯನ್ನೆತ್ತಿ ಕಂಬಕ್ಕೆ ಹೊಡೆಯಲು ಉಪಕ್ರಮಿಸಿದ್ದಾನೆ. ಆದರೆ ಆ ಕಂಬದಲ್ಲಿ ಇರಬೇಕಾಗಿದ್ದ ನರಸಿಂಹ ಏನೋ ಟೆಕ್ನಿಕಲ್ ಪ್ರಾಬ್ಲಂನಿಂದ ಇನ್ನೊಂದು ಕಂಬದಲ್ಲಿ ಅಡಗಿರುತ್ತಾನೆಂದು ಪ್ರಹ್ಲಾದನಿಗೆ ನಿರ್ದೇಶಕ ಹೇಳಿದ್ದು, ಹಿರಣ್ಯಕಶಿಪುವಿಗೆ ಹೇಳಲು ಮರೆತಿದ್ದ. ರಕ್ಕಸ ಪಾತ್ರಧಾರಿ ಕಂಬಕ್ಕೆ ಬಲವಾಗಿ ಏಟು ಕೊಟ್ಟೇಬಿಟ್ಟ. ನಾಟಕದ ಇಡೀ ಸೆಟ್ ಕಂಪಿಸಿತು. ಪ್ರಹ್ಲಾದ ಕೂಡಲೆ ಆ ಕಂಬ ಮತ್ತು ಹಿರಣ್ಯಕಶಿಪುವಿನ ಮಧ್ಯೆ ಬಂದು ನಿಂತು ಈ ಕಂಬದಲ್ಲಿಲ್ಲ, ಆ ಕಂಬದಲ್ಲಿರುವನು' ಎಂದ. ಏನೆಂದೆ? ನಿನ್ನ ಹರಿ ಎಲ್ಲೆಡೆಯೂ ಇರುವನೆಂದೆಯಲ್ಲವೇ! ಈಗ ಈ ಕಂಬದಲ್ಲಿಲ್ಲವೆನ್ನುವೆಯಲ್ಲ, ಏನು ಕಾರಣ?' ಎಂದು ಘರ್ಜಿಸಿದ ಹಿರಣ್ಯಕಶಿಪು.

ಆ ಕಂಬ ವಾಸ್ತು ಪ್ರಕಾರ ಇಲ್ಲ, ಆದ್ದರಿಂದ ಹರಿ ವಿಳಾಸ ಬದಲಿಸಿದ್ದಾನೆ' ಎಂದುತ್ತರವಿತ್ತ ಆಧುನಿಕ ಪ್ರಹ್ಲಾದ. ವಾಸ್ತುಶಾಸ್ತ್ರದ ಹುಚ್ಚು ಹರಡಿರದಿದ್ದ ಕೃತಯುಗದಲ್ಲಿ ನರಸಿಂಹ ಒಡೆದ ಕಂಬದಿಂದ ಹೊರಬರದಿದ್ದರೆ ಆ ಒರಿಜಿನಲ್ ಪ್ರಹ್ಲಾದ ಏನೆಂದು ಉತ್ತರಿಸುತ್ತಿದ್ದನೋ ಏನೋ!

ಕೃತದಲ್ಲಿಯೇ ಒಳ್ಳೆಯ ಅಡ್ರೆಸ್ ಹೊಂದಿದ್ದವನೊಬ್ಬ ಅದಕ್ಕಿಂತ ಕೆಟ್ಟದಾದ ಅಡ್ರೆಸ್ಗೆ ಹೋಗುವುದರ ಮೂಲಕ ಪರ್ಮನೆಂಟ್ ಅಡ್ರೆಸ್' ಮತ್ತು ಟೆಂಪೊರರಿ ಅಡ್ರೆಸ್'ಗಳ ಪರಿಕಲ್ಪನೆಯನ್ನು ಜಗಕ್ಕೆ ನೀಡಿದ. ಝುಮ್ಮನೆ ಮನಬಂದಂತೆ ದಾನ ಮಾಡುತ್ತಿದ್ದ ರಾಜ

ಬಲೀಂದ್ರ ವಾಮನನ ಕಾಲ್ತುಳಿತಕ್ಕೊಳಗಾಗಿ ಇದ್ದ ರಾಜ್ಯವನ್ನು ಬಿಟ್ಟು ಪಾತಾಳಕ್ಕೆ ಸೇರಿದ. ಆದರೆ ಪ್ರತಿ ಬಲಿಪಾಡ್ಯಮಿಯಂದು ತನ್ನ ರಾಜ್ಯಕ್ಕೆ ಬರುತ್ತಾನೆ. ಹೀಗಾಗಿ ಬಲಿಪಾಡ್ಯಮಿಯಂದು ಬಲಿಯದು ಟೆಂಪೊರರಿ ಅಡ್ರೆಸ್ ಮತ್ತು ಮಿಕ್ಕ ದಿನಗಳಲ್ಲಿ ಪಾತಾಳದ ಪರ್ಮನೆಂಟ್ ಅಡ್ರೆಸ್ ಎಂದಾಗಿ, ಪಾತಾಳ ಮತ್ತು ಭೂಮಿಯ ಸಿಟಿಝನ್ಶಿಪ್ ಹೊಂದುವುದರ ಮೂಲಕ ಬಲಿ ಡ್ಯುಯಲ್ ಸಿಟಿಝನ್ಶಿಪ್ ಹೊಂದಿದ ಮೊದಲ ವ್ಯಕ್ತಿಯೆಂಬ ಖ್ಯಾತಿಗೆ ಭಾಜನನಾದ. ಅಲ್ಲದೆ, ಪವರ್ಫುಲ್ ಪೀಪಲ್ನ ಎದುರು ಹಾಕಿಕೊಂಡರೆ ಏರಿಯಾ ಬಿಡುವಂತಹ ಪರಿಸ್ಥಿತಿ ಬರುತ್ತದೆ ಎನ್ನುವ ಅಂಶವೂ, 'ಇಫ್ ಯು ಆರ್ ಟೂ ಗುಡ್ ಯು ವಿಲ್ ಬಿ ಸಂಬಡಿ ಎಲ್ಸ್ ಫುಡ್' ಎಂಬುದೂ ಅಸ್ತಿತ್ವಕ್ಕೆ ಬಂದವು.

ಕೃತಯುಗದಿಂದ ತ್ರೇತಾಯುಗಕ್ಕೆ ಬಂದರೆ ಸಾಕ್ಷಾತ್ ಶ್ರೀರಾಮನೇ ವ್ಯಕ್ತಿ/ವಿಳಾಸ ಹುಡುಕುವುದರಲ್ಲಿ ತೊಡಗುವುದು ಕಂಡುಬರುತ್ತದೆ. ಯಾವುದೋ ಅಡ್ರೆಸ್ ಹುಡುಕಿಕೊಂಡು ಹೋದಾಗ, ಸ್ಥಳೀಯ ಸಹೃದಯಿಗಳು ಸಹ ನಮ್ಮೊಡನೆ ಒಂದಷ್ಟು ದೂರ ಬಂದು ನಮ್ಮೊಡನೆಯೇ ಅಡ್ರೆಸ್ ಹುಡುಕಿಕೊಡುವಂತೆಯೇ ಅಂದೂ ರಾವಣನ ಅಡ್ರೆಸ್ ಹುಡುಕಲು ಸುಗ್ರೀವನೂ ಜೊತೆಗೆ ಬಂದ. ವಿಳಾಸ ವ್ಯಕ್ತವಾಗಿದ್ದಾಗ ಹುಡುಕುವುದು ಒಂದು ವಿಧವಾದರೆ ಅವ್ಯಕ್ತವಾಗಿರುವಾಗ ಹುಡುಕುವುದು ಇನ್ನೊಂದು ವಿಧ ಎನ್ನುವುದಕ್ಕೆ ದಶಾವತಾರ' ಚಿತ್ರದ ಗೋದಾವರಿ ದೇವಿ ಮೌನವಾಂತಿಹೆ ಏಕೆ, ವೈದೇಹಿ ಏನಾದಳು' ಎಂಬ ಗೀತೆಯೇ ಸಾಕ್ಷಿ. ನಮ್ಮ ಹಿರಿಯರೊಬ್ಬರನ್ನು ಆ ಕಾಲದಲ್ಲಿ ತರುಜಲಮರುತಗಳು ಮಾತನಾಡುತ್ತಿದ್ದವೇನು?' ಎಂದು ಕೇಳಿದೆ.

ಹೌದು. 'ಎ ಪಿಕ್ಚರ್ ಈಸ್ ವರ್ತ್ ಎ ತೌಸಂಡ್ ವರ್ಡ್ಸ್' ಅಂತ ಕೇಳಿಲ್ಲವೇನು? ಎಲೈ ಬಳ್ಳಿಯೆ, ನೀನು ಸೀತೆಯನ್ನು ಕಂಡೆಯಾ ಎಂದು ರಾಮ ಪ್ರಶ್ನಿಸಿದ' ಎಂದರೆ ಪ್ರಶ್ನಿಸಿದ ಎಂದು ಅರ್ಥವಲ್ಲ. ಬಳ್ಳಿಯನ್ನು ಸವರಿಕೊಂಡು ಸೀತೆ ಮತ್ತು ಅಪಹರಣಕಾರ ಸಾಗಿದ್ದರೆ ಸವರಿದ ಭಾಗ ಅಥವ ಲತೆಯ ಕಾಂಡಕ್ಕೆ ಸಿಲುಕಿರಬಹುದಾದ ಅಪಹರಣಕಾರನ ಅಥವ ಅಪಹೃತಳ ಬಟ್ಟೆಯ ತುಂಡು ಕಣ್ಣಿಗೆ ಬಿದ್ದು ಕೃತ್ಯಕ್ಕೆ ಸಾಕ್ಷಿಯಾಗುತ್ತಿತ್ತು ಎಂದರ್ಥ. ನದಿಯೇ, ಸೀತೆಯನ್ನು ಕಂಡೆಯಾ?' ಎಂದರೆ ನದಿಯಲ್ಲಿ ತೆಪ್ಪದ ಸುಳಿವೇನಾದರೂ ಕಂಡಿತೇ ಎಂದು ರಾಮ ನೋಡಿದ ಎಂದು ಅರ್ಥ. ಸುಳಿವೇ ವಿಳಾಸದ ಜೀವಾಳವಯ್ಯ' ಎಂದರು. ಅನಂತ ಚತುರ್ದಶಿಯ ವ್ರತಕಥೆಯಲ್ಲಿಯೂ ಎಲೈ ನದಿಯೆ, ನೀನೇನಾದರೂ ಅನಂತಪದ್ಮನಾಭನನ್ನು ಕಂಡೆಯಾ? ಎಲೈ ಬಂಡೆಯೆ, ನೀನೇನಾದರೂ ಅನಂತಪದ್ಮನಾಭನನ್ನು ಕಂಡೆಯಾ?' ಎಂದು ಉಲ್ಲೇಖವಾಗಿರುವುದೂ ತ್ರೇತದ ವಿಳಾಸ ಪತ್ತೆ ಹಚ್ಚುವಿಕೆಯ ಮುಂದುವರಿದ ಭಾಗವೇ ಅನಿಸುತ್ತದೆ.

ದ್ವಾಪರದಲ್ಲಂತೂ ವಿಳಾಸ ಪತ್ತೆ ಹಚ್ಚುವುದಕ್ಕೆ ಪರ್ವ ಕಾಲ. ಕೃಷ್ಣ ಈಗ ಇಲ್ಲಿ, ಮುಂದಿನ ಕ್ಷಣ ಎಲ್ಲೋ ಎಂದು ಚಿಗರೆಗಿಂತಲೂ ವೇಗವಾಗಿ ಸಾಗುತ್ತಿರುವಾಗ ಪಿಳ್ಳಂಗೋವಿಯ ಚೆಲುವ ಕೃಷ್ಣನ ಎಲ್ಲಿ ನೋಡಿದಿರಿ? ರಂಗನ ಎಲ್ಲಿ ನೋಡಿದಿರಿ?' ಎನ್ನುತ್ತಾ ಸುಂದರಾಂಗದ ಸುಂದರಿಯರ ಹಿಂದುಮುಂದೆಲ್ಲ' ಹುಡುಕುವುದು ಕಂಡುಬರುತ್ತದೆ. ಕೆಲವು ಪ್ರಮುಖ ವ್ಯಕ್ತಿಗಳು ಇತರರಿಂದ ಕಿರಿಕಿರಿ ತಪ್ಪಿಸಿಕೊಳ್ಳಲು ತಮ್ಮ ವಿಳಾಸವನ್ನು ಮರೆಮಾಚುತ್ತಾರೆ. ಅಂತೆಯೇ ಹುಟ್ಟುತ್ತಲೇ ಕೃಷ್ಣ ತನ್ನ ಪರ್ಮನೆಂಟ್ ಅಡ್ರೆಸ್ಸನ್ನು ಬಿಟ್ಟುಕೊಡಲು ಬಯಸದೆ ಟೆಂಪೊರರಿ ಅಡ್ರೆಸ್ಗೆ ಶಿಫ್ಟ್ ಆಗುವುದರಲ್ಲಿದ್ದಾಗ ಕತ್ತೆಯೊಂದು ಪರ್ಮನೆಂಟ್ ಅಡ್ರೆಸ್ನ ಸೂಚನೆಯನ್ನು ಕಂಸನಿಗೆ ಕೊಡುವುದರಲ್ಲಿದ್ದಿತಂತೆ. ಇದೇ ಯುಗದಲ್ಲಿನ ಕರ್ಣನಿಗಂತೂ

ಡ್ರೆಸ್ಸು, ಅಡ್ರೆಸ್ಸುಗಳೆರಡರದೂ ಸಮಸ್ಯೆಯೇ. ಧರಿಸಿದ ಕವಚ ಕುಂಡಲಗಳ ಮೇಲೆ ಒಬ್ಬರ ಕಣ್ಣಾದರೆ, ಒರಿಜಿನಲ್ ಅಡ್ರೆಸ್ ಆದ ಕರ್ಣ ಕೇರ್ ಆಫ್ ಕುಂತಿ ಎನ್ನುವುದು ಅಂದಿನ ಆಧಾರ್ ಕಾರ್ಡನಲ್ಲಿ ಬರಲೇಯಿಲ್ಲವಾದ್ದರಿಂದ ಕರ್ಣ, ಕೇರಾಫ್ ಸೂತ ಎನ್ನುವುದೇ ಪರ್ಮನೆಂಟ್ಲಿ ಟೆಂಪೊರರಿ ಅಡ್ರೆಸ್ ಆಯಿತು.

ಮಹಾಭಾರತದ ವಿರಾಟಪರ್ವವಂತೂ ಬೇನಾಮಿ ಅಡ್ರೆಸ್ಗಳ ತವರು. ಅಲ್ಲಿ ಧರ್ಮರಾಯ ಕಂಕಭಟ್ಟನಾದ, ಭೀಮ ವಲಲನಾದ, ಅರ್ಜುನ ಬೃಹನ್ನಳೆಯಾದ; ಐದು ಜನ ಪಾಂಡವರೂ ತಮ್ಮ ಪ್ರೊಫೆಷನ್ ಮತ್ತು ಅಡ್ರೆಸ್ ಎರಡನ್ನೂ ಬದಲಾಯಿಸಿದರು. ದುರ್ಯೋಧನನಿಗೆ ಅವರ ಅಡ್ರೆಸ್ ಪಡೆಯಲೇಬೇಕೆಂಬ ಅನಿವಾರ್ಯತೆ. ಕೀಚಕ ಸತ್ತ' ಎಂಬ ಸುದ್ದಿ ಬಂದ ತಕ್ಷಣ ವಿಳಾಸ ಸಿಕ್ಕಿಯೇಬಿಟ್ಟಿತೆಂಬ ಸಂಭ್ರಮದಲ್ಲಿ ಸೇನೆಯನ್ನು ಕರೆದುಕೊಂಡು ವಿರಾಟನ ಗೋವುಗಳನ್ನು ಕದ್ದೊಯ್ದ. ಬಿಡಿಸಿಕೊಳ್ಳಲು ಅರ್ಜುನ ಹೊರಬಂದು ವಿಳಾಸವನ್ನು ಬಿಟ್ಟುಕೊಟ್ಟ

ಆಗಿನಿಂದಲೇ ಸಾಮಾನ್ಯರಿಗೆ ತಿಳಿಯದ ವಿಳಾಸಗಳನ್ನು ಹಾಲಿನವರ (ಗೋವು ಹಾಲಿನವಳೇ ಅಲ್ಲವೆ) ಮೂಲಕ ಪಡೆಯಬಹುದೆಂದು ತಿಳಿದುಬಂದು, ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಹತ್ಯೆ ಮಾಡಿದವರ ವಿಳಾಸ ಪತ್ತೆ ಹಚ್ಚಲು ಸಹ ಹಾಲಿನವರನ್ನೇ ಕೇಳಿ ತಿಳಿದುಕೊಳ್ಳಲಾಯಿತು.

ವಿರಾಟಪರ್ವದಲ್ಲಿ ದುರ್ಯೋಧನ ಪಾಂಡವರನ್ನು ಹುಡುಕಿದರೆ, ಕುರುಕ್ಷೇತ್ರ ಯುದ್ಧದ ಹದಿನೆಂಟನೆಯ ದಿನ ಭೀಮ ದುರ್ಯೋಧನನನ್ನು ಹುಡುಕಿಕೊಂಡು ಬಂದ ರೀತಿಯನ್ನು ರನ್ನ ವರ್ಣಿಸುವುದೇ ಚಂದ.

ರಸೆಗಿಳಿದನೊ ಮೇಣ್ ನಾಲ್ಕುಂ ದೆಸೆಗಳ ಕೋಣೆಗಳೊಳುಳಿದನೋ

ಖಳನಿಲ್ಲೀ ವಸುಮತಿಯೊಳ್ ಗಾಂಧಾರಿಯ

ಬಸಿರಂ ಮೇಣ್ ಮಗುಳೆ ಪೋಗಿ ಪೊಕ್ಕಿರ್ದನೋ

ಎನ್ನುತ್ತಾ ಎಲ್ಲೆಡೆ ಭೀಮ ಹುಡುಕುತ್ತಾ ಬಂದಾಗ ಮರುದಾಂದೋಳಿತ ಜಂಬೂತರು ಶಾಖಾ ಹಸ್ತ ಕಿಸಲಯಂ ಮಿಳಿಮಿಳಿರುತ್ತಿರೆ' ಅದು ಭವತಹಿತನಿಲ್ಲಿದಂ' ಎಂದು ಸೂಚಿಸುತ್ತಿರುವಂತೆ ತೋರಿತಂತೆ. ದ್ವಾಪರದಲ್ಲಿ ಮಿನುಗುವ ಹೂಗಳು, ಹಾರುವ ಹಕ್ಕಿಗಳೇ ದಾರಿ ತೋರುವ ಸೈನ್ ಬೋರ್ಡ್.

ಕಲಿಗಾಲದಲ್ಲಿ ಕವಿ ಕಾಳಿದಾಸ ವಿಳಾಸ ಹುಡುಕುವುದರಲ್ಲಿ ಪರಿಣಿತ. ಯಕ್ಷನೊಬ್ಬ ತನ್ನ ನಲ್ಲೆಯನ್ನು ಹುಡುಕಿ, ಸಂದೇಶ ತಲುಪಿಸಬೇಕಾದರೆ ಮೇಘವನ್ನೇ ಬಳಸಬಹುದು, ಮೇಘಕ್ಕೆ ರೂಟ್ ಮ್ಯಾಪ್' ಹಾಕಿಕೊಟ್ಟರೆ ಅದು ಅಲ್ಲಿಗೆ ಸಂದೇಶ ತಲುಪಿಸುತ್ತದೆ ಎಂಬ ಅಮೋಘವಾದ ಸಂಶೋಧನೆ ಮಾಡಿ, ಅಂಚೆ ಕಚೇರಿ ಯೋಜನೆಗೆ ಪ್ರಪ್ರಥಮ ಬ್ಲೂಪ್ರಿಂಟ್' ಒದಗಿಸಿಕೊಟ್ಟವನೇ ಕಾಳಿದಾಸ. ಕಾಲ ಕಳೆದಂತೆ ಸ್ತ್ರೀಯರೂ ವಿಳಾಸ ಹುಡುಕುವದರಲ್ಲಿ ನಮ್ಮದೂ ಪರಿಶ್ರಮವಿದೆ' ಎಂದು ತೋರಿಸಿಕೊಡುವುದಕ್ಕೆ ದಾಖಲೆಯಾಗಿ ಅಕ್ಕಮಹಾದೇವಿಯ ನೀವೇನಾದರೂ ಚೆನ್ನಮಲ್ಲಿಕಾರ್ಜುನನನ್ನು ಕಂಡಿರಾ?' ಎಂಬ ವಚನಗಳ ಮಾಲೆಯೇ ಇದೆ. ಡಾ. ರಾಜ್ಕುಮಾರ್ ನಟಿಸಿದ ಚಿತ್ರ ಭಕ್ತ ಕುಂಬಾರದಲ್ಲಿ ಎಲ್ಲಿ ಮರೆಯಾದೆ ವಿಠಲ, ಏಕೆ ದೂರಾದೆ' ಎನ್ನುತ್ತಾ ವಿಠಲನ ವಿಲಾಸ, ವಿಳಾಸಗಳನ್ನು ಹುಡುಕುವ

TEMPLE OF KNOWLEDGE

DISTANCE EDUCATION
(Govt. & UGC Recognised Universities)

# BEECHI VIDYA KENDRA

ADMISSION OPEN - APPLY NOW

## CENTER OF DISTANCE LEARNING
## MBA WITH 6 SPECIALIZATIONS, MA, M.COM, MCA, MSc-BT, PGDCS, BA & B.COM - AGE BASIS

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE OF KNOWLEDGE

Email : admin@beechi.in
Web : www.becchi.in
Mob. 9740968677

ದೃಶ್ಯವಿದೆ. ಅನಂತ್ ನಾಗ್ ಅಭಿನಯದ ಬಯಲುದಾರಿ'ಯಲ್ಲೂ ಹೈ ಲೆವೆಲ್ನಿಂದ ಲೋ ಲೆವೆಲ್ನತ್ತ ಸಾಗುತ್ತಾ ವಿಳಾಸ ಹುಡುಕುವ ಗೀತೆಯಿದೆ. ಹೆಲಿಕಾಪ್ಟರ್‌ನಲ್ಲಿ ಕುಳಿತ ನಾಯಕ ಎಲ್ಲಿರುವೆ ಮನವ ಕಾಡುವ ರೂಪಸಿಯೇ...' ಎನ್ನುತ್ತಾ ಸಾಗುವ ಅವಿಸ್ಮರಣೀಯ ದೃಶ್ಯದ ಹಿನ್ನೆಲೆಯಲ್ಲೇ ವಿಳಾಸವೇ ಸಿಗದಂತೆ ಕಾಣೆಯಾಗುವವರೂ ಮನದಲ್ಲಿ ನಿಲ್ಲುತ್ತಾರೆ. ಬಂಗಾರದ ಮನುಷ್ಯ' ಚಿತ್ರದಲ್ಲಿ ರಾಜೀವ್' ಕಡೆಯ ದೃಶ್ಯದಲ್ಲಿ ನಡೆಯುತ್ತಲೇ ನಡೆಯುತ್ತಲೇ ನಡೆಯುತ್ತಲೇ ಅದೆಲ್ಲಿ ಹೋಗುವನೋ ತಿಳಿಯುವುದೇ ಇಲ್ಲ.

ವಿಳಾಸವೆಂದಮೇಲೆ ಅಂಚೆಯವರೂ ಇರಲೇಬೇಕಲ್ಲ. ಗಲ್ಲಿ ಸುತ್ತಿ, ಹಳ್ಳ ಇಳಿದು, ದಿಣ್ಣೆ ಏರಿ, ಕೊಡಗು ಮತ್ತಿತರ ಕ್ಷೇತ್ರಗಳಲ್ಲಿ ಪೋಸ್ಟ್ ತಲುಪಿಸುವ ಅಂಚೆಯವರದು ನಿಜಕ್ಕೂ ಸುಸ್ಮರಣೀಯ ಸೇವೆ. ಕೆಲವು ಹಳ್ಳಿಗಳಲ್ಲಂತೂ ವ್ಯಕ್ತಿಯ ಹೆಸರು, ಹಳ್ಳಿಯ ಹೆಸರು ಇದ್ದರೆ ಅಂಚೆ ತಲುಪಿಬಿಡುತ್ತದೆ. ಆದರೆ ನಗರದಲ್ಲಿ? ಪಟ್ಟಣಗಳಲ್ಲಿ?

ಜಗದ ಸರ್ವಕಾಲಿಕ ಶ್ರೇಷ್ಠ ಬ್ಯಾಟ್ಸ್ಮನ್ ಆಗಿದ್ದ ಡಾನ್ ಬ್ರಾಡ್ಮನ್‌ನ ತಲುಪಿದ ಪತ್ರವೊಂದರ ಪ್ರಸಂಗ ಸೊಗಸಾಗಿದೆ. ಆಸ್ಟ್ರೇಲಿಯಾದ ಕ್ರಿಕೆಟ್ ತಂಡವು ಇಂಗ್ಲೆಂಡ್ ಪ್ರವಾಸವನ್ನು ಕೈಗೊಂಡಿತ್ತು. ಭಾರತದ ಕ್ರಿಕೆಟ್ ಪ್ರೇಮಿಯೊಬ್ಬರಿಗೆ ಬ್ರಾಡ್ಮನ್ಗೊಂದು ಪತ್ರ ಬರೆಯಬೇಕೆನಿಸಿತು. ವಿಳಾಸವೂ ಲಾರ್ಡ್ಸ್ ಮೈದಾನ ಎಂದೋ, ಎಡ್ಜ್‌ಬಾಸ್ಟನ್ ಎಂದೋ ಬರೆಯಬಹುದಾಗಿತ್ತು. ಆದರೆ ಪತ್ರ ವಿಳಂಬವಾಗಿ ಬ್ರಾಡ್ಮನ್ ಅಲ್ಲಿಂದ ಹೊರಟುಬಿಟ್ಟಿದ್ದರೆ? ಈ ಸಂದಿಗ್ಧವನ್ನು ಮೀರುವ ಸಲುವಾಗಿ ಆ ಕ್ರಿಕೆಟ್ ಪ್ರೇಮಿಯು ಲಕೋಟೆಯ ಮೇಲೆ 'ಟು ಬ್ರಾಡ್ಮನ್, ಪ್ಲೇಯಿಂಗ್ ಎನಿವೇರ್ ಇನ್ ಇಂಗ್ಲೆಂಡ್' ಎಂದು ಬರೆದು ಪತ್ರವನ್ನು ಪೋಸ್ಟ್ ಮಾಡಿದರು.

ಪತ್ರ ಬ್ರಾಡ್ಮನ್‌ನನ್ನು ತಲುಪಿತು!

ಆದರೆ ಬರೆದುದೆಲ್ಲ ತಲುಪುವುದೆ? ಎಷ್ಟೋ ಬಾರಿ ಈಮೇಯ್ಲ್‌ಗಳೇ ಸ್ಪಾಮನಲ್ಲಿಯೋ, ಟ್ರಾಷ್‌ನಲ್ಲಿಯೋ ಮರೆಯಾಗಿಬಿಡುವಾಗ ಆ ಮೇಯ್ಲುಗಳು ತಲುಪದಿದ್ದುದು ಅಸಹಜವೇನಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಕರಾಚಿಯಲ್ಲಿದ್ದ ಹುಡುಗನೊಬ್ಬ ಬರೆದ ಪ್ರೇಮಪತ್ರ ಪ್ರೇಮಿಯನ್ನು ತಲುಪಿದ್ದು 52 ವರ್ಷಗಳ ನಂತರ! ಆ ಹೊತ್ತಿಗೆ ಆ ಹುಡುಗಿಯ ಮೊಮ್ಮಗಳು ಮದುವೆಯ ವಯಸ್ಸನ್ನು ತಲುಪಿದ್ದಳೋ ಏನೋ!

ವಿಳಾಸಕ್ಕೆ ಪತ್ರ ತಲುಪದಿರಲು ಕೈಬರಹವೂ ಕೆಲವೊಮ್ಮೆ ಕಾರಣವಾಗುತ್ತದೆ. ಎಸ್ ಗುಂಡೂರಾವ್‌ರು ಬರೆದ ಮೀನಾ ಕಾಗದ' (ಅಥವ ಅವಳ ಕಾಗದ ಇರಬಹುದು)ದಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೆಡ್ ಕ್ಲರ್ಕ್ ಆಗಿದ್ದ ಗಂಡನಿಗೆ ಬರೆದ ಪತ್ರದ ಮೇಲಿನ ವಿಳಾಸ ಹೀಗಿತ್ತು - ಹೆಡ್ ಕುಕ್ಕು, ಮ್ಯಾಜಿಕ್ ಸೆಟ್ಟು ಕೊಟ್ಟು'! ಸಾಹೇಬ್ ಅರ್ಜೆಂಟ್‌ಗಯೇ' ಎಂದು ಬರೆಯಯ್ಯ ಎಂದರೆ ಸಾಹೇಬ್ ಆಜ್ ಮರ್‌ಗಯೇ' ಎಂದು ಬರೆದಂತಹ ಅಕ್ಷರಬ್ರಹ್ಮರು' ಇರುವತನಕ ವಿಳಾಸದ ವಿಲಾಸ ವಿಚಿತ್ರ ರೂಪಗಳನ್ನು ಪಡೆಯುತ್ತಲೇ ಇರುತ್ತದೆ.

ಅಂದ್ಹಾಗೇ, ವಿಷಯಾನೇ ಮರೆತೆ. ಡಿಸ್ಟ್ರಿಕ್ಟ್ ಆಫೀಸ್, ಸರ್ವಿಸ್ ರೋಡ್ ಅಂತ ವಿಳಾಸ ಇದೆ. ಊರು ನಿಮ್ಮೂರೇ. ಈ ಅಡ್ರೆಸ್ ಎಲ್ಬರ್ತ್ತೆ ಹೇಳ್ತೀರಾ.....?

# ಸಾಹಿತಿಯ ಕಥೆ – ವ್ಯಥೆ

**ನಾಗರತ್ನ ಚಂದ್ರಶೇಖರ**

ನಾನು ಕಥೆ, ಕವನ, ಪ್ರಬಂಧ ಹೀಗೆ ಬರೆಯುವ ಚಟಕ್ಕೆ ಬಿದ್ದು ಅರ್ಧಶತಮಾನವೇ ಆಗಿಹೋಗಿದೆ. ಈ ಐವತ್ತುವರ್ಷಗಳಲ್ಲಿ ಅದೆಷ್ಟು ಬರೆದೂ, ಬರೆದೂ ಗುಡ್ಡೆಹಾಕಿರಬಹುದೆಂಬ ಊಹೆ ನಿಮಗ್ಯಾರಿಗೂ ಇರಲಿಕ್ಕಿಲ್ಲ ಬಿಡಿ. ಏಕೆಂದರೆ ನಾನು ಬರೆದದ್ದೆಲ್ಲಾ ಅಚ್ಚಾಗಿ ನೀವು ಓದಿದ್ದರೆ ತಾನೆ! ಪ್ರಕಟಣೆಯ ಹುಚ್ಚು ಬರೆದವರೆಗೆಲ್ಲಾ ಇದ್ದರೂ ನಾವು ಬರೆದದ್ದನ್ನೆಲ್ಲಾ ಪ್ರಕಟಮಾಡುವ ಹುಚ್ಚು ಪ್ರಕಾಶಕರಿಗಂತೂ ಇಲ್ಲ. ಆಗೊಮ್ಮೆ ಈಗೊಮ್ಮೆ ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ಬೆಳಕು ಕಾಣುತ್ತಿದ್ದ ಲೇಖನಗಳಿಂದ ನಾನೊಬ್ಬ ಸಾಹಿತಿಯಾಗಿ ಹೆಸರು ಮಾಡಬಹುದೆಂಬ ಭ್ರಮೆಯಂತೂ ಹುಟ್ಟಿದ್ದು ನಿಜ. ಸಂಪಾದಕರು ಕರುಣೆತೋರದೆ ಕಸದಬುಟ್ಟಿಗಳು ನುಂಗಿದ ಲೇಖನಗಳೆಷ್ಟೋ.

ಇನ್ನು ಸಾಹಿತಿಗಳಿಗೂ ಸನ್ಮಾನಗಳಿಗೂ ಒಂದು ಅವಿನಾಭಾವ ಸಂಬಂಧ ಇರುತ್ತದೆ ಎಂದು ನನಗೂ ಗೊತ್ತಾದದ್ದು ಹೀಗೆ! ಮೇಡಂ..ನಿಮಗೊಂದು ಸನ್ಮಾನ ಮಾಡಬೇಕೆಂದಿದ್ದೇವೆ, ದಯವಿಟ್ಟು ಬರಬೇಕು ಎಂದು ಕರೆ ಬಂತು. ಬರಡು ಭೂಮಿಯಲ್ಲಿ ನೀರು ತುಂಬಿಕೊಂಡಂತಾಯಿತು. ನಾನೇ? ಸನ್ಮಾನ ನನಗೆ ಏಕೆ? ಈ ಪ್ರಶ್ನೆಗಳು ಬಂದವೇನೋ ನಿಜ. ನಾನೇನೂ ಛೀಫ್ ಗೆಸ್ಟ್ ಆಗಿರಲಿಲ್ಲ, ಛೀಪ್ ಗೆಸ್ಟ್ ಆಗಿದ್ದೆ ಎಂದು ಆಮೇಲೆ ಗೊತ್ತಾಯಿತು. ಆ ಸಂಸ್ಥೆಯವರಿಗೆ ಒಬ್ಬ ಸಾಹಿತಿಯನ್ನು ಸನ್ಮಾನಿಸಿಅವರಸಾಧನೆಗಳಪಟ್ಟಿಯನ್ನು ಬೆಳೆಸಿಕೊಳ್ಳಬೇಕಿತ್ತು. ನನ್ನಂಥ ಬಡಪಾಯಿಗೆ ಒಂದು ಹಾರ, ಶಾಲು, ಬುಟ್ಟಿ ಹಣ್ಣುಕೊಟ್ಟು ಒಂದು ಫೋಟೊ ತೆಗೆಸಿಕೊಳ್ಳುವ ಆತುರ ಅವರಿಗೆ. ನನಗೆ ಭಾಷಣ ಇರಲಿ ಒಂದು ಧನ್ಯವಾದ ಹೇಳಲೂ ಅವಕಾಶವಿಲ್ಲದ ಇಂಥ ಸಮಾರಂಭಗಳು ಮುಂದೆ ಆಗಾಗ ಬರುತ್ತಲೇ ಇರುವಾಗ ಎಂದಾದರೊಂದು ದಿನ ಕನಿಷ್ಠ ಹತ್ತುನಿಮಿಷಗಳಾದರೂ ಭಾಷಣ ಬಿಗಿಯುವ ಆಕಾಂಕ್ಷೆಯನ್ನು ಬಿಡದ ನಿರೀಕ್ಷೆ ನನ್ನದು. ಬರೆಯುವ ಚಟ, ಸನ್ಮಾನದ ಚಪಲ, ಭಾಷಣದ ಗೀಳು ಇವು ಸಾಹಿತಿಗಿರಬೇಕಾದ ಮುಖ್ಯ ಲಕ್ಷಣ ಎಂದು ಹೆಚ್ಚಿನವರು ನಂಬುತ್ತಾರೆ. ಒಂದು ಸಮಾರಂಭದಲ್ಲಿ ಹತ್ತಾರು ಜನರಿಗೆ ಸನ್ಮಾನವಿದ್ದಾಗ ಸಾಲಾಗಿ ಎಲ್ಲರನ್ನು ವೇದಿಕೆ ಮೇಲೆ ಕೂಡಿಸಿ ಹಾರ, ತುರಾಯಿ, ಶಾಲು, ಪೇಟ ನಂತರ ಕೈಗೊಂದು ಸನ್ಮಾನಪತ್ರ ಕೊಟ್ಟು ಸಾಮೂಹಿಕ ಫೋಟೊ ತೆಗೆದು ಬಿಡುತ್ತಾರೆ. ಆಗೆಲ್ಲಾ ನನಗೆ ಅರಕ್ಷಕಠಾಣೆಯಲ್ಲಿ ಕೈಗೆ ಸ್ಲೇಟು ಕೊಟ್ಟು ಫೋಟೊ ತೆಗೆದು ಪತ್ರಿಕೆಯಲ್ಲಿ ಹಾಕುವ ನೆನಪಾಗುತ್ತದೆ. ಒಂದು ರೀತಿ ನಾವೂ ಅಪರಾಧಿಗಳೇ, ಹೇಗೆಂದರೆ ಓದುವವರಿಲ್ಲದಿದ್ದರೂ ಬರೆದು ಬರೆದು ಕಾಗದ ದಂಡ ಮಾಡಿ ಪರೋಕ್ಷವಾಗಿ ಕಾಡಿನ ಮರಗಳ ಸಂಖ್ಯೆಯನ್ನು ಕಡಿಮೆ ಮಾಡುವ ಅಪರಾಧಿಗಳಲ್ಲವೆ? ಪರಿಚಿತರೊಬ್ಬರು ಕರೆದಿದ್ದ ಇಂಥ ಸಮಾರಂಭದಲ್ಲಿ ಹಾರ, ಶಾಲು ಕೊರತೆಯಾದಾಗ ಪುನರ್ಬಳಕೆಗಾಗಿ ನನಗೆ ಹಾಕಿದ್ದನ್ನೇ ಧಾರಾಳವಾಗಿ ಕೊಟ್ಟೆ. ಇಂಥ ಸಮಾರಂಭಗಳಿಂದ ಶೇಖರಿಸಿಟ್ಟ ಹಾರ, ಶಾಲುಗಳಿಗೆ ಬೀರುವಿನಲ್ಲಿ ಜಾಗ ಖಾಲಿಯಾದರೂ ಆದೀತೆಂಬ ಸಮಾಧಾನ. ಹೋಗಲಿ, ಪ್ರಯಾಣ ವೆಚ್ಚವಂತೂ ಇಲ್ಲವೇ ಇಲ್ಲ.

ನಿಮ್ಮದೇ ಖರ್ಚಾಗದೆ ಉಳಿದ ಪುಸ್ತಕಗಳನ್ನು ಆಹ್ವಾನಿತ ಗೌರವಾನ್ವಿತ ಅತಿಥಿಗಳಿಗೆ ಹಂಚಿ, ಹಲ್ಲುಗಿಂಜಿ ನಾನೂ ಕೂಡ ಸಾಹಿತಿ ಎಂದು ಸಾಬೀತುಪಡಿಸುವ ತವಕ.

ಬೇಕಿತ್ತ ಇವೆಲ್ಲಾ? ನಾನು ಬರೆಯದಿದ್ದರೆ, ಸಾಹಿತಿ ಎನಿಸಿ ಕೊಳ್ಳುವ ಭ್ರಮೆ ಇಲ್ಲದಿದ್ದರೆ ಯಾವ ಲೋಕವೂ ಮುಳುಗಿ ಹೋಗುವುದಿಲ್ಲ ಅಥವಾ ಉದ್ಧಾರವಂತೂ ಆಗುವುದಿಲ್ಲ. ವರ್ಷಗಟ್ಟಲೆಅಜ್ಞಾತವಾಸದಿಂದಹೊರಬಂದು ಪ್ರಕಟವಾಗುವ ಪುಸ್ತಕಗಳೋ, ಲೇಖನಗಳೋ ಜೈಲಿನಿಂದ ಬಿಡುಗಡೆ ಆದ ಖೈದಿ ಹೊರಬಂದಾಗ ಆಗುವಷ್ಟು ಸಂತೋಷವಂತು ಇರುತ್ತದೆ. ಈಗಂತೂ ವಾಟ್ಸಪ್ಗಳದೇ ಕಾರಬಾರು. ಬೇಕಾದವರಿಗೆ, ಬೇಡವಾದವರೆಗೆಲ್ಲಾ ಲೇಖನದ ಬಗ್ಗೆ ಮಾಹಿತಿ ರವಾನಿಸಿದಾಗಲೇ ಸಮಾಧಾನ.

ಈ ರೀತಿ ಚಿಲ್ಲರೆ ಸಾಹಿತಿಯಾಗುವುದಕ್ಕಿಂತ ನೀವೇಕೆ ನಿಮ್ಮ ಪುಸ್ತಕಗಳನ್ನು ಪ್ರಕಟಿಸಬಾರದು ಎಂಬ ಉಚಿತ ಸಲಹೆ ಕೇಳಿ ಹಿಂದೊಮ್ಮೆಕಂತೆ, ಕಂತೆ ಬಿದ್ದಿದ್ದವನ್ನೆಲ್ಲಾ ಜೋಡಿಸಿ ಪ್ರಕಾಶಕರ ಮನೆ ಬಾಗಿಲಿಗೆ ದೌಡಾಯಿಸತೊಡಗಿದೆ. ಸರಸ್ವತಿಯ ದಯೆಯಿಂದ ಯಾರದೋ ಕಪಾಕಟಾಕ್ಷ ನನ್ನ ಮೇಲೆ ಬಿತ್ತು. ಹತ್ತಾರು ಪುಸ್ತಕಗಳು ಕೊನೆಗೂ ಬೆಳಕನ್ನು ಕಂಡವು. ಅವುಗಳೆಲ್ಲಾ ನನ್ನ ಅಮೂಲ್ಯ ಆಭರಣಗಳಂತೆ ಜೋಪಾನಮಾಡಿಕೊಳ್ಳುವ ಆತುರ, ಕಾತುರ. ಪುಸ್ತಕ ಬಿಡುಗಡೆಯ ಸಂಭ್ರಮವಂತೂ ಒಂದೊಂದು ಕಂಚಿ ಸೀರೆಕೊಂಡಷ್ಟು!

ಮುಂದೆ ! ಮಾಡಿದ ಅಡುಗೆ ನಾನೆ ತಿಂದರೆ ಅದರ ಶುಚಿ, ರುಚಿ ಗೊತ್ತಾಗುವದು ಹೇಗೆ? ಪುಸ್ತಕ ಪ್ರಕಟ ಮಾಡಿದ ಪ್ರಕಾಶಕರು ಒಂದಷ್ಟು ಲಾಭ ಮಾಡಿಕೊಳ್ಳಲಿಬಿಡಿ. ಅದರ ಮಾರಾಟ, ವಿತರಣೆ, ವರ್ಷಗಟ್ಟಲೆ ಕಾಯುವಿಕೆ ಇದೆಲ್ಲಾ ಮಾಡಬೇಕಾದವರಿಗೆ ನಾವು ಕೃತಜ್ಞರಾಗಿರಬೇಕಲ್ಲವೆ! ನಾನೇ ಹಣ ಹಾಕಿ ಪ್ರಕಟ ಮಾಡಿದರೆ ಅದನ್ನು ಮನೆಯಲ್ಲಿ ಸಂಗ್ರಹಿಸಿಡಲು ಬೇಕಾದ ಜಾಗ, ಅದನ್ನು ದಿನದಿನವೂ ನೋಡಿ ನಿಟ್ಟುಸಿರು ಬಿಡಬೇಕಾದದ್ದಾರೂ ತಪ್ಪುತ್ತದೆ. ಒಂದೆರಡು ಬಾರಿ ಅಲ್ಪಸ್ವಲ್ಪ ಬಂಡವಾಳ ಹಾಕಿ ವಾಪಸ್ಸು ಬರುವ ದಾರಿಗಳೇ ಕಾಣಡೆ ಅರ್ಧಕ್ಕರ್ಧ ಪುಸ್ತಕಗಳು ಉಚಿತವಿತರಣೆ ಮಾಡಲು ಪ್ರಾರಂಭಿಸಿಕೊಂಡೆ. ಪುಸ್ತಕ ಕೊಟ್ಟು ಹಣಕೊಡಿ ಎಂದು ಕೇಳಲು ಮುಜುಗರ. ಅವರಾಗೇ ಕೊಟ್ಟು ಓದುವವರು ವಿರಳ. ಆಗಾಗ ಯಾವುದಾದರೂ ಪತ್ರಿಕೆಗಳಲ್ಲಿ ಬರುವ ಪ್ರಶಸ್ತಿ, ಬಹುಮಾನಗಳಿಗಾಗಿ ಪುಸ್ತಕಗಳ ಮೂರುಪ್ರತಿಗಳನ್ನು ವರ್ಷವಿಡೀ ನನ್ನ ಖರ್ಚಿನಲ್ಲೇ ಪೋಸ್ಟ್/ಕೊರಿಯರ್ ಮಾಡಿ ಮರೆತುಬಿಡುವುದೇ ವಾಸಿ.

ನನ್ನ ಕೈ ಚೀಲದಲ್ಲಿ ಖಾಯಂ ಆಗಿ ನನ್ನದೇ ಪುಸ್ತಕಗಳಂತೂ ಇಟ್ಟುಕೊಂಡೇ ಓಡಾಡುವೆ. ಹೋದಲ್ಲಿ, ಬಂದಲ್ಲಿ ಪರಿಚಿತರೊ, ಗಣ್ಯ ಸಾಹಿತಿಗಳೊ ಸಿಕ್ಕೇ ಸಿಗುತ್ತಾರೆ. ಅವರಿಗೆ ಕೊಟ್ಟು ಧನ್ಯಳಾಗುವ ಅಭ್ಯಾಸಮಾಡಿಕೊಂಡ ಮೇಲೆ ಜನ ನನ್ನನ್ನು ಗುರುತಿಸತೊಡಗಿದ್ದಾರೆ ಎಂದೇ ಅಂದು ಕೊಂಡಿರುವೆ. ಕೇವಲ ಹೋಮ್ಮೇಕರ್(ಗೃಹಿಣಿ) ಎಂದು ಹೇಳುವುದಕ್ಕಿಂತ ಸಾಹಿತಿ, ಎಂದು ಹೇಳೀದರೆ ಒಂದು ತೂಕ ಜಾಸ್ತಿ ಅಲ್ಲವೆ? ಪ್ರಶಸ್ತಿಗಳು ಬಿಕರಿಯಾಗುವ ಈ ಕಾಲದಲ್ಲಿ ಸದ್ಯಕ್ಕೆ ನಾನು ಯಾವುದೇ ರಾಜ್ಯ, ರಾಷ್ಟ್ರಪ್ರಶಸ್ತಿಗಳಿಗೆ ಅಪ್ಲಿಕೇಷನ್ ಹಾಕಿಲ್ಲ. ಒಳ್ಳೆಯ ಪುಸ್ತಕಗಳನ್ನು ಕೊಂಡು ಓದುವ ಅಭಿರುಚಿ ಇರುವ ನನಗೆ ಮುಂದೆ ಎಂದಾದರೂ ನನ್ನ ಪುಸ್ತಕಗಳನ್ನು ಜನಕೊಂಡು ಓದಲಿ ಎಂಬ ಆಸೆ ಇರುವುದರಿಂದ ನಾನಿನ್ನೂ ಬರೆಯುವುದನ್ನು

ನಿಲ್ಲಿಸಿಲ್ಲ. ನಾವು ಬರೆದ ಪುಸ್ತಕ ಖರ್ಚಾಗಬೇಕಾದರೆ ಮಾತ್ರ ಕೆಲವೊಂದು ಸಲಹೆಗಳನ್ನು ಪಾಲಿಸಿ ಸಾಕು.

(ಅ) ಪುಸ್ತಕ ಮಾರಲು ನಾಚಿಕೆ, ಗೀಚಿಕೆ ಎಲ್ಲಾ ನೂಕಿ ಆಚೆ

(ಆ) ಶೇಕಡಾ ನಲವತ್ತು ರಿಯಾಯಿತಿ ಕೊಡಲು ತಯಾರಾಗಿರಿ

(ಇ) ಯಾವುದೇ ಮದುವೆ, ಮುಂಜಿ, ಹುಟ್ಟುಹಬ್ಬ ಇತ್ಯಾದಿ ಸಮಾರಂಭಗಳಿಗೆ ಆಹ್ವಾನಿತರಾಗಿದ್ದಾಗ ಬೇರೆ ಗಿಫ್ಟ್ ಕೊಡದೆ ನಿಮ್ಮದೇ ಪುಸ್ತಕಗಳನ್ನು ಕೊಡಿ;

(ಈ) ನೀವು ಯಾವುದೇ ಕಾರ್ಯಕ್ರಮಕ್ಕೆ ಅತಿಥಿಯಾಗಿ ಆಹ್ವಾನಿತರಾಗಿದ್ದಲ್ಲಿ ಅಲ್ಲಿ ಸಾಧ್ಯವಾದರೆ ನಿಮ್ಮ ಪುಸ್ತಕಗಳನ್ನು ಮಾರಾಟ ಮಾಡಲು ಸಂಘಟಕರನ್ನು ಕೇಳಿ;

(ಉ) ಮನೆಗೆ ಬರುವ ಅತಿಥಿಗಳಿಗೆ ಅರಿಶಿನ ಕುಂಕುಮದ ಜೊತೆ ರವಿಕೆ ಕಣ ಇಡುವ ಬದಲು ನಿಮ್ಮದೇ ಪುಸ್ತಕಗಳನ್ನು ಕೊಡಿ;

(ಊ)ಕೊನೆಯದಾಗಿ 75 ವರ್ಷವಾಗುವವರೆಗೆ ಕಾದರೆ ಯಾವುದೇ ಪ್ರಶಸ್ತಿ ಬರದಿದ್ದವರಿಗೆ ಕರ್ನಾಟಕ ಸಾಹಿತ್ಯ ಅಕಾಡಮಿಯಿಂದ ಹಿರಿಯ ಸಾಹಿತಿಯೆಂಬ ಗೌರವವಂತೂ ಸಿಗುತ್ತದೆ. ಈ ಸವಲತ್ತು ಕಳೆದ ವರ್ಷದಿಂದ ಜಾರಿಗೆ ಬಂದಿದೆ. ನಮ್ಮ ಸರದಿ ಬರುವವರೆಗೂ ಕಾಯಬೇಕು ಅಷ್ಟೆ.

ಮುಂದೆ, ..ಎಲ್ಲೂ ಹೊದೆಯಲಾಗದ ಶಾಲುಗಳನ್ನು, ಬಾಡಿ ಹೋಗುವ ಹೂಹಾರಗಳನ್ನು, ಧೂಳು ಹಿಡಿದು ಕೊನೆಗೆ ಇಡಲು ಜಾಗ ಸಾಲದೆ ಪೆಟ್ಟಿಗೆ ತಳ ಸೇರುವ ಸನ್ಮಾನ ಫಲಕಗಳನ್ನು, ನಮ್ಮನ್ನು ಬಿಟ್ಟುಬೇರೆ ಯಾರೂ ಆಗಾಗ ಓದಿ ಆನಂದ ಪಡದ ಸನ್ಮಾನ ಪತ್ರಗಳನ್ನು, ತಲೆಬೋಳಾದ ಮೇಲಾದರೂ ಸಿಗಬಹುದಾದ ಪೇಟಗಳನ್ನು ನಮ್ಮ ಅಮೂಲ್ಯ ಆಸ್ತಿ ಎಂದು ಪರಿಗಣಿಸುವುದಾದರೆ ನಾವು ಸಾಹಿತಿಗಳಾಗುವುದು ಸಾರ್ಥಕ!

ಸಾಹಿತಿಯ ಕಥೆ, ವ್ಯಥೆಗಳನ್ನು ಪೂರ್ತಿ ಹೇಳಿ ಮುಗಿಸುವ ಮುಂಚೆ ಇತ್ತೀಚೆಗೆ ನನಗಾದ ಒಂದು ಅನುಭವವನ್ನಂತೂ ನಿಮ್ಮೊಡನೆ ಹಂಚಿಕೊಳ್ಳಲೇಬೇಕು. ನಾವು ಬರೆದ ಪುಸ್ತಕಗಳನ್ನು ಮನೆ, ಮನೆಗೆ ಹೋಗಿ ಮಾರಾಟ ಮಾಡಬೇಕಾದ ಕಾಲ ಮುಂದೆ ಬರಬಹುದೆ ಎನ್ನುವ ಸಂಶಯ ಕಾಡುತ್ತಿರುವಾಗಲೇ, ಬೆಂಗಳೂರಿನ ಒಂದು ಸಂಘಟನೆ ಪ್ರತೀ ವರ್ಷ ಪುಸ್ತಕ ಪರಿಷೆಯನ್ನು ಆಯೋಜಿಸುವ ವಿಷಯ ತಿಳಿಯಿತು. ಸಾವಿರಾರು ಜನರು ಈ ಪರಿಷೆಯಲ್ಲಿ ಉಚಿತವಾಗಿ ತಮಗೆ ಬೇಕಾದ ಒಂದೊಂದು ಪುಸ್ತಕವನ್ನು ಅಲ್ಲಿಟ್ಟಿರುವ ಸಾವಿರಾರು ಪುಸ್ತಕಗಳ ರಾಶಿಯಿಂದ ಆರಿಸಿ ಕೊಳ್ಳುವ ಸಂಭ್ರಮ ನೋಡುವ ಅವಕಾಶ. ವಿಶೇಷವೆಂದರೆ ಲೇಖಕರಿಗೆ ತಮ್ಮ ಕೃತಿಗಳನ್ನು ಅಲ್ಲಿ ಮಾರಾಟ ಮಾಡಲು ಜಾಗಮಾಡಿ ಕೊಟ್ಟಿದ್ದರು. ಈ ಜ್ಞಾನ ದಾಸೋಹವನ್ನು ಕಣ್ತುಂಬಿಕೊಳ್ಳುತ್ತಾ ನಾವೊಂದಷ್ಟು ಜನ ಸೇರಿ ಒಂದು ಮೇಜಿನ ಮೇಲೆ ನಮ್ಮ ಪ್ರಕಟಿತ ಪುಸ್ತಕಗಳನ್ನು ಜೋಡಿಸಿಟ್ಟಿಕೊಂಡು ಆಎರಡು ದಿನ ಹೊಸ ಅನುಭವವೊಂದಕ್ಕೆ ತೆರೆದುಕೊಂಡೆವು.

ನೇರವಾಗಿ ಲೇಖಕರಿಂದ ಓದುಗರಿಗೆ ಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಈ ವ್ಯವಸ್ಥೆಯಲ್ಲಿ ನಾನು ಪ್ರಕಟಿಸಿದ್ದ ಪುಸ್ತಕಗಳಲ್ಲಿ ಕೆಲವನ್ನು

ಆರಿಸಿ ತಲಾ ಹತ್ತತ್ತು ಪ್ರತಿಗಳನ್ನು ಜೋಡಿಸಿಟ್ಟೆ. ಜನ ಸಾಲುಸಾಲಾಗಿ ಬರುತ್ತಲೇ ಇದ್ದರು. ಹೆಸರಾಂತ ಪ್ರಕಾಶಕರು ಕೂಡ ಮಳಿಗೆ ತೆರೆದಿದ್ದರು. ಇಲ್ಲಿಂದ ಕೈಯಾಡಿಸಿ, ಕಣ್ಣಾಡಿಸಿ ಒಂದಷ್ಟು ಪುಸ್ತಕಗಳನ್ನು ಖರೀದಿಸಿ ನಮ್ಮ ಮೇಜಿನ ಬಳಿ ಬರುವಷ್ಟರಲ್ಲಿ ಜೇಬು ಖಾಲಿಯಾಗಿಯೋ ಅಥವಾ ಕಣ್ಣುಗಳು ಆಯಾಸಗೊಂಡೋ ಒಂದು ಪಕ್ಷಿನೋಟ ಬೀರಿ ಮುಂದೆ ರಾಶಿರಾಶಿ ಪುಸ್ತಕಗಳಿದ್ದ ಮೇಜುಗಳ ಕಡೆ ದೌಡಾಯಿಸುತ್ತಿದ್ದರು. ಬೆಳಗ್ಗಿನಿಂದ ಸಂಜೆಯವರೆಗೂ ಇದೇ ಮಾದರಿ ಪುನರಾವರ್ತನೆ. ಛಲಬಿಡದ ತ್ರಿವಿಕ್ರಮನಂತೆ ಬಂದದಾರಿಗೆ ಸುಂಕವಾದರೂ ಗಿಟ್ಟಲಿ ಎಂದು ಹಠ ಮಾಡಿ ಕೂತೇ ಇದ್ದೆವು. ಬಿಸಿಲಿನ ಬೇಗೆಯಿಂದ ಬೆವರು ಇಳಿಯದಿದ್ದರೂ ಲೇಖಕನೊಬ್ಬ ಹೀಗೆ ಹೀನಾಯ ಸೋಲೊಪ್ಪಿಕೊಳ್ಳುವ ಭಯದಿಂದಾಗಿ ಮುಖ ಬಾಡಿಹೋಗಿತ್ತು. ಮಕ್ಕಳ ಜೊತೆ ಬಂದ ತಂದೆತಾಯಿಗಳನ್ನು ಹತ್ತಿರ ಕರೆದು ನನ್ನ ಮಕ್ಕಳ ಕಥಾಸಂಕಲನಗಳ ಅಷ್ಟಗುಣಗಾನಮಾಡಿ ಅವರ ಮನವೊಲಿಸಲು ನಾಚಿಕೆಬಿಟ್ಟು ಪ್ರಯತ್ನಿಸಿದೆ. ಹಾಗೂ ಹೀಗೂ ನನ್ನ ಪ್ರಯತ್ನಕ್ಕೆ ಪ್ರತಿಫಲವೆಂಬಂತೆ ಹತ್ತಾರು ಪುಸ್ತಕಗಳನ್ನು ತಳ್ಳಿದ್ದಾಯಿತು. ಬರೆಯುವುದಕ್ಕಿಂತ ಅದನ್ನು ಪ್ರಕಟಪಡಿಸುವುದು ಎಂಥ ಕಷ್ಟ ಎಂದಷ್ಟೇ ಗೊತ್ತಿದ್ದ ನನ್ನಂಥವರಿಗೆ ಆ ಪುಸ್ತಕಗಳನ್ನು ಮಾರಾಟ ಮಾಡುವುದು ಇನ್ನೂ ಕಡುಕಷ್ಟ ಎನ್ನುವ ಅನುಭವ ಎರಡು ದಿನಗಳಲ್ಲಿ ಆಗಿತ್ತು. ಪುಸ್ತಕ ಪರಿಷೆಯಲ್ಲಿ ಬಜ್ಜಿ, ಬೊಂಡ, ಐಸ್ಕ್ರೀಂ, ಮಸಾಲದೋಸೆ, ಪುಳಿಯೋಗರೆ ಮಳಿಗೆಗಳಿಗೆ ಜನ ಎಷ್ಟು ಶ್ರದ್ಧೆಯಿಂದ, ಖುಷಿಯಿಂದ ಹಣ ಖರ್ಚು ಮಾಡಿ ಸಾರ್ಥಕತೆ ಪಡೆಯುತ್ತಿದ್ದಂತೆ, ಮಕ್ಕಳಿಗೆ ನೋಡಲೂ ಬಿಡದೆ ಮುಂದೆ, ಮುಂದೆ ಪುಸ್ತಕ ಮಳಿಗೆಗಳನ್ನು ದಾಟಿಸಿ ಕರೆದೊಯ್ಯುತ್ತಿರುವುದನ್ನು ಕಂಡಾಗ ಪುಸ್ತಕ ಪ್ರಕಟಣೆಯ ಭವ್ಯಭವಿಷ್ಯ ಕಣ್ಣೆದುರೇ ತೆರೆದು ನಿಂತಂತಾಯಿತು.

ಛೆ! ಒಂದು ಮಸಾಲದೋಸೆಯ ತೂಕಕ್ಕೂ ಬಾರದ ಈ ನನ್ನ ಸಾಹಿತ್ಯರಚನೆಗೆ ಅರ್ಥವಿದೆಯೆಎನಿಸಿತು?

ಉಚಿತ ಹಂಚಿಕೆಗಾಗಿ ಐದಾರು ದೊಡ್ಡದೊಡ್ಡಮೇಜುಗಳ ಮೇಲೆ ರಾಶಿಬಿದ್ದಿದ್ದ ಪುಸ್ತಕಗಳನ್ನು ನೋಡಿ ಬರಲು ಅತ್ತ ಹೆಜ್ಜೆ ಹಾಕಿದೆ. ಅಬ್ಬಾ ಎಂಥೆಂಥಾ ಪುಸ್ತಕಗಳಿದ್ದವು ಅಲ್ಲಿ ! ನನ್ನಂಥ ಸಾಹಿತಿಗಳು ಯಾರ್ಯಾರಿಗೆಲ್ಲಾ ಓದಲೆಂದು ಉಚಿತವಾಗಿ ಕೊಟ್ಟ ಗೌರವಪ್ರತಿಗಳು ಹಸ್ತಾಕ್ಷರಗಳೊಂದಿಗೆ ಅಲ್ಲಿ ರಾರಾಜಿಸುತ್ತಿದ್ದವು. ಇನ್ನು ಹತ್ತಾರು ವರ್ಷಗಳಿಂದ ಓದಿಯೋ, ಓದದೆಯೋ ಎಸೆಯಲು, ಹಳೆಪುಸ್ತಕಗಳಿಗೆ ತೂಗಿ ಹಾಕಲು ಮನಸ್ಸಾಗದೆ ಹೀಗೆ ಪುಸ್ತಕಪರಿಷೆಗೆ ದಾನ ಮಾಡಿದಂತಹವೇ ಹೆಚ್ಚು.

ಮುಂದೆ? ಮುಂದೇನು ಎಂಬ ಚಿತ್ರ ಆಗಲೇ ನನಗೆ ಸಿಕ್ಕಿತ್ತು. ನನ್ನ ಸಂಗ್ರಹದಲ್ಲಿರುವ ನೂರಾರು ಅತ್ಯುತ್ತಮ ವಿವಿಧ ಲೇಖಕರ ಪುಸ್ತಕಗಳು, ನನ್ನದೇ ಪ್ರಕಟಣೆಯ ಸ್ವಂತ ಕೃತಿಗಳು ಮಾರಾಟವಾಗದೆ ಉಳಿದ ಪುಸ್ತಕಗಳೆಲ್ಲಾ ನನ್ನ ನಂತರ ನನ್ನ ಮಕ್ಕಳು ಹೀಗೆದಾನ ಮಾಡಿದರೆ ಆಶ್ಚರ್ಯವಿಲ್ಲ. ಚಿಂತೆಯಿಲ್ಲ ಬಿಡಿ, ಪ್ರಕಟಣೆಯ ಹುಚ್ಚಂತೂ ಬಿಟ್ಟಿದೆ. ಆದರೆ ನನ್ನ ಲೇಖನಿ ಮಾತ್ರ ವಿಶ್ರಾಂತಿ ಇಲ್ಲದೆ ನಿಲ್ಲದೆ ಓಡುತ್ತಿದೆ. ಅದು ನನ್ನ ಜೀವದ ನಾಡಿ ಮಿಡಿತ!

■

# ಏನಂತೀರ ಗೆಳತಿಯರೇ?

**ಸಹನಾ ಪ್ರಸಾದ್**

ಇವತ್ತು ಒಂದು ದಿನ ಗಂಡ ಗಂಭೀರವಾಗಿ ನುಡಿದ.

ಅಂದ್ರೆ? ಹೆಂಡತಿ ಭುಸುಗುಟ್ಟುತ್ತಿದ್ದವಳು ಸಂಶಯದಿಂದ ಕೇಳಿದಳು.

ಆಗಷ್ಟೆ ಅವಳ ವಾಗ್ಬಾಣಗಳಿಂದ ಸುಸ್ತಾದ ಗಂಡ ನುಡಿದ ಒಂದು ದಿನ ಮನೆ ಬಿಟ್ಟು, ನಿಮ್ಮನ್ನು ಬಿಟ್ಟು ಹೋಗುತ್ತೀನಿ ಅಂದಿದ್ಯಲ್ಲ, ಅದಕ್ಕೆ ಇವತ್ತು ಒಂದು ದಿನ ಅಂದೆ ಇಷ್ಟು ನುಡಿದ ಮೇಲೆ ಅವನು ಬೇರೇನೊ ಹೇಳುವ ಸ್ತಿತಿಯಲ್ಲಿರಲಿಲ್ಲ. ಏಕೆಂದರೆ ಲಟ್ಟಣಗೆಯೊಂದು ಅವನ ತಲೆ ಮೇಲೆ ರಾಕೆಟ್ ತರಹ ಹಾರಿ ಬಂದು...

ಅದೆಲ್ಲಾ ಇರಲಿ, ಈ ಸಿನೆಮಾಗಳಲ್ಲಿ ತೋರಿಸುತ್ತಾರಲ್ಲ, ಹೆಂಡತಿ ಮನೆ ಬಿಟ್ಟು ಹೊರಡುವ ನಿರ್ಧಾರ ತೆಗೆದುಕೊಂಡು ಕಣ್ಣೀರು ತಡೆಯುತ್ತಾ ಎರಡು ಸೂಟ್ಕೇಸುಗಳಲ್ಲಿ ತುಂಬಿ ಮನೆ ಬಿಟ್ಟು ಹೋಗುತ್ತಾಳಲ್ಲವಾ? ಅದು ಹೇಗೆ ಅಂತ. ಯಾವ ಯಾವ ಬಟ್ಟೆ ತೆಗೆದುಕೊಂಡು ಹೋಗಬೇಕು, ಒಡವೆ ಪೆಟ್ಟಿಗೆ ಎಲ್ಲಿ ಇಟ್ಟುಕೊಳ್ಳಬೇಕು, ಹಾಲಿನವ, ಕೆಲಸದವಳು, ಮುಂತಾದವರಿಗೆ ಕೊಟ್ಟ ಅಡ್ವಾನ್ಸ್ ವಸೂಲಿ ಹೇಗೆ, ಮೊನ್ನೆ ಮೂಲೆ ಮನೆ ಪದ್ದಮ್ಮನಿಗೆ, ಪಕ್ಕದ ಮನೆ ಕಾಮಾಕ್ಷಿಗೆ ತಿಂಡಿ ಹಾಕಿ ಕೊಟ್ಟ ಪಾತ್ರೆ ಹೇಗೆ ವಾಪಸ್ಸು ಪಡೆದುಕೊಳ್ಳುವುದು, ಈ ಗಂಡ ಎನಿಸಿಕೊಂಡಿರುವ ಪ್ರಾಣಿ ಸಮಯಕ್ಕೆ ಸರಿಯಾಗಿ ಊಟ, ತಿಂಡಿ ಮಾಡುವುದೊ ಇಲ್ಲವೋ, ತಾನಿಲ್ಲ ಅಂತ ಕಂಡ ಕಂಡಲ್ಲಿ ಕಾಫಿ ಲೋಟ, ತಿಂಡಿ ತಿಂದ ಎಂಜಲು ತಟ್ಟೆ ಇಡುವುದು... ಹೀಗೆ ಬಹಳಷ್ಟು ಯೋಚನೆಗಳು ಮುತ್ತುವುದಿಲ್ಲವೇ? ಇಷ್ಟು ಕಷ್ಟ ಪಟ್ಟು ಬೆಳೆಸಿದ ಹೂವಿನ ಗಿಡಗಳು ಬಾಡಿ ಹೋಗುವುದಿಲ್ಲವೇ? ಮನೆಯಲ್ಲಿ ತಾನು ಸರ್ವ ಸ್ವತಂತ್ರದಿಂದ ಉಪಯೋಗಿಸುತ್ತಿದ್ದ ರಿಮೋಟ್ ಈಗ ಯಾರ ಸ್ವತ್ತಾಗುತ್ತದೆ, ಎದುರು ಮನೆ ಮೀನಾಳಿಗೆ ನನ್ನ ಮೇಲೆ ಯಾವಾಗಲೂ ಕಣ್ಣು, ಅವಳಂತು ಖುಷಿಯಿಂದ ಕುಣಿದಾಡೇ ಬಿಡುತ್ತಾಳೆ...

ಸರಿ. ಹೊಗಲಿ ಸ್ವಲ್ಪ ದಿನ ಬಿಟ್ಟು ಹೋಗಿರೋಣ ಅಂದ್ರೆ ಎಲ್ಲಿಗೆ ಹೋಗಬೇಕು? ತಾಯಿ ಮನೆಗಾ? ಬೇಡ ಬೇಡ, ಅಲ್ಲಿ ನೂರಾರು ಕರಾರುಗಳು, ಬೆಳಗ್ಗೆ ಬೇಗ ಏಳು, ಬಾಗಿಲಿಗೆ ನೀರು ಹಾಕಿ ರಂಗೋಲಿ ಹಾಕು (ಇಲ್ಲಾದರೆ ಕೆಲಸದವಳು ನಾ ಏಳುವ ಮುನ್ನವೇ ಮುಗಿಸುವಳು), ಕಾಫಿ ಕುಡಿಯುವ ಮುನ್ನ ದೇವರಿಗೆ ಕೈ ಮುಗಿ (ಇಲ್ಲಾದರೆ ಗಂಡ ಕೈ ಮುಗಿದು ಕಾಫಿ ನೀಡುವ), ಸ್ನಾನ ಮಾಡದೆ ತಿಂಡಿ ತಿನ್ನಬೇಡ ( ಬೇಗ ಸ್ನಾನ ಮಾಡಿ ಬಾ ಚಿನ್ನ, ನಿನಗೆ ಬಿಸಿ ದೋಸೆ ಮಾಡಿ ನಾ ಆಫೀಡಸಿಗೆ ಹೊರಡಬೇಕು!ಎನ್ನುವ ಗಂಡ ಅಲ್ಲಿ ಎಲ್ಲಿ?) ಅಯ್ಯೊ, ಏನು ಡ್ರೆಸ್ಸ್ ಇದು, ಏನು ಇನ್ನು ಚಿಕ್ಕ ಹುಡುಗಿ ಅಂದು ಕೊಂಡಿದ್ಯಾ ( ನೀ ಏನು ಹಾಕಿ ಕೊಂಡ್ರೂ ನನ್ನ ಕಣ್ಣಿಗೆ ಟೀನೇಜ಼ರ್- ಬಾಯಲ್ಲಿ, ಮನಸ್ಸಿನಲ್ಲಿ ಬಹುಶ: ಆ ರೀತಿ ಹೇಳಿಲ್ಲದಿದ್ದರೆ ಈ ದಿನ ರಾತ್ರಿ ನಾ ವೆರಾಂಡದಲ್ಲಿ!), ಹೀಗೆ ಹತ್ತು ಹಲವಾರು. ಇನ್ನು ನೆಂಟರಿಷ್ಟರು, ಗೆಳತಿಯರು.. ಬೇಡಪ್ಪಾ ಬೇಡ, ಹೋಗಲಿ ಲೇಡೀಸ್ ಹಾಸ್ಟಲ್? ಅಲ್ಲಿ ತಿಂಗಳಿಗೆ ಇಷ್ಟು ಅಂತ ಕೊಟ್ಟು, ಅವರು ಹೇಳಿದ ಹಾಗೆ ಟೈಮ್ ಪಾಲಿಸಿ, ಕೊಟ್ಟ ಊಟ ಮಾಡಿ, ಅಬ್ಬ, ಈ ವಯಸ್ಸಿನಲ್ಲಿ ನನ್ನ ಕೈಲಿ ಆಗುತ್ತಾ? ಹಾ, ಇನ್ನೊಂದು, ಪ್ರತಿ ತಿಂಗಳು ಸಂಬಳ ಬಂದ ಮೇಲೆ ಪ್ರೀತಿ, ಭಯದಿಂದ ತನಗೆ ತಂದು ಕೊಡುತ್ತಿದ್ದ, ದಿನಾ ನನ್ನ ಕಾಲು ಒತ್ತಿ, ಮುದ್ದು ಮಾಡುವ ಗಂಡ, ಬೇಕಾದಷ್ಟು ಸೀರೆ ಬಟ್ಟೆ, ವಡವೆ, ಕ್ರೀಮ್ಗಳು, ಇತರೆ ಸೌಂದರ್ಯ ವರ್ಧಕ ಸಾಮಾನುಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ... ಆಹಾ..

ಹೀಗೆ ಹತ್ತು ಹಲವಾರು ಯೋಚನೆಗಳಿಂದ ಬೆಂದು ತಲೆ ಕೆಡಿಸಿಕೊಳ್ಳುವ ಬದಲು ಈ ಮನೆಯಲ್ಲೇ ಇದ್ದು ಬಿಟ್ಟರೆ ಆಯಿತು ಎಂದು ನಮ್ಮ ನಿಮ್ಮಂತಹ ಸಾಧಾರಣ ಗೃಹಿಣಿಯರು ಯೋಚಿಸುವುದು ಅಲ್ಲವೇ? ಹಾ, ಒಂದು ಜೋಕು, ವಾಸ್ತವಕ್ಕೆ ಹತ್ತಿರವಾದುದು– ಸಿಕ್ಕಾಪಟ್ಟೆ ಜಗಳ ಆಡುತ್ತಿದ್ದರೂ ಜತೆಯಲ್ಲೇ ಬಾಳುತ್ತಿದ್ದ ಗಂಡ ಹೆಂಡಿರನ್ನು ಯಾರೋ ಕೇಳಿದರಂತೆ, ನೀವ್ಯಾಕೆ ವಿಚ್ಛೇದನ ತೆಗೆದುಕೊಳ್ಳಬಾರದು? ಅದಕ್ಕೆ ಗಂಡ ಹೇಳಿದನಂತೆ– ಯಾರು ಮೊದಲು ಮನೆ ಬಿಟ್ಟು ಹೋಗುತ್ತಾರೋ ಅವ್ರು ಮಕ್ಕಳನ್ನು ಕರೆದುಕೊಂಡು ಹೋಗಬೇಕು ಎಂದು ನಿರ್ಧಾರವಾಗಿದೆ. ಅರ್ಥವಾಯಿತೇ, ಮನೆ ಬಿಟ್ಟು ಹೋಗುವುದು ಅಷ್ಟು ಸುಲಭವಲ್ಲ, ಅದರಲ್ಲೊ ಮಕ್ಕಳು, ಮರಿ ಇದ್ದ ಮೇಲೆ, ಇಲ್ಲದಿದ್ದರೂ ಸಹ!

ಗಂಡನನ್ನು ರಮಿಸಿ ಒಲಿಸಿಕೊಳ್ಳುವುದು ಇಷ್ಟೆಲ್ಲಾ ಕಷ್ಟ ಪಡುವುದಕ್ಕಿಂತ ಸಾವಿರ ಪಾಲು ಈಸಿ. ಅಷ್ಟಕ್ಕು ಕೋಪ ಮಾಡಿಕೊಂಡು ಊಟ ಬಿಟ್ಟರೆ ಇನ್ನು ಒಳ್ಳೆಯದೇ, ತಾನು ಸ್ವಿಗ್ಗಿ, ಜೊಮ್ಯಾಟೊ ಇಂದ ತರಿಸಿಕೊಂಡು ಹಾಯಾಗಿರಬಹುದು...ಏನಂತೀರ ಗೆಳತಿಯರೇ?

■

---

## ನುಡಿಮುತ್ತು

ಸುಮ್ಮನೆ ಮಾತಾಡಬೇಡಿ, ಕೆಲಸ ಮಾಡಿ ತೋರಿಸಿ,
ಮಾಡಿದ್ದೀನಿ ಎಂದು ಹೇಳಬೇಡಿ ಮಾಡಿದ್ದನ್ನು
ತೋರಿಸಿ, ಭರವಸೆ ನೀಡಬೇಡಿ ನಿಮ್ಮನ್ನು
ಸಮರ್ಥಿಸಿಕೊಳ್ಳಿ

***

ಕೆಟ್ಟ ಮನೋಭಾವದಲ್ಲಿರುವಾಗ ಕೆಟ್ಟ ಪದಗಳನ್ನು
ಬಳಸಬೇಡಿ. ಏಕೆಂದರೆ ನಿಮ್ಮ ಕೆಟ್ಟ ಮನೋಭಾವವನ್ನು
ಬದಲಾಯಿಸುವ ಸಮಯ ಬರುತ್ತದೆ. ಆದರೆ ಆಡಿದ
ಕೆಟ್ಟ ಮಾತುಗಳನ್ನು ಹಿಂಪಡೆಯಲಾಗುವುದಿಲ್ಲ.

***

ನಿಮ್ಮ ಭೂತಕಾಲವನ್ನು ಬೇಜಾರಿಲ್ಲದೇ ಒಪ್ಪಿಕೊಳ್ಳಿ,
ಆತ್ಮವಿಶ್ವಾಸದಿಂದ ವರ್ತಮಾನವನ್ನು ಧೈರ್ಯದಿಂದ
ಎದುರಿಸಿ ಆಗ ನಿಮ್ಮ ಭವಿಷ್ಯವನ್ನು ನೀವು ಹೆಚ್ಚು
ಭರವಸೆಯಿಂದ ಎದುರಿಸಬಹುದು.

***

ಎರಡು ಸಂದರ್ಭಗಳಲ್ಲಿ ನೀವು ಮೌನವಾಗಿರಿ. ಒಂದು,
ನೀವು ಆಡಿದ ಮಾತುಗಳಿಂದ ನಿಮ್ಮ
ಮನೋಭಾವವನ್ನು ಅರ್ಥ ಮಾಡಿಕೊಳ್ಳದ ಸಂದರ್ಭ
ಮತ್ತು ಇನ್ನೊಂದು ನೀವು ಏನೊಂದು
ಮಾತಾಡದೆಯೂ ನಿಮ್ಮನ್ನು ಚನ್ನಾಗಿ ಅರ್ಥ
ಮಾಡಿಕೊಳ್ಳುವ ಸಂದರ್ಭ

# ಹಲ್ಲಿ

**ನಳಿನಿ ಸೂರ್ಯಪ್ರಕಾಶ್**

ನನ್ನ ಮನೆಯೆಲ್ಲೇ ವಾಸವಾಗಿದ್ಕೊಂಡು ನನ್ನನ್ನೇ ಹೆದರಿಸುವ ಏಕೈಕ ಜೀವಿ ಅಂದ್ರೆ ಹಲ್ಲಿ. ನಾನು ಚಿಕ್ಕವಳಿದ್ದಾಗ ನನ್ನ ಚಿಕ್ಕಮ್ಮಂದಿರು ಹಲ್ಲಿಯೇನಾದ್ರು ಹತ್ತಿರ ಸುಳಿದಾಡಿದ್ರೆ ಸಾಕು, ಹೆದರಿಕೆಯಿಂದ 'ಕಿಟಾರ್' ಅಂತ ಕಿರುಚಿಕೊಳ್ಳೋರು. ನನ್ನ ಅಮ್ಮ ಅಜ್ಜಿಗೂ ಹಲ್ಲಿಯಂದ್ರೆ ಸ್ವಲ್ಪ ಭಯವೇ. ಹಾಗಾಗಿ ನಾನು ಚಿಕ್ಕವಳಿದ್ದಾಗಲೇ 'ಹಲ್ಲಿಯನ್ನು ಕಂಡ್ರೆ ಹೆದಕ್ಕೋಬೇಕು' ಎಂಬ ಸಂದೇಶ ನನ್ನ ಸುಪ್ತ ಮನಸ್ಸಿನೊಳಗೆ ಸೇರ್ಕೊಂಡುಬಿಟ್ಟಿದೆ.

ನಂಗೆ ಮುಂಚಿಂದಲೂ ಚಿಕ್ಕ-ಚಿಕ್ಕ ಮರಿಹಲ್ಲಿಗಳನ್ನ ಕಂಡ್ರೆ ಅಷ್ಟು ಭಯವಿಲ್ಲ. ಪೊರಕೆಯಿಂದ 'ಉಶ್.... ಉಶ್....!' ಅಂತ ಹೊರಗೋಡಿಸಿಯೇನು. ಅದೇ ದೊಡ್ಡ ಹಲ್ಲಿಯಾದ್ರೆ ಇದಕ್ಕೆ ತದ್ವಿರುದ್ಧ! ಅದ್ರಲ್ಲೂ ಬಿಳಿಹಲ್ಲಿಗಿಂತ ಕರಿಹಲ್ಲಿಯಂದ್ರೆ ಮತ್ತಷ್ಟು ಭಯ! ಗೋಡೆ ಮೇಲೆಲ್ಲಾದ್ರು ಹಲ್ಲಿ ಕಂಡ್ರೆ, ಅದರ ಕೆಳಗಿರುವ ಕುರ್ಚಿ-ಸೋಫಾ ಇಲ್ಲಾ ಮಂಚದ ಮೇಲೆ ನಾನು ಕೂರುವುದಾಗಲಿ, ಮಲಗುವುದಾಗಲೀ ಖಂಡಿತ ಮಾಡೋದಿಲ್ಲ. ಆಗಲ್ಲಾ ಭಯಕ್ಕಿಂತ ಹೆಚ್ಚಾಗಿ ಅದೆಲ್ಲಿ ನನ್ನ ಮೇಲೆ ಬಿದುಬಿಡತ್ತೋ ಎಂಬ ಆತಂಕ ನನ್ನನ್ನ ಕಾಡತ್ತೆ. ಕೆಲವೊಮ್ಮೆ ಗೋಡೆ ಮೇಲೆ ತೆಪ್ಪಗಿರದೆ, ತಾರಸಿ ಮೇಲೆ ಹರಿದಾಡುವ ಅದರ ಸರ್ಕಸ್ ಕಂಡರೆ ಆತಂಕದಿಂದ ನನ್ನ ಎದೆ ಢವಗುಟ್ಟತ್ತೆ. ತಾರಸಿ ಮೇಲಿದ್ದಾಗ ಅದು ಕೆಳಗೆ ಬೀಳುವ ಸಾಧ್ಯತೆ ಹೆಚ್ಚು ಅಂತ ನನ್ನ ಭಾವನೆ. ಹಾಗೆ ಕೆಳಗೆ ಬಿದ್ದಾಗ 'ಠಪ್' ಅಂತಾಗುವ ಸದ್ದು ನನ್ನಲ್ಲಿ ಭಯ-ಆತಂಕ-ಗಾಬರಿ ಅಸಹ್ಯಗಳ ಕೆಲಸು ಮೇಲೋಗವನ್ನುಂಟು ಮಾಡತ್ತೆ. 'ಹೆದರಿದೋರ ಮೇಲೆ ಹಲ್ಲಿ ಎಸೆದ್ರು' ಅನ್ನೋ ಮಾತು ನನ್ನಂಥವರನ್ನ ನೋಡಿಯೇ ಹುಟ್ಕೊಂಡಿರಬೇಕು. ಇನ್ನು ಹುಳ-ಹುಪ್ಪಟೆಯನ್ನೋ, ಇಲ್ಲ ಜಿರಳೆಯನ್ನೋ ತನ್ನ ಬಾಯಲ್ಲಿ ಹಿಡಿದಿಟ್ಕೊಂಡಿರೋ ಹಲ್ಲಿಯನ್ನು ಕಂಡ್ರಂತೂ ನನ್ನ ಭಯ ಎಲ್ಲೆ ಮೀರುತ್ತೆ! ನಾವು ಬಾಡಿಗೆ ಮನೆಯಲ್ಲಿದ್ದಾಗ ಬಚ್ಚಲು ಮನೆಯ ಅಟ್ಟದಲ್ಲಿ ಹಲ್ಲಿಗಳಿದ್ದವು. ಬೇಸಿಗೆಯಲ್ಲಂತೂ ನನಗೆ ಇವುಗಳ ಕಾಟ ವಿಪರೀತ. ಬಚ್ಚಲು ಮನೆಯ ಬಾಗಿಲ ಹಿಂದೆ ಇವುಗಳನ್ನ ಕಂಡ್ರೆ ಹೌಹಾರ್ತಿದ್ದ ನಾನು ಸ್ನಾನಕ್ಕೆ ಹೋಗೋದಾದ್ರೂ ಹೇಗೆ? ಆಗೆಲ್ಲಾ ನಮ್ಮಜ್ಜಿ ಪೊರಕೆ ಹಿಡ್ಕೊಂಡು, 'ಉಶ್.. ಉಶ್..! ಅಂತ ಹಲ್ಲಿಯನ್ನಟ್ಟಕ್ಕೋಡಿಸಿ, ''ಹೋಯ್ತು, ಬಾರವ್ವಾ...'' ಅಂತ ಕರೆಯೋರು. ತನ್ನ ಮನಸ್ಸಿನ ಮೂಲೆಯಲ್ಲೇ ಸ್ವಲ್ಪ ಭಯವಿದ್ರೂ, ನನಗಾಗಿ ಧೈರ್ಯ ತದ್ಕೊಂಡು, ಒಮ್ಮೆಯೂ ಬೇಸರ ಪಟ್ಕೊಳ್ಳದೇ ಹಲ್ಲಿ ಓಡಿಸ್ತಿದ್ದ ನನ್ನ ಅಜ್ಜಿಯ ಅಂತ ಕರಣವನ್ನ ಮರೆಯೋಕ್ಕಾಗತ್ಯೇ?

ಹಲ್ಲಿ ಬಗ್ಗೆ ನನ್ನ ಅಜ್ಜಿ ಹೇಳ್ತಿದ್ದ ಒಂದೆರಡು ಮಾತುಗಳೂ ನೆನಪಾಗುತ್ತವೆ. ಮೊದಲನೆಯದಾಗಿ, ಹಲ್ಲಿಯ ಬಾಲ ತುಂಡಾಗಿ, ಆ ಬಾಲ ವಿಲವಿಲಾಂತ ಒದ್ದಾಡ್ತಿರೋವಾಗ ಹೇಳೋರು, 'ಹಲ್ಲೀಗೆ ಬಾಲದಲ್ಲೇ ಜೀವ...' ಅಂತ! ಬಾಲ ತುಂಡಾದ ಹಲ್ಲಿಗೆ ಹೊಸ ಬಾಲ ಬೆಳೆದಿರೋದನ್ನ ಕಂಡಿದೀನಿ ಹೊರತು, ದೇಹವಿಲ್ಲದ ಬಾಲಕ್ಕೆ ಹೊಸ ಹಲ್ಲಿ (ದೇಹ) ಬೆಳೆದಿರೋದನ್ನು ನಾನಂತೂ ಕಂಡಿಲ್ಲ! ಹಾಗಿದ್ದ ಮೇಲೆ ಹಲ್ಲಿ ಬಾಲದಲ್ಲಿ ಜೀವ ಹೇಗಿರತ್ತೋ ನಂಗಂತೂ ಅರ್ಥವಾಗಿಲ್ಲ! ಎರಡನೆಯದಾಗಿ, 'ಹಲ್ಲಿ ಈಶ್ವರ!' ಅಂತ. ಈ ಈಶ್ವರನೇನಾದ್ರು ಮೈ ಮೇಲೆ ಬಿದ್ರೆ ಗೋವಿಂದ! ಕೈ ಕಾಲು ತೊಳ್ಕೊಂಡು, ದೇವರಿಗೆ ದೀಪ ಹಚ್ಚಿ, ಆಮೇಲೆ ಪಂಚಾಂಗ ತೆಗೆದು, ಹಲ್ಲಿ ಬಿದ್ದ 'ಶುಭಾಶುಭ' ಫಲಗಳನ್ನ ನೋಡೋರು. ಶುಭವೋ,

ಅಶುಭವೋ, ಯಾರಿಗೂ ಫಲ ಪ್ರಾಪ್ತಿಯಾದದ್ದು ಮಾತ್ರ ನಂಗಂತೂ ನೆನಪಿಲ್ಲ.

ಈ ಶುಭಾಶುಭ ಫಲಗಳೂ ಎಷ್ಟು ವಿಚಿತ್ರ ಅಂತೀನಿ. ತಲೆ ಮೇಲೆ ಬಿದ್ರೆ ಕಲಹವಂತೆ!, ಮೂಗಿನ ಮೇಲೆ ಸುಗಂಧ ದ್ರವ್ಯ ಪ್ರಾಪ್ತಿ, ಅದೇ ಮೂಗಿನ ಕೊನೆಯಲ್ಲಿ ವ್ಯಾಧಿ ಸಂಭವ! ಮೇಲಿನ ತುಟಿಯ ಮೇಲೆ ಧನವ್ಯಯವಾದ್ರೆ, ಕೆಳಗಿನ ತುಟಿಯ ಮೇಲೆ ಧನಲಾಭ! ಬಲತೋಳಿನ ಮೇಲೆ ಚೋರಭಯವಾದ್ರೆ, ಎಡತೋಳಿನ ಮೇಲೆ ಸುಖಪ್ರದವಂತೆ! ಎಲ್ಲಕ್ಕಿಂತಲೂ ನನಗೆ ರಂಜನೀಯವಾಗಿ ತೋರಿದ್ದು 'ದವಡೆಯ ಮೇಲೆ ಬಿದ್ದರೆ ಸ್ತ್ರೀ ಸೌಖ್ಯ!'' ಬರೆದಾತ ರಸಿಕ! ಇಲ್ಲಿ ಎಡ-ಬಲ ದವಡೆಗಳೆಂಬ ಗೊಡವೆಗೆ ಹೋಗೇ ಇಲ್ಲ. ಯಾಕೇಂತೀರ... ''ಸ್ತ್ರೀ ಸೌಖ್ಯ'' ಶುಭ-ಫಲವಾದ್ರೆ, ಹೆಚ್ಚಿನಂಶ 'ಕಪಾಳ ಮೋಕ್ಷ' ಅಶುಭ ಫಲವಿದ್ದೀತು! ಏಕೆಂದರೆ ಕಪಾಳಮೋಕ್ಷದ ಹಿಂದಿನ ಸ್ತ್ರೀ ಶಕ್ತಿಯನ್ನು ಅಲ್ಲಗಳೆಯುವಂತೆಯೂ ಇಲ್ಲವಲ್ಲ! ಸುಮ್ಮನೆ, ಹಲ್ಲಿಗೂ, ದವಡೆಗೂ, ದವಡೆಹಲ್ಲಿಗೂ ಸಂಬಂಧ ತರುವ ಇಲ್ಲದ ಉಸಾಬರಿ ಯಾಕೆ ಅಂತ ಅಶುಭ ಫಲವನ್ನೇ ಜಾಣತನದಿಂದ ಕೈಬಿಟ್ಟಿದ್ದಾನೆ ರಸಿಕಶಿಖಾಮಣಿ! ಇರಲಿ! ನನಗೆ ಪರಿಚಯವಿದ್ದ ಆಸ್ಟ್ರೇಲಿಯಾದ ವ್ಯಕ್ತಿಯೊಬ್ಬ ಹೇಳ್ತಿದ್ದ... ಅವನ ಊರಲ್ಲಿ ದೊಡ್ಡ ದೊಡ್ಡ ಹಲ್ಲಿಗಳಿವೆಯಂತೆ, ಆತನಿಗಂತೂ ಹಲ್ಲಿಗಳಂದ್ರೆ ಸ್ವಲ್ಪವೂ ಭಯವಿಲ್ಲವಂತೆ! ಒಂದ್ಸಲಿಯಂತೂ ತನ್ನ ಮೈ ಮೇಲೆಲ್ಲಾ ಹರಿದಾಡ್ಡೋಕ್ಕೆ ಬಿಟ್ಟಿದ್ದವಂತೆ! ಶಿವ ಶಿವಾ! ಇವನಿಗೆ ಅದ್ಯಾವ ಶುಭಾಶುಭ ಫಲ ಅನ್ವಯಿಸತ್ತೋ ಆ 'ಈಶ್ವರ'ನೇ ಬಲ್ಲ! ನಮ್ಮಜ್ಜಿ ಇನ್ನೊಂದು ಮಾತು ಹೇಳೋರು. ಕಂಚಿಯ ದೇವಸ್ಥಾನದಲ್ಲಿರುವ ಲೋಹದ ಹಲ್ಲಿಯನ್ನು ಮುಟ್ಟಿ ಬಂದ್ರೆ ಹಲ್ಲಿ ಬಿದ್ದ ದೋಷವಿರಲ್ಲ ಅಂತ. ನಾವೂ ಒಮ್ಮೆ ಕಂಚಿಗೆ ಹೋದಾಗ, ಯಾವುದಕ್ಕೂ ಇರಲಿ ಅಂತ ಈ ಹಲ್ಲಿಯನ್ನು ಮುಟ್ಟಲೋ ಬೇಡವೋ ಅಂತ ಬೆರಳ ತುದಿಗಳಿಂದ ಸವರಿ ಬಂದೆ. ನಾವೇನೋ ಪಂಚಾಂಗ, ದೋಷ ಪರಿಹಾರ ಅಂತ ಅದೂ-ಇದೂ ಮಾಡ್ಕೊಂಡೇವು. ಆದರೆ ಮನುಷ್ಯರ (ಅದೂ ನನ್ನಂಥ ಪುಕ್ಕಲುಗಳ) ಮೇಲೆ ಬಿದ್ದ ಹಲ್ಲಿ, ನಂತರ ನಡೆಯುವ ಕಿರುಚಾಟ-ಹಾರಾಟಗಳಲ್ಲಿ ಹೆದರಿ ಕಂಗಾಲಾಗಿ, ಸತ್ತೆನೋ ಬದುಕಿದೆನೋ ಅಂತ ದಿಕ್ಕಾಪಾಲಾಗಿ ಸರಸರಾಂತ ಹರಿದಾಡ್ಕೊಂಡು ಯಾವುದೋ ಮೂಲೆ ಸೇರ್ಕೊಂಡ ಮೇಲೆ, ತನಗಾದ ಮನುಷ್ಯರ ಸ್ಪರ್ಶದ ಶುಭಾಶುಭ ಫಲಕ್ಕಾಗಿ ಯಾವ ಪಂಚಾಂಗ ನೋಡ್ಬೇಕು ಹೇಳಿ. ಪಾಪ! ನಾನು ಹೆದರುವ, ನನ್ನನ್ನು ಒಮ್ಮೊಮ್ಮೆ ಕನಸಿನಲ್ಲೂ ಕಾಡುವ ಹಲ್ಲಿಯ ಬಗ್ಗೆ ನನ್ನಲ್ಲಿ ಅನುಕಂಪವೂ ಇದೆ ಅನ್ನಿಸಿದಾಗೆಲ್ಲಾ ನನಗೆ ಆಶ್ಚರ್ಯವೂ, ಸಂತೋಷವೂ ಒಟ್ಟಿಗೆ ಆಗುತ್ತೆ!

ನನ್ನಂಥ ಹಲ್ಲಿ-ಪುಕ್ಕಲುಗಳ ಮಾತಿರಲಿ, ಅವುಗಳ ಬಗ್ಗೆ ಎಳ್ಳಷ್ಟೂ ಭಯವಿಲ್ಲದ ಇನ್ನೂ ಕೆಲವು ಶೂರರನ್ನೂ, ವೀರವನಿತೆಯರನ್ನೂ ನಾನು ಬಲ್ಲೆ. ನನ್ನ ದೊಡ್ಡಮ್ಮನ ಮಗನಂತೂ, ಹಳೇ ಬಟ್ಟೆ ಇದ್ರೆ ಸಾಕು, ತೊಗೊಂಡು ಗೋಡೆ ಮೇಲಿರುವ ಹಲ್ಲಿಯನ್ನು ಬಟ್ಟೆಯಲ್ಲಿ ಬಾಚ್ಕೊಂಡು, ಹೊರಗೆಸೆಯುವ ಧೀರ! ನನ್ನ ಪರಿಚಯದ ಒಬ್ಬಾಕೆಯಂತೂ, ಹಲ್ಲಿ ಬಾಲವನ್ನೇ ಹಿಡಿದೆಸೆಯುವ ವೀರವನಿತೆ! ರಾಣಿ ಚೆನ್ನಮ್ಮ, ಓಬವ್ವರನ್ನು ಇವಳ ಮುಂದೆ ನಿವಾಳಿಸಿಹಾಕೇನು! ಅದೇ ಜಿರಳೆಯ ವಿಷಯದಲ್ಲಿ ನಾನೂ ಪರಾಕ್ರಮಿಯೇ! ಜಿರಳೆಯ ಮೀಸೆ ಹಿಡಿದೆತ್ತೊಗೆಯ ಬಲ್ಲ ವೀರಾಂಗನೆ. ಕಚ್ಚೆ ಸೀರೆ ಉಡುತ್ತಿದ್ದ ನನ್ನ ಅಜ್ಜಿ ಅಂಗಾತ ಮಲಗಿ ವಿಲವಿಲಾಂತ ಒದ್ದಾಡ್ತಿದ್ದ ಜಿರಳೆಯನ್ನು ತನ್ನ ಅಂಗಾಲಿನಿಂದ 'ತಕಧಿಮಿತಾ!' ಅಂತ ತುಳಿದೂ ತುಳಿದೂ ಅಪ್ಪಚ್ಚಿ ಮಾಡ್ತಿದ್ದ ದೃಶ್ಯ ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ!

ಹಲ್ಲಿಯ ಕುರಿತು ನನ್ನ ಜೀವನದಲ್ಲಿ ನಡೆದ ಎರಡು ಘಟನೆಗಳನ್ನು ಇಲ್ಲಿ

ಹಂಚಿಕೊಳ್ಳಲೇಬೇಕು. ಮೊದಲನೆಯದು ನಡೆದದ್ದು ನಾನು ಚಿಕ್ಕವಳಿದ್ದಾಗ. ಆ ದಿನ ನಾನು ನನ್ನ ಅಜ್ಜಿ ಮನೆಯಲ್ಲಿದ್ದೆ. ರಾತ್ರಿಯೂಟಕ್ಕೆ ನನ್ನ ಸೋದರಮಾವ, ಚಿಕ್ಕಮ್ಮಂದಿರು ಮತ್ತು ನಾನು ಒಟ್ಟಿಗೆ ಕೂತೆವು. ಎಲ್ಲರಿಗೆ ಬಡಿಸುವುದು ನಮ್ಮಜ್ಜಿಯ ಕೆಲಸ. ಅನ್ನ-ಹೆಸರುಬೇಳೆ ತೊವ್ವೆ ಮೊದಲನೆ ಸುತ್ತಿನಲ್ಲಿ ಮುಗೀತು. ಎರಡನೆ ಸಲ ಬಡಿಸೋಣ ಅಂತ ನಮ್ಮಜ್ಜಿ ದೊಡ್ಡ ತಪ್ಪಲೆಯಲ್ಲಿದ್ದ ಬಿಸಿ ತೊವ್ವೆಯನ್ನ ಮತ್ತೊಂದು ಸಲ ಸೌಟಿನಿಂದ ತಳದಿಂದ ಕದಡಿದಾಗ, ಸುಮಾರು ಮೂರಿಂಚುದ್ದದ ಸತ್ತ ಹಲ್ಲಿ ಮೇಲೆ ಬಂತು!! ಹೌಹಾರಿದ ಎಲ್ಲರೂ ಊಟವನ್ನು ಅರ್ಧಕ್ಕೇ ಬಿಟ್ಟೆದ್ದೆವು. ಹಲ್ಲಿಗಳಲ್ಲಿ ವಿಷವೂ ಇರಬಹುದೆಂದು ಕೇಳಿದ್ದರಿಂದ ಇನ್ನೇನು ನಮ್ಮಜ್ಜಿಯನ್ನು ಬಿಟ್ಟು ತಿಂದವರೆಲ್ಲ ಶಿವನ ಪಾದ ಸೇರಿಕೊಂಡೇವೆಂಬ ಆತಂಕ ಶುರುವಾಯ್ತು. ನನ್ನನ್ನೂ ದರದರಾಂತ ಎಳ್ಕೊಂಡು, ಹತ್ತಿರದಲ್ಲಿದ್ದ ಡಾಕ್ಟರ್ 'ಶಾಪಿ'ಗೆ ಎಲ್ರೂ ದೌಡಾಯಿಸಿದರು. ಅಲ್ಲೋ ವಿಪರೀತ ಜನ. ಟೋಕನ್ ಸಿಸ್ಟಮ್ಮು ಬೇರೆ. ''ಅಯ್ಯೋ... ಕೈಲಾಸಕ್ಕೇ ಟಿಕೆಟ್ಟು ತೊಗೊಂಡಂಗಾಗಿದೆ! ಇನ್ನು ಟೋಕನ್ನು ತೊಗೊಂಡು ಕಾಯುವಷ್ಟು ಟೈಮಿಲ್ಲ!'' ಅಂತ ಅಸಿಸ್ಟೆಂಟಿಗೆ ವಿಷಯ ತಿಳಿಸಿದ್ವಿ. ಡಾಕ್ಟರು ನಮ್ಮನ್ನೆಲ್ಲ ನೋಡಿ, ಎಲ್ರಿಗೂ ಒಂದೊಂದು(ಸಿಪಿ) ಕ್ಯಾಲ್ಸಿಯಂ ಸ್ಯಾಂಡೋಜ್ ಮಾತ್ರೆ ಕೊಟ್ಟು 'ಚೀಪ್ತಾ ಕೂತಿರಿ' ಅಂದ್ರು. ಎಲ್ರೂ ಒಂದು ಹತ್ತು ನಿಮಿಷ ಮಾತ್ರೆ ಚೀಪ್ಕೊಂಡು ಹೊರಗೆ ಕೂತಿದ್ವಿ. ಆಮೇಲೂ ಕಲ್ಲುಗುಂಡಿನಂತಿದ್ದ ಎಲ್ರನ್ನೂ ನೋಡಿ ಡಾಕ್ಟರು, ''ಇನ್ನೂ ಹೋಗ್ಬೋದು'' ಅಂದ್ರು!

ಎರಡನೆಯ ಘಟನೆ ನಡೆದದ್ದು ನಾನು ಕಾಲೇಜಿನಲ್ಲಿದ್ದಾಗ. ನನ್ನ ಹಲ್ಲಿ-ಭಯವನ್ನು ನನ್ನ ಸ್ನೇಹಿತೆಯರ ಮುಂದೆಯೂ ಬಿಚ್ಚಿಟ್ಟಿದ್ದೆ. ಆ ದಿನ ಕ್ಲಾಸೊಂದನ್ನು ಮುಗಿಸಿ ಎಲ್ರೂ ಹೊರಗೆ ಬರ್‍ತಿದ್ವಿ. ಅಮಿತಾ ಹಾಗೇ ಸುಮ್ಮನೆ ನನ್ನ ಪಕ್ಕ ಬಂದು ನನ್ನ ಕೈಹಿಡಿದು, ನನ್ನ ಅಂಗೈಯಲ್ಲಿ ಏನೋ ಇಟ್ಟು ಗಟ್ಟಿಯಾಗಿ ಮುಚ್ಚಿದಳು. ಸ್ನೇಹಿತೆ, ನನ್ನ ಸಂತೋಷಕ್ಕೆ ಏನೋ 'ತಮಾಷೆ' ಕೊಟ್ಟಿರಬಹುದು ಅಂತ ಖುಷಿ, ಕುತೂಹಲದಿಂದ ಮುಷ್ಠಿ ತೆಗೆದ ನಾನು, ಮರುಕ್ಷಣವೇ, 'ಕಿಟಾರ್' ಎಂದು ಚೀರುತ್ತಾ, ಅಂಗೈಲಿದ್ದದ್ದನ್ನೆಸೆದೆ! ಈ ಅನಿರೀಕ್ಷಿತ ಚೀರಾಟದಿಂದ ಸುತ್ತ-ಮುತ್ತಲಿದ್ದ ಹುಡುಗ-ಹುಡುಗಿಯರು ಸೇರಿದಂತೆ, ಗಿಡ-ಮರಗಳೂ ಸ್ತಬ್ಧವಾಗಿಬಿಟ್ಟೇನೋ! ಅಮಿತಾ ನನ್ನ ಅಂಗೈಯಲ್ಲಿ ನೂರಕ್ಕೆ ನೂರು, ನಿಜವಾದ ಹಲ್ಲಿಯಂತಿದ್ದ ರಬ್ಬರ್ ಹಲ್ಲಿಯನ್ನಿಟ್ಟು ಗಟ್ಟಿಯಾಗಿ ಮುಚ್ಚಿದ್ದಳು! ಆಮಿತಾ, ಅಮಿತಾನಂದವನ್ನನುಭವಿಸ್ತಿದ್ದರೆ, ನಾನು, ಭಯ, ಗಾಬರಿ, ಅವಳ ಮೇಲಿನ ಸಿಟ್ಟು, ಅಸಹಾಯಕತೆ ಬೆರೆತ ರೋಷ, ಅಸಹ್ಯದ ಅಲೆಯ ಹಿಂದೆ ಸುನಾಮಿಯಂತೆ ಬಂದ ದುಃಖ! ಇವೆಲ್ಲಾ ಭಾವನೆಗಳ ಕೋಸಂಬರಿಯಾಗಿ ಹೋದೆ! ಕಿರುಚುತ್ತಾ ಅತ್ತೆ, ಅಳುತ್ತಾ ಕಿರುಚಿದೆ, ''ಅಮಿತಾ!, ನಿನ್ನೆಂದೂ ನಾನು ಕ್ಷಮಿಸಲ್ಲಾ....!'' ನನ್ನ ಮತ್ತೊಬ್ಬ ಸ್ನೇಹಿತೆ ಪ್ರೀತಿ, ನನ್ನನ್ನು ಸಮಾಧಾನ ಪಡಿಸ್ಕೊಂಡು, ಮುಂದಿನ ಕ್ಲಾಸಿಗೆ ಕರ್‍ಕೊಂಡು ಹೋದಳು, ಈ ಘಟನೆ ನಡೆದು ಸುಮಾರು ಇಪ್ಪತ್ತೈದು ವರ್ಷಗಳೇ ಆಗಿವೆ. ಈಗ ನೆನೆಸಿಕೊಂಡರೆ ಅಳು ಬದಲಾಗಿ ನಗು ಬರುತ್ತೆ!

ಅರೆ! ಯಾವುದೋ ಹಲ್ಲಿ ಲೊಚಗುಟ್ಟಿದ ಶಬ್ಧ... ನಮ್ಮಜ್ಜಿ ಹೇಳೋರು, ಹಲ್ಲಿ ಲೊಚಗುಟ್ಟಿದರೆ, ನಾವಂದುಕೊಂಡಿದ್ದು ನಿಜವಾಗತ್ತೆ ಅಂತ. ಈಗಷ್ಟೇ ಅಂದ್ಕೊಳ್ತಿದ್ದೆ, ನನ್ನೇ 'ಹಲ್ಲಿ' ಬರಹವನ್ನು ಮಾನ್ಯ ಸಂಪಾದಕರು ಪ್ರಕಟಿಸಬಹುದು ಅಂತ.......!

■

# ವಾರ್ತಾ ಪತ್ರಿಕೆ ಮಾತ್ರ ಅಲ್ಲ...

**ನಂನಾಗ್ರಾಜ್**

ಬೆಳ್ಳಂಬೆಳಗ್ಗೆ ನಾನು ಮೈಯೆಲ್ಲ ಕಿವಿಯಾಗಿಸಿಕೊಂಡು ಶಥಪಥದಲ್ಲಿರುವಾಗ 'ಟಪ್' ಎಂಬ ಆಪ್ಯಾಯಮಾನವಾದ ಶಬ್ದ ಕೇಳಿಬರುತ್ತದೆ. ಕಾಂಪೌಂಡ್ ಗೇಟಿನ ಬಳಿ ವಾರ್ತಾ ಪತ್ರಿಕೆ ಲ್ಯಾಂಡ್ ಆಗಿ ನಾನು ಬಂದಿದ್ದೇನೆ ಎಂದು ಸಾರಿ ಹೇಳುತ್ತಿದೆ. ಕೆಲವೊಮ್ಮೆ ಅದು ಗಿಡಗಳ ಮೇಲೆ ಬಿದ್ದಾಗ ಹೂವನ್ನು ಕೀಳುವಷ್ಟೇ ನಯವಾಗಿ ತೆಗೆದುಕೊಳ್ಳುತ್ತೇನೆ. ಬಿಸಿ ಬಿಸಿ ಕಾಫಿ, ಬಿಸಿ ಬಿಸಿ ಸುದ್ದಿ, ಸ್ವಾರಸ್ಯಗಳು. ಮೇಡ್ ಫಾರ್ ಈಚ್ ಅದರ್. ದಿನದ ಶುಭಾರಂಭ. ವಾರ್ತಾ ಪತ್ರಿಕೆ ಇಲ್ಲದ ದಿನಗಳು ಎಷ್ಟು ನೀರಸ ಹಾಗೂ ಶೂನ್ಯ ಅನ್ನಿಸುತ್ತೆ.

ದಿನಂಪ್ರತಿ ಪ್ರಾಂತ್ಯದಿಂದ ಅಂತರರಾಷ್ಟ್ರಗಳವರೆಗಿನ ಸುದ್ದಿ, ಸ್ವಾರಸ್ಯಗಳು. ರಾಜಕೀಯ, ಉದ್ಯೋಗ, ವಾಣಿಜ್ಯ, ವಿಜ್ಞಾನ, ಆಸ್ತಿ, ಹಣಕಾಸು, ಕ್ರೀಡೆ, ಕಾನೂನು, ಮನರಂಜನೆ ಹೀಗೆ ಹಲವಾರು ಕ್ಷೇತ್ರಗಳ ಬಗ್ಗೆ ವರದಿ, ಮಾಹಿತಿ ಹಾಗೂ ತಿಳುವಳಿಕೆಗಳನ್ನು ಬಡಿಸುತ್ತಲೇ ಬಂದಿದೆ. ಇವಲ್ಲದೆ, ಉತ್ತಮ ಗುಣಮಟ್ಟದ ಸಂಪಾದಕೀಯ, ಪರಿಣಿತರಿಂದ, ಆಲೋಚನೆಗಳನ್ನು ಕಲಕುವ, ಮನಸ್ಸನ್ನು ಮುಟ್ಟುವ ಅನಿಸಿಕೆಗಳು, ಅಭಿಪ್ರಾಯಗಳು, ಲೇಖನಗಳು, ವಿಶ್ಲೇಷನೆಗಳು ಹಾಗೂ ಸಂದರ್ಶನಗಳು ಕೂಡ. ಇದು ವಾರ್ತಾ ಪತ್ರಿಕೆಯ ಪ್ರೌಢ ಹಾಗು ಗಂಭೀರವಾದ ಮುಖವಾದರೆ ಇನ್ನೊಂದು, ಲಘು ಹಾಗೂ ಉಪಯುಕ್ತ:

ಕಪಾಟು, ಡ್ರಾಯರಗಳಲ್ಲಿ ಹರಡಿ ನಮ್ಮ ವಸ್ತುಗಳನ್ನು ಧೂಳು, ಕೊಳೆಗಳ ಸಂಕಷ್ಟದಿಂದ ಪಾರುಮಾಡುತ್ತದೆ.

ರಸ್ತೆಯಲ್ಲಿ ನಡೆಯುತ್ತಿರುವಾಗ ಸೂರ್ಯನ ತೀಕ್ಷ್ಣಕಿರಣಗಳಿಂದ ರಕ್ಷೆ, ಜೊತೆಗೆ ಬೀಸಣಿಗೆಯಾಗಿ ಸುದ್ದಿ, ಸ್ವಾರಸ್ಯಗಳನ್ನೊಳಗೊಂಡ ಗಾಳಿಯಿಂದ ಸಿಂಚನ! ಹಾಗೂ ಎದುರು ಬರುತ್ತಿರುವ ಪಿಟೀಲ್ ಪಾಟೀಲರ ದೃಷ್ಟಿ ನಮ್ಮ ಮೇಲೆ ಬೀಳದ ಹಾಗೆ ಮರೆಮಾಚುವ ಕೌಶಲ್ಯ!

ಮನೆ ಬದಲಾಯಿಸುತ್ತಿರುವ ಸಮಯದಲ್ಲಿ ನಮ್ಮ ಅನೇಕಾನೇಕ ವಸ್ತುಗಳನ್ನು ಉದಾರವಾಗಿ ಆಲಂಗಿಸಿ ಸುರಕ್ಷತೆ ನೀಡಿ ಅವುಗಳು ಡ್ಯಾಮೇಜ್ ಆಗುವುದನ್ನು ತಪ್ಪಿಸುತ್ತೆ.

ಧೂಳು ಸಹಿತ ಪಾರ್ಕ್ ಬೆಂಚಿನ ಹಾಗೂ ನಮ್ಮ ಹಿಂಬದಿಯ ಮಧ್ಯೆ ಹೆಣಗಾಡುವುದಲ್ಲದೇ ಚುರುಮುರಿ, ಟೈಂಪಾಸ್‌ಗಳ 'ಹೋಲ್ಡರ್'ಆಗಿ ನಮ್ಮ ಕೈಯಲ್ಲಿ ರಾರಾಜಿಸುತ್ತದೆ.

ಅನ್‌ರಿಸರ್ವ್ಡ್ ಬೋಗಿಗಳ ಕೊಳಕು ನೆಲದ ಮೇಲೆ ಹರಡಿ ಪ್ರಯಾಣಿಕರಿಗೆ ಕೊಳೆ ತಾಗದ ಹಾಗೆ ಸಹಾಯ ಮಾಡುತ್ತೆ. ನಾವು ಸೀಟನ್ನು ಬಿಟ್ಟು ಹೋಗಬೇಕಾದ ಸಂದರ್ಭದಲ್ಲಿ ನಾವು ಹಿಂತಿರುಗುವವರೆಗೆ ಅದನ್ನು ಕಾದಿರಿಸುತ್ತೆ.

ಸಮಚಿಂತನೆಯ ಕೆಲವು ದಿನಗಳ ವಾರ್ತಾ ಪತ್ರಿಕೆಗಳು ಒಟ್ಟುಗೂಡಿ ಸೂರಿಲ್ಲದವರಿಗೆ ಚಾಪೆಯಾಗುತ್ತೆ.

ಕಾಲಿನ ಹತ್ತಿರ ದಿಢೀರನೆ ಜಿರಳೆ ಕಾಣಿಸಿಕೊಂಡಾಗ ತಾವರೆ ಹೂವಿನಂತೆ ಅರಳಿದ್ದ ವಾರ್ತಾ ಪತ್ರಿಕೆ ಕ್ಷಣಾರ್ಧದಲ್ಲಿ ಸುರುಳಿ ಸುತ್ತಿಕೊಂಡು ಮಾರಕ ಶಸ್ತ್ರವಾಗಿ ಜಿರಳೆಯ ಮೇಲೆ ಆಕ್ರಮಣ. ಜಿರಳೆಗೆ ಮೋಕ್ಷ, ನಮಗೆ ಜಿರಳೆಯಿಂದ ಮುಕ್ತಿ!

ಕುರ್ಚಿ, ಮೇಜು ಕುಂಟುತ್ತಿದೆಯೇ? ಬೀರುವಿನ ಬಾಗಿಲು ಬಿಗಿಯಾಗಿ ಮುಚ್ಚಿಕೊಳ್ಳುತ್ತಿಲ್ಲವೇ? ವಾರ್ತಾ ಪತ್ರಿಕೆಯ ತುಂಡುಗಳು ಸೂಕ್ತ ಆಕಾರದಲ್ಲಿ 'ಬೆಣೆ'ಆಗಿ ತಾತ್ಕಾಲಿಕ ಪರಿಹಾರ ನೀಡುತ್ತದೆ.

ರೈಲಿನಲ್ಲಿ ಪತ್ರಿಕೆ ಓದುತ್ತಿರುವಾಗ ಅಕ್ಕಪಕ್ಕದವರೂ ಕತ್ತು ಚಾಚಿ ಓದುವಾಗ ಹಂಚಿಕೊಂಡು ಓದುವ ಖುಷಿ, ಕೆಲವುಕ್ಷಣಗಳು ಇದ್ದು ಹಾದು ಹೋದ ಮುಜುಗರವನ್ನು ಮರೆಸುತ್ತಲ್ಲವೇ?

ತಿಂಗಳ ಕೊನೆಯಲ್ಲಿ ಸಾಸುವೆ ಡಬ್ಬದ ಪುಡಿಗಾಸು ಕೂಡ ಖಾಲಿಯಾಗಿರುವ ಸಂದರ್ಭದಲ್ಲಿ ಶೇಖರಿಸಲ್ಪಟ್ಟಿದ್ದ ವಾರ್ತಾ ಪತ್ರಿಕೆಗಳು ರದ್ದಿಯವನ ಕೈಸೇರಿ ಅಳಿಲು ಸೇವೆ ನೀಡುತ್ತಲ್ಲವೇ?

ವಾರ್ತಾ ಪತ್ರಿಕೆಯನ್ನು ರದ್ದಿಯವನ ತಕ್ಕಡಿಗೆ ಹಾಕುವಾಗ 'ಎಮ್ಮಮನೆಯಂಗಳದಿ...' ಗೀತೆಯೋ ಅಥವಾ 'ಬಿಟ್ಟೋೋಗ್ಬೇಡಾ...' ಗೀತೆಯೋ ನೆನಪಿಗೆ ಬರುತ್ತೆ ಎಂದರೆ ಉತ್ಪ್ರೇಕ್ಷೆ ಆಗುತ್ತಾ?

ರದ್ದಿಯವನ ಕೈ ಸೇರಿದ ಮಾತ್ರಕ್ಕೆ ಅದು ನಮ್ಮಿಂದ ದೂರವಾಯಿತೆಂದು ಭಾವಿಸದಿರಿ. ತವರನ್ನು ಬಿಟ್ಟಿರಲಾಗುವುದಿಲ್ಲವೆನ್ನಿಸುತ್ತೆ. ಬೇರೆ ಬೇರೆ ಅವತಾರ, ಸಂದರ್ಭಗಳಲ್ಲಿ ವಾಪಸ್ಸಾಗುತ್ತೆ! ಮುದ್ದು! :

ಗುಡಿಯಿಂದ ವಾಪಾಸ್ಸಾಗುವಾಗ ವಿಭೂತಿ, ಕುಂಕುಮಗಳ, ಶೆಟ್ಟಿ ಅಂಗಡಿಯಿಂದ ಅಕ್ಕಿ, ಬೇಳೆ ಮತ್ತೆಲ್ಲ, ಔಷಧಿ ಅಂಗಡಿಯಿಂದ ಸಿರಪ್ ಮತ್ತು ಮಾತ್ರೆಗಳನ್ನು ತರುವ ಪೊಟ್ಟಣಗಳಾಗುತ್ತದೆ. ಅಷ್ಟೇ ಏಕೆ ಧೋಬಿಯಿಂದ ಇಸ್ತ್ರಿ ಮಾಡಿದ ಬಟ್ಟೆಗಳೂ ಇದರ ಹೊದಿಕೆಯಲ್ಲೇ ಅಲ್ಲವೇ ಬರುವುದು?

ಬಾಲ್ಯದ ದಿನಗಳಲ್ಲಿ ವಾರ್ತಾ ಪತ್ರಿಕೆಯ ತುಂಡುಗಳನ್ನುಪಯೋಗಿಸಿ ಮಾಡುತ್ತಿದ್ದ ದೋಣಿ, ಜೋಡಿ ದೋಣಿ, ಕತ್ತಿ ದೋಣಿ, ಏರೋಪ್ಲೇನ್, ದೊನ್ನೆ ಹೀಗೆ ಹತ್ತಾರು ಹಲವಾರು ಕೃತಿಗಳು ನೆನಪಿಗೆ ಬಂದು ಮನಸ್ಸಿಗೆ ಮುದ ಕೊಡುತ್ತೆ. ನಮ್ಮ ಕ್ರಿಯಾಶೀಲತೆಯಲ್ಲಿ ಸಮಭಾಗಿ. ಪ್ರತಿ ವರ್ಷ ಹೊಸ ಪಠ್ಯ, ನೋಟ್ ಬುಕ್‌ಗಳನ್ನು ಕೊಂಡಾಗ ಅವುಗಳಿಗೆ ರಕ್ಷಾಕವಚವಾಗಿ ಶೋಭಿಸುತ್ತಿತ್ತಲ್ಲವೇ?

ಬಿರುಸು ದೈಹಿಕ ಚಟುವಟಿಕೆಗಳಿಂದ ವಿಮುಕ್ತರಾಗಿಯೋ ಅಥವಾ ವಂಚಿತರಾಗಿಯೋ ಇರುವ ನಮ್ಮ ಜೀವನದ ಮುಸ್ಸಂಜೆಯಲಿ ನಮ್ಮ ಸುಧೀರ್ಘ ಸಮಯವನ್ನು ಸಲೀಸಾಗಿ ಹಾಗೂ ಉಪಯುಕ್ತವಾಗಿ ಕಳೆಯಲು ನೆರವಾಗುವ ವಾರ್ತಾ ಪತ್ರಿಕೆಗೆ ಧನ್ಯವಾದಗಳು.

ಇದು ವಾರ್ತಾ ಪತ್ರಿಕೆ ಅಲ್ಲ, ಪೂರ್ತಾ ಪತ್ರಕೆ! ■